# ಶ್ರೀ
# ದುರ್ಗಾ ಸ್ಮೃತಿ

## ಬ್ರಹ್ಮ ಕಲಶೋತ್ಸವ ಸ್ಮರಣ ಸಂಚಿಕೆ



ಚಕ್ರ ಶಂಖ ತ್ರಿಶೂಲೇಖ್ಯ ಲಾಂಗೂಲಾಡ್ಯ ಕರಾಂ ಭಜೇ।
ಮುಂಡ್ಕೂರು ಕ್ಷೇತ್ರ ಸಂಸ್ಥಾಂತಾಂ ಮಹಿಷಾಸುರ ಮರ್ದಿನೀಂ॥

ಶ್ರೀ ದುರ್ಗಾ ಪರಮೇಶ್ವರೀ ದೇವಸ್ಥಾನ, ಮುಂಡ್ಕೂರು

>>>>>>>>>>>>>>>>>>>>>>>>>>>>>

With Best
Compliments
From

* * *
* *
*

PRAKASH
TRADERS

Bangalore - 560 025

# ದುರ್ಗಾ ಸ್ಮೃತಿ

## ಬ್ರಹ್ಮಕಲಶೋತ್ಸವ ಸ್ಮರಣ ಸಂಚಿಕೆ



ಪ್ರಧಾನ ಸಂಪಾದಕರು

ಬಿ. ಮಂಜುನಾಥ ಹೆಗ್ಡೆ

**ಅಷ್ಟಬಂಧ-ಬ್ರಹ್ಮ ಕಲಶೋತ್ಸವ**

**12-2-1993**

ಶ್ರೀ ದುರ್ಗಾ ಪರಮೇಶ್ವರೀ ದೇವಸ್ಥಾನ

ಮುಂಡ್ಕೂರು - 576 121

ಕಾರ್ಕಳ ತಾಲೂಕು, ದ.ಕ.

# ಸ್ಮರಣ ಸಂಚಿಕೆ ಸಮಿತಿ

| | | |
|---|---|---|
| ಅಧ್ಯಕ್ಷರು | : | ಶ್ರೀ ನಡಿಗುತ್ತು ಯಂ. ಜಗದೀಶ್ಚಂದ್ರ ಹೆಗ್ಡೆ |
| ಉಪಾಧ್ಯಕ್ಷರು | : | ಶ್ರೀ ವಿನಯ ಕುಮಾರ್ ಶೆಟ್ಟಿ |
| ಪ್ರಧಾನ ಸಂಪಾದಕ | : | ಶ್ರೀ ಬಿ. ಮಂಜುನಾಥ ಹೆಗ್ಡೆ |
| ಉಪಸಂಪಾದಕರು | : | ಶ್ರೀ ಬಿ. ಜನಾರ್ದನ ಭಟ್ |
| | | ಶ್ರೀ ಯಂ. ನಾರಾಯಣ ಸಪಳಿಗ M.A. |
| ಗೌರವ ಸಲಹೆಗಾರರು | : | ಶ್ರೀ ವೇದಮೂರ್ತಿ ಜಯರಾಮ ಆಚಾರ್ಯ |
| ಸದಸ್ಯರು | : | ಶ್ರೀ ವಿಶ್ವನಾಥ ಕಾಮತ್ ಯಂ. |
| | | ಶ್ರೀ ದೊಂಬ ಶೆಟ್ಟಿಗಾರ್ |
| | | ಶ್ರೀ ಉದಯ ಕುಮಾರ್ ಹಬ್ಬು |
| | | ಶ್ರೀ ತಿರುಮಲ ಶರ್ಮ |
| | | ಶ್ರೀ ರಾಮದಾಸ ಆಚಾರ್ಯ |



| | | |
|---|---|---|
| ಛಾಯಾಚಿತ್ರಗಳು | : | ಮುಂಡ್ಕೂರು ಫೊಟೋ ಸ್ಟುಡಿಯೊ, ಮುಂಡ್ಕೂರು |
| ಮುದ್ರಕರು | : | ಸುರೇಶ್ ಪ್ರಿಂಟಿಂಗ್ ಪ್ರೆಸ್ |
| | | ಬೆಳ್ಮಣ್ - 576 111, ದ.ಕ. |

ಡಿ. ವೀರೇಂದ್ರ ಹೆಗ್ಗಡೆಯವರು
ಧರ್ಮಸ್ಥಳ - 574 216
ಕರ್ನಾಟಕ.

ದೂರವಾಣಿ: ಕಛೇರಿ: 21
ನಿವಾಸ: 22

ದಿನಾಂಕ: 7-2-1993



ಅಧ್ಯಕ್ಷರು
ಬ್ರಹ್ಮಕಲಶೋತ್ಸವ ಸ್ಮರಣ ಸಂಚಿಕೆ ಸಮಿತಿ,
ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ,
ಮುಂಡ್ಕೂರು - 576 121. ದ.ಕ.

## ಸಂದೇಶ

ಮುಂಡ್ಕೂರು ಶ್ರೀ ದುರ್ಗಾದೇವಿ ದೇವಸ್ಥಾನದ ಬ್ರಹ್ಮಕಲಶೋತ್ಸವದ ಸವಿನೆನಪಿಗಾಗಿ 'ಸ್ಮರಣ ಸಂಚಿಕೆ'ಯೊಂದನ್ನು ಪ್ರಕಟಿಸಲಿರುವ ವಿಚಾರ ತಿಳಿದು ಸಂತೋಷವಾಯಿತು. ಈ ನಿಮ್ಮ ಉತ್ತಮ ಕಾರ್ಯಕ್ಕೆ ಅಭಿನಂದಿಸುತ್ತಾ, ಸಹೃದಯ ಸಾರ್ವಜನಿಕರ ಸಹಾಯ-ಸಹಕಾರದೊಂದಿಗೆ ಎಲ್ಲ ಕಾರ್ಯಕ್ರಮಗಳು ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ನಿಮ್ಮ ಕ್ಷೇತ್ರದ ಸವಿವರ ಮಾಹಿತಿಯನ್ನು ನೀಡಬಲ್ಲ ವಿವಿಧ ಉತ್ತಮ ವಿಚಾರಪೂರ್ಣ ಧಾರ್ಮಿಕ ಲೇಖನಗಳಿಂದೊಡಗೂಡಿ ಸಂಚಿಕೆಯು ಸರ್ವಾಂಗ ಸುಂದರವಾಗಿ ಪ್ರಕಟವಾಗಲೆಂದು ಆಶಿಸುತ್ತೇನೆ.

ಈ ದಿಸೆಯಲ್ಲಿ ನಿಮ್ಮೆಲ್ಲ ಪ್ರಯತ್ನ, ಪರಿಶ್ರಮ ಸಫಲವಾಗುವಂತೆ ಶ್ರೀ ಮಂಜುನಾಥ ಸ್ವಾಮಿ ಹರಸಲೆಂದು ಪ್ರಾರ್ಥಿಸುತ್ತೇನೆ.

ಇತಿ,

(ಡಿ. ವೀರೇಂದ್ರ ಹೆಗ್ಗಡೆಯವರು)

ಜೆ.ವಿ.ಶೆಟ್ಟಿ,
ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು
ಪ್ರಧಾನ ಕಛೇರಿ, ಬೆಂಗಳೂರು - 560 002



## ಸಂದೇಶ

ಕರ್ನಾಟಕ ರಾಜ್ಯದ ಸಮೃದ್ಧವಾದ ದಕ್ಷಿಣ ಕನ್ನಡ ಜಿಲ್ಲೆಯ ಮುಂಡ್ಕೂರಿನಲ್ಲಿರುವ, ಪಾವಿತ್ರ್ಯತೆ ಮತ್ತು ಪ್ರಸಿದ್ಧಿಯ ದಿವ್ಯ ಸಂಕೇತವಾದ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನವು ಸುಮಾರು ಒಂದು ಸಾವಿರ ವರುಷಗಳಿಗಿಂತಲೂ ಹೆಚ್ಚು ಪ್ರಾಚೀನವಾಗಿರುವುದು ನಮಗೆಲ್ಲಾ ಹೆಮ್ಮೆಯ ವಿಷಯ ವೆನಿಸಿದೆ.

ಈ ಪ್ರಾಚೀನ ದೇವಾಲಯವು ಈ ಆಂಗೀರಸ ಸಂವತ್ಸರದಲ್ಲಿ ಕೈಗೊಂಡ ಪವಿತ್ರ ಜೀರ್ಣೋದ್ಧಾರದ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದು ಭಕ್ತಾಭಿಮಾನಿಗಳ ಆದ್ಯ ಕರ್ತವ್ಯವಾಗಿದೆ.

ಶ್ರೀ ದುರ್ಗಾಪರಮೇಶ್ವರೀ ದೇವಿಯ ಅಷ್ಟಬಂಧ ಬ್ರಹ್ಮ ಕಲಶೋತ್ಸವದ ಈ ಶುಭ ಸಂದರ್ಭದಲ್ಲಿ ಜರಗಲಿರುವ ಎಲ್ಲಾ ಕಾರ್ಯಕ್ರಮಗಳೂ ವಿಜೃಂಭಣೆಯಿಂದ ನಡೆದು ಯಶಸ್ವಿಯಾಗಲಿ ಎಂದು ಭಕ್ತಿ ಪೂರ್ವಕವಾಗಿ ಹಾರೈಸುತ್ತೇನೆ.

ಈ ಪರಮ ಪವಿತ್ರ ಕಾರ್ಯದಲ್ಲಿ ಅನನ್ಯವಾಗಿ ಪಾಲ್ಗೊಂಡು ತನುಮನಧನಗಳಿಂದ ಸೇವೆಗೈದ ಎಲ್ಲಾ ಮಹನೀಯರು ಮಹಾಮಾತೆಯಾದ ಶ್ರೀ ದುರ್ಗಾಪರಮೇಶ್ವರಿಯ ಅನುಗ್ರಹಕ್ಕೆ ಪಾತ್ರರಾಗಲಿ ಎಂದು ಆಶಿಸುತ್ತೇನೆ.

ಬೆಂಗಳೂರು
10-02-1993

ಜೆ.ವಿ. ಶೆಟ್ಟಿ
ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು,
ಕೆನರಾ ಬ್ಯಾಂಕ್,
ಪ್ರಧಾನ ಕಛೇರಿ,
ಬೆಂಗಳೂರು - 560 002.




**ಎಂ. ವೀರಪ್ಪ ಮೊಯಿಲಿ,**
ಮುಖ್ಯ ಮಂತ್ರಿಗಳು,
ವಿಧಾನ ಸೌಧ,
ಬೆಂಗಳೂರು.


## ಸಂದೇಶ

ಕಾರ್ಕಳ ತಾಲೂಕಿನ ಪ್ರಮುಖ ದೇವಾಲಯಗಳಲ್ಲಿ ಒಂದಾದ ಮುಂಡ್ಕೂರು ಶ್ರೀದುರ್ಗಾಪರಮೇಶ್ವರೀ ದೇವಸ್ಥಾನ, ದಿನೇ ದಿನೇ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದ್ದು ಇತ್ತೀಚೆಗೆ ಗರ್ಭಗೃಹ ಜೀರ್ಣೋದ್ಧಾರ ಪೂರ್ವಕ ಅಷ್ಟಬಂಧ ಬ್ರಹ್ಮಕಲಶೋತ್ಸವ, ರಥೋತ್ಸವ ಇತ್ಯಾದಿ ಕಾರ್ಯಕ್ರಮಗಳು ಸಾಂಗೋಪಾಂಗವಾಗಿ ಜರಗಿರುವುದು ತುಂಬಾ ಸಂತೋಷದ ವಿಚಾರ. ಶ್ರೀದೇವಿಯು ಭಕ್ತಾಭಿಮಾನಿಗಳ ಮನಸ್ಸಿನ ಅಪೇಕ್ಷೆಗಳನ್ನು ನೆರವೇರಿಸಲಿ ಹಾಗೂ ಸ್ಮರಣ ಸಂಚಿಕೆ ಕಾರ್ಯಕ್ರಮಕ್ಕೆ ದೇವತಾನುಗ್ರಹ ಒದಗಿ ಬಂದು ಭಕ್ತಾಭಿಮಾನಿಗಳಿಗೆ ಕ್ಷೇತ್ರ ಪರಿಚಯವಾಗಲಿ ಎಂದು ಪ್ರಾರ್ಥಿಸುತ್ತೇನೆ. ಇನ್ನು ಮುಂದಕ್ಕೂ ಇದೇ ರೀತಿ ಉತ್ತಮ ಧಾರ್ಮಿಕ ಕಾರ್ಯಕ್ರಮಗಳು ಆಗಾಗ್ಗೆ ನೆರವೇರಲಿ ಎಂದೂ ಪ್ರಾರ್ಥಿಸುತ್ತೇನೆ.

ನಿಮ್ಮ ವಿಶ್ವಾಸಿ,

ವೀರಪ್ಪ ಮೊಯಿಲಿ

ಎಸ್. ಬಂಗಾರಪ್ಪ

ನಂ.190 ಸ್ಯಾಂಕಿ ರಸ್ತೆ,
ಸದಾಶಿವನಗರ,
ಬೆಂಗಳೂರು-560 080.

23ನೇ ಫೆಬ್ರುವರಿ 1993

## : ಸಂದೇಶ :

ದಕ್ಷಿಣ ಕನ್ನಡ ಜಿಲ್ಲೆ ಕಾರ್ಕಳ ತಾಲ್ಲೂಕಿನ ಮುಂಡ್ಕೂರು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಗರ್ಭಗುಡಿಯ ನವೀಕರಣದೊಂದಿಗೆ 1993ನೇ ಫೆಬ್ರುವರಿ ತಿಂಗಳಲ್ಲಿ ರಥೋತ್ಸವದ ಸಮಯದಲ್ಲಿ ಅಷ್ಟಬಂಧ ಬ್ರಹ್ಮಕಲಶೋತ್ಸವವನ್ನು ಜರಗಿಸಲಾಗುವುದೆಂದು ತಿಳಿದು ಸಂತೋಷವಾಯಿತು. ಈ ಬ್ರಹ್ಮಕಲಶೋತ್ಸವವು ನಡೆಯುವ ದಿನಗಳಲ್ಲಿ ಭಕ್ತಾದಿಗಳನ್ನು ಶ್ರೀ ದುರ್ಗಾ ಪರಮೇಶ್ವರಿಯ ಕೃಪಾ ಕಟಾಕ್ಷಕ್ಕೆ ಒಳಪಡಿಸಿದ ದೃಷ್ಟಿಯಿಂದ ದಿನ ನಿತ್ಯ ವಿವಿಧ ಪೂಜೆ ಪುನಸ್ಕಾರಗಳನ್ನು ಏರ್ಪಡಿಸಿರುವುದು ಸೂಕ್ತ ಹಾಗೂ ಆನಂದದಾಯಕವಾಗಿದೆ. ಈ ಅಷ್ಟಬಂಧ ಬ್ರಹ್ಮಕಲಶೋತ್ಸವದಲ್ಲಿ ಭಾಗವಹಿಸುವ ಎಲ್ಲಾ ಭಕ್ತಾದಿಗಳಿಗೆ ಶ್ರೀ ದುರ್ಗಾಪರಮೇಶ್ವರಿಯ ಕೃಪೆ ಇರಲೆಂದು ಹಾರೈಸುತ್ತಾ ದೇವಸ್ಥಾನದ ಜೀರ್ಣೋದ್ಧಾರದಲ್ಲಿ ಸಾರ್ವಜನಿಕರು ತನುಮನ ಧನಗಳಿಂದ ಸಹಕರಿಸಲೆಂದು ಆಶಿಸುತ್ತೇನೆ.

ದೇವಸ್ಥಾನಕ್ಕೆ ಸಂಬಂಧಪಟ್ಟಂತೆ ಎಲ್ಲಾ ಕಾರ್ಯಕಲಾಪಗಳು ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಎಸ್. ಬಂಗಾರಪ್ಪ

ಶ್ರೀ ಯಂ. ಜಗದೀಶ್ಚಂದ್ರ ಹೆಗ್ಡೆ,
ಆಡಳಿತ ಮೊಕ್ತೇಸರರು,
ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ,
ಮುಂಡ್ಕೂರು,
ಕಾರ್ಕಳ ತಾಲ್ಲೂಕು,
ದಕ್ಷಿಣ ಕನ್ನಡ ಜಿಲ್ಲೆ.

**ರಾಮಕೃಷ್ಣ ಹೆಗಡೆ**

**'ಕೃತ್ತಿಕಾ'**
**ಬೆಂಗಳೂರು-560 080**
**15-2-1993**

ಮಾನ್ಯ ಜಗದೀಶ್ಚಂದ್ರ ಹೆಗ್ಡೆಯವರೆ,

ದಿನಾಂಕ 17-2-1993ನೇ ಬುಧವಾರ ನಡೆಯಲಿರುವ ಶ್ರೀ ದುರ್ಗಾಪರಮೇಶ್ವರೀ ದೇವಿಯವರ ಬ್ರಹ್ಮರಥೋತ್ಸವದ ಆಮಂತ್ರಣಕ್ಕಾಗಿ ಧನ್ಯವಾದಗಳು. ಆದಿನ ನಾನು ಪ್ರವಾಸದಲ್ಲಿರುವುದರಿಂದ ಈ ಶುಭ ದೇವತಾಕಾರ್ಯ ಸಮಾರಂಭದಲ್ಲಿ ಭಾಗವಹಿಸಲು ಸಾಧ್ಯವಾಗುತ್ತಿಲ್ಲ. ಅದಕ್ಕಾಗಿ ಖೇದವೆನಿಸುತ್ತದೆ. ಶ್ರೀ ದುರ್ಗಾಪರಮೇಶ್ವರೀ ದೇವಿಯವರ ಬ್ರಹ್ಮರಥೋತ್ಸವ ವಿಜೃಂಭಣೆಯಿಂದ ನೆರವೇರಲಿ ಹಾಗೂ ಭಕ್ತಜನರ ಸಕಲಾಭಿಷ್ಟಗಳು ನೆರವೇರುವಲ್ಲಿ ಶ್ರೀ ದೇವಿಯ ಕೃಪೆಯಿರಲಿ ಎಂದು ಪ್ರಾರ್ಥಿಸುತ್ತೇನೆ.

ಶುಭಾಶಯಗಳೊಡನೆ,

ನಿಮ್ಮ ವಿಶ್ವಾಸಿ,

**ರಾಮಕೃಷ್ಣ ಹೆಗಡೆ**

ಶ್ರೀ ಯಂ. ಜಗದೀಶ್ಚಂದ್ರ ಹೆಗ್ಡೆ,
ಆಡಳಿತ ಮೊಕ್ತೇಸರರು,
ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ,
ಅಂಚೆ: ಮುಂಡ್ಕೂರು-576121,
ಕಾರ್ಕಳ ತಾಲೂಕು,
ದಕ್ಷಿಣ ಕನ್ನಡ ಜಿಲ್ಲೆ.



**ಮನೋರಮ ಮಧ್ವರಾಜ್,**
ಆಹಾರ ಮತ್ತು ನಾಗರೀಕ ಪೂರೈಕೆ ಮಂತ್ರಿಗಳು,
ವಿಧಾನಸೌಧ,
ಬೆಂಗಳೂರು.

ಮಾನ್ಯರೆ,

ದಕ್ಷಿಣ ಕನ್ನಡ ಜಿಲ್ಲೆ ಕಾರ್ಕಳ ತಾಲ್ಲೂಕು, ಮುಂಡ್ಕೂರು ಗ್ರಾಮದಲ್ಲಿರುವ ಶ್ರೀದುರ್ಗಾಪರಮೇಶ್ವರಿ ದೇವಸ್ಥಾನದ ಜೀರ್ಣೋದ್ಧಾರ, ಅಷ್ಟಬಂಧ, ಬ್ರಹ್ಮಕಲಶೋತ್ಸವ, ರಥೋತ್ಸವ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಇವೆಲ್ಲವನ್ನೂ ಅತ್ಯಂತ ವಿಜೃಂಭಣೆಯಿಂದ ಆಚರಿಸಿರುವುದು ನಿಜಕ್ಕೂ ಸಂತೋಷದಾಯಕ ವಿಚಾರ. ಗ್ರಾಮಾಂತರ ಪ್ರದೇಶಗಳಲ್ಲಿ ಶಿಥಿಲಾವಸ್ಥೆಯಲ್ಲಿರುವ ಗುಡಿ-ಗೋಪುರಗಳ ಜೀರ್ಣೋದ್ಧಾರ ಅತ್ಯಗತ್ಯವಾಗಿ ಆಗಬೇಕಾದ ಕೆಲಸ. ಏಕೆಂದರೆ ಇವುಗಳು ಅತ್ಯಂತ ಪುರಾತನವೂ, ಮಹಿಮೆ ಹಾಗೂ ವಿಶೇಷವಾದ ಶಕ್ತಿಯನ್ನು ಹೊಂದಿರುವಂತಹುದೂ ಆಗಿರುತ್ತದೆ. ಈ ಒಂದು ಉತ್ತಮ ಕೆಲಸವನ್ನು ನೀವುಗಳು ಮಾಡುತ್ತಿರುವುದು ನಿಜಕ್ಕೂ ಸ್ತುತ್ಯಾರ್ಹ. ಈ ಶುಭ ಸಂದರ್ಭದಲ್ಲಿ ಸ್ಮರಣ ಸಂಚಿಕೆಯೊಂದನ್ನು ನೀವುಗಳು ಹೊರತರಲಿರುವುದು ಸಮಂಜಸವಾಗಿದೆ.

ತಾಯಿ ದುರ್ಗಾಪರಮೇಶ್ವರಿಯು ತಮಗೆಲ್ಲಾ ಶುಭವನ್ನು ಹಾಗೂ ಸುಖ ಮತ್ತು ಶಾಂತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸುತ್ತೇನೆ.

ವಂದನೆಗಳೊಡನೆ,

ತಮ್ಮ ವಿಶ್ವಾಸಿ,
**ಮನೋರಮ ಮಧ್ವರಾಜ್**

ಭಾರ್ಗವ ಉವಾಚ :

ಜನಾಃ ಶೃಣಿತಮೇ ವಾಕ್ಯಂ ಸರ್ವೇಷಾಂವಃ ಸುಖಾವಹಾಮ್ |
ದೈತ್ಯ ದಾನವ ಘಾತಾಯ ದೇವೀ ಸಂಸ್ಥಾಪಿತಾಮಯಾ ||
ಸೇವ್ಯಾ ಭಗವತೀ ದೇವಿ ಮುಂಡಘ್ನೆ ನಗರೋತ್ತಮೇ |
ಭವತಾಂ ಚ ಮನೋಭೀಷ್ಟ ಕರಿಷ್ಯತಿ ಶುಭಪ್ರದಾ ||

ಭಾರ್ಗವರು ಹೇಳಿದರು:

ಎಲ್ಲರೂ ಸುಖಿಗಳಾಗಿ ಬಾಳುವಂತಹ ನನ್ನ ಮಾತನ್ನು ಜನರು ಕೇಳಲಿ.

ದೈತ್ಯರು-ರಾಕ್ಷಸರ ಸಂಹಾರಿಣಿ ದೇವಿ ನನ್ನಿಂದ ಇಲ್ಲಿ ಸ್ಥಾಪಿಸಲ್ಪಟ್ಟಿದ್ದಾಳೆ. ಶ್ರೇಷ್ಠವಾದ ಮುಂಡ್ಕೂರು ನಗರದಲ್ಲಿ ದೇವಿ ದುರ್ಗೆ ಪೂಜಿಸಲ್ಪಡುತ್ತಿದ್ದಾಳೆ. ಆಕೆ ತಮ್ಮೆಲ್ಲರ ಮನದ ಇಷ್ಟಾರ್ಥಗಳನ್ನು ಮಂಗಲಕರವಾಗಿ ಈಡೇರಿಸಲಿರುವಳು.

# |ದೇವೀ ಸ್ತುತಿ|

ಸಂದಂಡ್ಯ ದುಷ್ಟಾನ್ ಪ್ರವಿತೋಷ್ಯ ಶಿಷ್ಟಾನ್
ಸಂರಕ್ಷ್ಯ ದೇಶಂ ಪರಿರಕ್ಷ್ಯ ಶಾಂತಿಂ |
ಮುಂಡ್ಕೂರು ದುರ್ಗಾಪರಮೇಶ್ವರೀಯಂ
ಪಾಯಾತ್‌ಸದಾ ಸೇವಕಧುರ್ಯಮೇನಂ ||

ಆರೋಗ್ಯ ಲಾಭಂ ಧನಧಾನ್ಯ ವೃದ್ಧಿಂ
ಕ್ಷೇಮಂ ಕಲತ್ರಾಪ್ತಸುತೇಷು ಚೈವಂ |
ಪ್ರದಾಯ ರಕ್ಷೇತ್ ಪರಮೇಶ್ವರೀಯಂ
ಮುಂಡ್ಕೂರು ದುರ್ಗಾ ವಿಜಯ ಪ್ರದೇಮಂ ||

ಸಾಣೂರು ಭೀಮಭಟ್ಟ
20-1-93

SRI ADMAR MUTT
Udupi - 576 101 D.K.
Karnataka

Phone: 20317

Date: 7.2.1993



## ಸಂದೇಶ

ದೇವಾಲಯಗಳು ಹಾಗೂ ವಿದ್ಯಾಲಯಗಳು ಊರಿಗೆ ಎರಡು ಕಣ್ಣುಗಳಿದ್ದಂತೆ. ಎಲ್ಲಾ ಅಂಗಗಳು ಚೆನ್ನಾಗಿದ್ದು ಕಣ್ಣೇ ಇಲ್ಲದಿದ್ದರೆ ಆ ಮನುಷ್ಯನ ಜೀವನದಲ್ಲಿ ಕತ್ತಲೆ ಆವರಿಸಬಹುದು. ಅದೇ ರೀತಿ ದೇವಾಲಯಗಳಿಲ್ಲದ ಗ್ರಾಮಕ್ಕೆ ಶೋಭೆ ಇಲ್ಲ. ಆದ್ದರಿಂದ ದೇವಾಲಯದ ಬಗ್ಗೆ ಊರಿನ ಪ್ರತಿಯೊಬ್ಬನೂ ಮುತುವರ್ಜಿ ವಹಿಸಬೇಕು. ಪ್ರತಿಬಿಂಬವು ಸುಂದರವಾಗಬೇಕಾದರೆ ಮುಖವನ್ನು ಅಲಂಕರಿಸುವಂತೆ ದೇವರನ್ನು ಉತ್ತಮವಾಗಿ ನೋಡಿಕೊಂಡರೆ ನಮ್ಮ ಸಮಾಜವೂ ಉತ್ತಮ ರೀತಿಯಲ್ಲಿ ಇರುವುದು.

ನಮ್ಮ ಪೂರ್ವಾಶ್ರಮದ ಊರಿನ ದೇವಾಸ್ಥಾನದ ಪರಿಸರವನ್ನು ಇನ್ನಾ-ಮುಂಡ್ಕೂರು ಭಕ್ತರು ಬಹಳ ಉತ್ತಮಗೊಳಿಸಿದ್ದಾರೆ. ಈ ದೇವಳದ ದುರ್ಗೆಯು ತಾನು ಬ್ರಹ್ಮಕಲಶದ ಸ್ನಾನಕ್ಕೆ ಅಣಿಯಾಗಿದ್ದಾಳೆ. ಈ ಕಾರ್ಯಕ್ರಮವು ನಿರ್ವಿಘ್ನವಾಗಿ ಜರಗಲಿ. ಊರಿಗೆ ಶ್ರೀದೇವಿಯು ಕ್ಷೇಮವನ್ನು ಒದಗಿಸಲಿ ಎಂದು ನಮ್ಮ ಆರಾಧ್ಯಮೂರ್ತಿ ಉಡುಪಿ ಶ್ರೀಕೃಷ್ಣನಲ್ಲಿ ಪ್ರಾರ್ಥಿಸುತ್ತೇವೆ.

ಇತ್ಯನೇಕ ಸಪ್ರೇಮ ನಾರಾಯಣ ಸ್ಮರಣೆಗಳು

ಶ್ರೀ ವಿಶ್ವಪ್ರಿಯ ತೀರ್ಥರು
ಶ್ರೀ ಅದಮಾರು ಮಠ
ಉಡುಪಿ

**H.H. Sri Vishwesha Thirtha Swamiji**
Sri Pejavara Adhokshaja Mutt
Jagadguru Sri Madhwacharya Samsthana
Udupi - 576 101 South Kanara
Phone: 32198

**ಶ್ರೀ ವಿಶ್ವೇಶತೀರ್ಥ ಸ್ವಾಮೀಜಿ**
ಶ್ರೀ ಪೇಜಾವರ ಅಧೋಕ್ಷಜ ಮಠ
ಜಗದ್ಗುರು ಶ್ರೀ ಮಧ್ವಾಚಾರ್ಯ ಸಂಸ್ಥಾನ
ಉಡುಪಿ



## ಶುಭ ಸಂದೇಶ

ಬ್ರಹ್ಮಕಲಶ ಮಹೋತ್ಸವಗಳು ದೇವಾಲಯಗಳಲ್ಲಿ ಅತಿಶಯವಾಗಿ ದೈವೀ-ಶಕ್ತಿಯನ್ನು ತುಂಬಲು ಕಾರಣವಾಗುವಂತೆ, ದೇವರ ಸೇವಾ ಕಾರ್ಯದಲ್ಲಿ ತಮ್ಮನ್ನು ಅರ್ಪಿಸಿಕೊಳ್ಳುವ ಸಂದರ್ಭವನ್ನು ಒದಗಿಸಿಕೊಟ್ಟು, ಸಮಾಜದಲ್ಲಿಯೂ ಚೈತನ್ಯ ಶಕ್ತಿಯನ್ನು ತುಂಬಬಲ್ಲದು.

ಹೀಗಾಗಿ ದೇವಾಲಯ ಮತ್ತು ಸಮಾಜ ಇವೆರಡರ ಅಭಿವೃದ್ಧಿ ಕಾರ್ಯದಲ್ಲಿ ಬ್ರಹ್ಮಕಲಶ ಸಮಾರಂಭದ ಪಾತ್ರವು ಮಹತ್ತರವಾಗಿದೆ. ಮುಂಡ್ಕೂರು ಶ್ರೀ ದುರ್ಗಾಪರಮೇಶ್ವರೀ ದೇಗುಲದ ಬ್ರಹ್ಮಕಲಶ ಮಹೋತ್ಸವವು ನಡೆಯಲಿರುವುದನ್ನು ತಿಳಿದು ನಮಗೆ ಅತ್ಯಂತ ಹರ್ಷವಾಗಿದೆ. ಈ ದೇವಾಸ್ಥಾನದ ಇತಿಹಾಸದಲ್ಲಿ ಈ ಸಮಾರಂಭವು ಒಂದು ಮೈಲುಗಲ್ಲಾಗಲಿ. ಈ ದೇವಾಲಯವು ಪ್ರವರ್ಧಮಾನವಾಗಲಿ ಎಂದು ಆಶಿಸುತ್ತೇವೆ.

ವಿಶ್ವೇಶತೀರ್ಥ ಶ್ರೀಪಾದಂಗಳವರು
ಪೇಜಾವರ ಮಠ,
ಉಡುಪಿ

ಬಿ. ಮಧ್ವರಾಯ ಭಟ್,
ಆಡಳಿತ ಮೊಕ್ತೇಸರರು,
ಶ್ರೀದುರ್ಗಾ ಪರಮೇಶ್ವರೀ ದೇವಸ್ಥಾನ,
ಬೆಳ್ಮಂಣು.

## ಸಂದೇಶ

ಮುಂಡ್ಕೂರು ಶ್ರೀ ದುರ್ಗಾಪರಮೇಶ್ವರೀ ಅಮ್ಮನವರ ಅಷ್ಟಬಂಧ ಬ್ರಹ್ಮ ಕಲಶಮಹೋತ್ಸವವು ವೇದೋಕ್ತ ಮತ್ತು ವಿಧ್ಯುಕ್ತವಾಗಿ ಜರಗಲಿರುವ ಈ ಶುಭ ಸಮಾರಂಭವು ಭಕ್ತ ಜನತೆಯ ಹೃದಯದಲ್ಲಿ ಚಿರಸ್ಥಾಯಿಯಾಗಿ ಉಳಿಯುವಂತೆ ತಾವುಗಳು ಸ್ಮರಣ ಸಂಚಿಕೆಯನ್ನು ಹೊರಡಿಸಲಿರುವುದಾಗಿ ತಿಳಿದು ಸಂತೋಷವಾಯಿತು.

ಈ ನಿಮ್ಮ ದೇವತಾಕಾರ್ಯಗಳಿಗೆ ಕ್ಷೇತ್ರಾಭಿಮಾನಿಯಾದ ಶ್ರೀ ದುರ್ಗಾಪರಮೇಶ್ವರೀಯು ಅನುಗ್ರಹವಿಟ್ಟು ನಡೆಸಲಿ, ಸರ್ವರೂ ಶ್ರೀ ದೇವಿಯ ಕಾರ್ಯಗಳಲ್ಲಿ ಭಾಗವಹಿಸಿ, ಶ್ರೀ ದೇವಿಯ ಅನುಗ್ರಹಕ್ಕೆ ಪಾತ್ರರಾಗಲಿ.

''ಯಸ್ಯಯಸ್ಯ ತದಾಭ್ಯಮಹಿ, ಯಸ್ಯತಸ್ಯಕಥಾಫಲ'' ಯಾರುಯಾರು ಯಾವ ಯಾವ ಭಕ್ತಿ ರೀತಿಗಳಿಂದ ಶ್ರೀ ದೇವಿಯನ್ನು ಉಪಾಸನೆ ಮಾಡುತ್ತಾರೋ ಅವರವರ ಭಕ್ತಿಗಳಿಗನುಸಾರವಾಗಿ ಶ್ರೀ ದೇವಿಯು ಅನುಗ್ರಹವಿತ್ತು ಕರುಣಿಸಲಿ.

ಇಂತು ಶ್ರೀ ದೇವಿಯ
ಚರಣ ಕಮಲಗಳಿಗೆ ಸಾಷ್ಟಾಂಗ
ವಂದನೆಗಳು

ಶ್ರೀ ವಸಂತ ವಿ. ಸಾಲಿಯಾನ್,
ಮೀನುಗಾರಿಕಾ ಸಚಿವರು,
ಕರ್ನಾಟಕ ಸರಕಾರ, ವಿಧಾನ ಸೌಧ - ಬೆಂಗಳೂರು.

## ಸಂದೇಶ

ಮುಂಡ್ಕೂರು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಅಷ್ಟಬಂಧ ಬ್ರಹ್ಮಕಲಶೋತ್ಸವವು, ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳೊಂದಿಗೆ ದಿನಾಂಕ 12.2.93ನೇ ಶುಕ್ರವಾರ ಜರಗುವುದೆಂದು ತಿಳಿದು ತುಂಬಾ ಸಂತೋಷವಾಯಿತು. ನನ್ನ ಕಾಪುಕ್ಷೇತ್ರದಲ್ಲಿ ಇಂತಹ ಒಂದು ಅಭೂತಪೂರ್ವ ಕಾರ್ಯಕ್ರಮ ಜರಗುವುದು ಹೆಮ್ಮೆಯ ವಿಷಯವಾಗಿದೆ. ಅಲ್ಲದೆ ಈ ಶುಭಾವಸರದಲ್ಲಿ ''ಶ್ರೀ ದುರ್ಗಾಸ್ಮೃತಿ'' ಎಂಬ ಸ್ಮರಣ ಸಂಚಿಕೆಯು ಧರ್ಮಸ್ಥಳದ ಧರ್ಮಾಧಿಕಾರಿ ಪೂಜ್ಯ ಶ್ರೀ ವೀರೇಂದ್ರ ಹೆಗ್ಗಡೆಯವರ ಉಪಸ್ಥಿತಿಯಲ್ಲಿ ಬಿಡುಗಡೆಗೊಳ್ಳುವ ವಿಚಾರ ಕಾರ್ಯಕ್ರಮಕ್ಕೆ ಹೊನ್ನ ಕಲಶವನ್ನು ಇಟ್ಟಂತಾಗಿದೆ. ಎಲ್ಲಾ ಕಾರ್ಯಕ್ರಮಗಳು ಉತ್ತಮವಾಗಿ ಜರಗಲೆಂದೂ ಶ್ರೀ ದೇವಿಯು ನಮ್ಮೆಲ್ಲರನ್ನು ಕಾಪಾಡಲಿ ಎಂದೂ ಈ ಪರ್ವದಿನದಲ್ಲಿ ಹಾರೈಸುತ್ತೇನೆ.

**ವಸಂತ ವಿ. ಸಾಲಿಯಾನ್,**
(ಕಾಪುಕ್ಷೇತ್ರ)
ಮೀನುಗಾರಿಕಾ ಸಚಿವರು
ವಿಧಾನಸೌಧ - ಬೆಂಗಳೂರು



**ಕೆ. ಲಕ್ಷ್ಮೀನಾರಾಯಣ ಆಸ್ರಣ್ಣ**
ಅನುವಂಶಿಕ ಮೊಕ್ತೇಸರರು ಹಾಗೂ
ಅನುವಂಶಿಕ ಅರ್ಚಕರು
ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ
ಕಟೀಲು ದ.ಕ.

## ಸಂದೇಶ

ಶ್ರೀ ಭಾರ್ಗವ ಮುನಿಗಳಿಂದ ಸಂಪೂಜಿಸಲ್ಪಟ್ಟ ಮುಂಡ್ಕೂರು ಶ್ರೀ ದುರ್ಗಾ ಪರಮೇಶ್ವರಿ ಅಮ್ಮನವರ ಕ್ಷೇತ್ರವು ನಮ್ಮ ಜಿಲ್ಲೆಯ ದುರ್ಗಾಕ್ಷೇತ್ರಗಳಲ್ಲಿ ವಿಶಿಷ್ಟ ಮಹತ್ವವುಳ್ಳದ್ದಾಗಿರುತ್ತದೆ. ಈ ದೇವಸ್ಥಾನದ ನವೀಕರಣ ನಡೆದು ಈಗ ಜರಗುತ್ತಿರುವ ಬ್ರಹ್ಮರಥೋತ್ಸವ ಸಂದರ್ಭ ಸ್ಮರಣ ಸಂಚಿಕೆಯೊಂದನ್ನು ಪ್ರಕಟಿಸುತ್ತಿರುವುದು ಸಂದರ್ಭೋಚಿತವಾಗಿರುತ್ತದೆ. ಈ ಸಂಚಿಕೆಯು ಉತ್ತಮ ಧಾರ್ಮಿಕ ಲೇಖನಗಳನ್ನೊಳಗೊಂಡು ಸರ್ವಾಂಗ ಸುಂದರವಾಗಿ ಮೂಡಿಬರಲಿ; ಶ್ರೀ ದೇವಿಯು ಸರ್ವರನ್ನು ಅನುಗ್ರಹಿಸಲೆಂದು ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

॥ ಸಮಸ್ತ ಸನ್ಮಂಗಳಾನಿ ಭವಂತು ॥

ಇತಿ
ಕೆ. ಲಕ್ಷ್ಮೀನಾರಾಯಣ ಆಸ್ರಣ್ಣ

ಬಿ. ಗೋಪಾಲಕೃಷ್ಣ ತಂತ್ರಿ
ಮಾಜಿ ಪ್ರಧಾನರು
ಮಂಡಲ ಪಂಚಾಯತು ಬೆಳ್ಮಣ್ಣು

ದಿನಾಂಕ 12.2.1993

## ಸಂದೇಶ

ಮುಂಡ್ಕೂರು ಶ್ರೀ ದುರ್ಗಾಪರಮೇಶ್ವರಿ ದೇವರ ಬ್ರಹ್ಮ ಕಲಶೋತ್ಸವ ಶುಭ ಸಮಾರಂಭದಲ್ಲಿ ಸವಿನೆನಪಿಗಾಗಿ ಸ್ಮರಣ ಸಂಚಿಕೆಯನ್ನು ಹೊರತರುವ ಸುವಿಚಾರಕ್ಕೆ ಅಭಿನಂದನೆಗಳು.

ಅಲ್ಲದೆ ಈ ದೇವಾಲಯವನ್ನು ಸುಸಜ್ಜಿತವಾಗಿ ನವೀಕರಿಸಿ ಭಕ್ತಾದಿಗಳಿಗೆ ಸೂಕ್ತ ಅನುಕೂಲ ಹಾಗೂ ಸ್ವಚ್ಛಂದ ವಾತಾವರಣವನ್ನು ಕಲ್ಪಿಸಿಕೊಟ್ಟಿರುವ ಭಕ್ತಾದಿ ಮಹಾಶಯರುಗಳಿಗೆ ಆಡಳಿತದಾರರಿಗೆ ಹಾಗೂ ಅರ್ಚಕ ವರ್ಗದವರಿಗೂ ಅಭಿನಂದನೆಗಳು.

ಶ್ರೀ ದುರ್ಗಾಪರಮೇಶ್ವರಿ ಅಮ್ಮನವರು ಎಲ್ಲಾ ಜನತೆಯನ್ನು ಹರಸುವಂತಾಗಲಿ ಎಂದು ಪ್ರಾರ್ಥಿಸುತ್ತೇನೆ.

ಬಿ. ಗೋಪಾಲಕೃಷ್ಣ ತಂತ್ರಿ

# ಹಿಂದೂ ಧರ್ಮ ಮತ್ತು ಆಚಾರ ವಿಚಾರಗಳು

ಬಿ. ಮಂಜುನಾಥ ಹೆಗ್ಡೆ.

ಬ್ರಹ್ಮಾಂಡದ ಒಳಹೊರಗನ್ನು ವ್ಯಾಪಿಸಿ ಮಿರಿ ನಿಂತರುವ ಸನಾತನ ಪರಮಸತ್ಯದ ಅವಿಷ್ಕಾರಕ್ಕೆ ನೂರಾರು ಮಾರ್ಗಗಳನ್ನು ತೆರೆದುತೋರಿಸುವ ವಿಚಾರಧಾರೆಯೇ ಹಿಂದೂಧರ್ಮ ಇದನ್ನು ''ಸತಾತನ ವೈದಿಕಧರ್ಮ'' ಎನ್ನುವುದುಂಟು. ಇದು ಮನುಷ್ಯನ ಅಸ್ತಿತ್ವದಿಂದಲೇ ಹುಟ್ಟಿ ಬಂದಿರುವುದರಿಂದ ಸನಾತವಾಗಿದೆ. ವೇದಗಳಲ್ಲಿ ಹೇಳಿದ ತತ್ವಸಿದ್ಧಾಂತಗಳೇ ಇದಕ್ಕೆ ಆಧಾರವಾದುದರಿಂದ ಇದು ವೈದಿಕವಾಗಿದೆ. ಬುದ್ಧಿ ಜನ್ಯವಾದುದೇ ಮತ, ಪ್ರಕೃತಿ ಜನ್ಯವಾದುದೇ ಧರ್ಮ ಆದ್ದರಿಂದಲೇ ಉಳಿದ ಮತಗಳಿಗಿಂತ ಭಿನ್ನ ಹಿಂದೂಧರ್ಮ.

ಹಿಂದುತ್ವ ವರ್ಣಿಸಲಾರದಷ್ಟು ಸುಂದರ ಸೂಕ್ಷ್ಮ. ಹಿಂದೂಧರ್ಮ ಯಾವುದೇ ಒಬ್ಬ ವ್ಯಕ್ತಿಯ ಪ್ರತಿಭೆಯಿಂದ ಬಂದುದಲ್ಲ. ಯಾವ ಒಂದು ಗ್ರಂಥವೇ ಸರಿಯೊಂದು ನಂಬಕೂತದಲ್ಲ, ಯಾವುದೋ ಒಂದು ಪೂಜಾಕ್ರಮವೇ ಸರಿಯೆಂದು ಹೇಳಿದಿಲ್ಲ. ಅದೊಂದು ಮತವಲ್ಲ, ಅದೊಂದು ಹೊಸಸೃಷ್ಟಿಯಲ್ಲ, ಆದರೆ ವಿಶೇಷವಾದ ದೃಷ್ಟಿ ಜೀವನದ ಕುರಿತಾದ ವಿಶೇಷದೃಷ್ಟಿಯನ್ನೇ ಹಿಂದೂ ಧರ್ಮವೆಂದು ಹೆಸರಿಸಿದ್ದೇವೆ.

ಹಿಂದೂಧರ್ಮ ಅನೇಕ ನಂಬಿಕೆಗಳ, ಆಚಾರವಿಚಾರಗಳ ಆಗರ. ಈ ನಂಬಿಕೆಗಳಿಗೆ ವಿಶ್ವಾಸಗಳಿಗೆ ಅದರದೇ ಆದ ವೈಶಿಷ್ಟ್ಯವಿದೆ. ಹಾಗಾದರೆ ಈ ಆಚಾರವಿಚಾರಗಳ ಔಚಿತ್ಯಗಳ ಬಗ್ಗೆ ವಿಶ್ಲೇಷಿಸೋಣ. ''ತಾತಸ್ಯ ಕೂಪೋಯಮಿತಿ ಬ್ರೂವಾಣಃ। ಕ್ಷಾರಂ ಜಲಂ ಕಾಪುರುಷಾಃ'' ಎಂಬಂತೆ ಅಪ್ಪತೋಡಿಸಿದ ಬಾವಿಯೆಂದು ಉಪ್ಪುನೀರನ್ನು ಕುಡಿಯುವವರನ್ನು ''ಮೂರ್ಖರು'' ಎನ್ನುತ್ತೇವೆ. ಹಾಗಾದರೆ ಈ ಆಚಾರನಿಯಮಾವಳಿಗಳ ಬಗ್ಗೆ ವಿಮರ್ಶಿಸೋಣ.

**ತುಳಿಸಿ ಪೂಜೆ :**

ಔಷದೀಯ ಸತ್ವಗಳಿಂದಲೂ ಆಹ್ಲಾದಕರ ಸುವಾಸನೆಯಿಂದಲೂ ಕೂಡಿರುವ ತುಳಸಿ ಗಿಡವು ಪವಿತ್ರತೆ, ಪರಿಶುದ್ಧತೆಗಳ ಪ್ರತೀಕವಾಗಿದೆ. ಧಾರ್ಮಿಕವಾಗಿ ತುಳಸಿ ಪತ್ರಗಳು ಸರಳ ಸುಂದರತೆಯಿಂದ ಕೂಡಿದ್ದು, ದೇವರಿಗೆ ಪ್ರಿಯವಾಗಿರುವುದಿಂದ ದೇವರ ಕೃಪೆಗೆ ಪಾತ್ರನಾಗಲು ಮನುಷ್ಯನು ಪವಿತ್ರನೂ, ಸರಳನೂ, ಪರಿಶುದ್ಧನೂ ಆಗಿರಬೇಕೆಂಬುದು ಸಾಂಕೇತಿಕ ಅರ್ಥ, ವೈಜ್ಞಾನಿಕವಾಗಿಯೂ ತುಳಸಿ ಎಲೆಯ ರಸ ಸಾಕಷ್ಟು ಪ್ರಮಾಣದಲ್ಲಿ ಅಯೋಡಿನನ್ನು ಒಳಗೊಂಡಿದ್ದು, ರೋಗ ನಿರೋಧಕ ಶಕ್ತಿಯನ್ನು ಹೊಂದಿದ್ದು, ಅದರಸ, ಗಾಳಿ ದೇಹದ ಆರೋಗ್ಯಕ್ಕೆ ಪ್ರೇರಕವಾಗಿದೆ.

**ಅಶ್ವತ್ಥವೃಕ್ಷ :**

ಅಶ್ವತ್ಥವೃಕ್ಷವು ದೀರ್ಘಾಯಸ್ಸು, ಬಹುವಿಸ್ತೃತತ್ವ, ಬಹುಶಾಖೆಗಳಿಂದ ಕೂಡಿ ಗ್ರಂಥಿಗಳಿಂದಲೂ ಎಲೆಗಳಿಂದಲೂ ಕೂಡಿರುತ್ತದೆ. ಇದು ಅನೇಕ ವಿಧದ ವನಸ್ಪತಿ ಔಷದಗಳ ಸತ್ವದಿಂದ ಕೂಡಿದ್ದು, ಅದರನೆರಳು, ಗಾಳಿ ಎಲ್ಲವೂ ಜೀವಿಗಳಗೆ ಪವಿತ್ರ ಹಾಗೂ ಉಪಯುಕ್ತ. ಮನುಷ್ಯನ ಜೀವನವೂ ಕೂಡಾ ಅಶ್ವತ್ಥವೃಕ್ಷದಂತೆ ಉಪಯುಕ್ತವೂ, ಬಲಯುಕ್ತವೂ, ಆಗಿ ದೀರ್ಘಾಯುಸ್ಸಿನಿಂದ ಕೂಡಿಬೆಳೆದು ಬೆಳಗಬೇಕು ಎಂಬುದು ಸಾಂಕೇತಿಕ ಅರ್ಥ. ಅದಲ್ಲದೆ ಅಶ್ವತ್ಥ ವೃಕ್ಷವು ರಾತ್ರಿಹೊತ್ತಿನಲ್ಲಿ, ಓಝೋನ್ ($O_3$) ಅವಿಲವನ್ನು ಬಿಡುಗಡೆ ಮಾಡುವುದಲ್ಲದೆ, ಬೆಳಗಿನ ಜಾವ ಅದು ಅತ್ಯಧಿಕ ಪ್ರಮಾಣದಲ್ಲಿ ಆಮ್ಲಜನಕ ($O_2$) ವನ್ನು ಉಂಟುಮಾಡುತ್ತವೆ. ಆದುದರಿಂದಲೇ ರಾತ್ರಿ ಹೊತ್ತು ಅಶ್ವತ್ಥಗಾಳಿ ಪ್ರಶಸ್ಥವಾಗಿಲ್ಲದೆ ಬೆಳಗಿನ ಜಾವ ಇದು ಬಿಡುಗಡೆ ಮಾಡುವ ಆಮ್ಲಜನಕವನ್ನು ದೈಹಿಕ ಮತ್ತು ಮಾನಸಿಕ ಆರೋಗ್ಯ ದೃಷ್ಟಿಯಿಂದ ಅತ್ಯುತ್ತಮವೆನಿಸಲ್ಪಟ್ಟಿದೆ. ಆದುದರಿಂದಲೇ ಬೆಳಗಿನ ಜಾವ ಅಶ್ವಸ್ಥಕಟ್ಟೆಗೆ ಸುತ್ತುವುದು ಫಲಪ್ರದವೆನ್ನುವುದು.

**ತಿಲಕವಿಡುವುದು :**

ತಿಲಕವನ್ನು ಎರಡು ಹುಬ್ಬುಗಳ ನಡುವಿನ ಹಣೆಯ ಭಾಗಕ್ಕೆ ಹಚ್ಚುತ್ತಾರೆ. ಶಿವಭಕ್ತರು ಭಸ್ಮವನ್ನೂ, ಕುಂಕುಮವನ್ನೂ, ವಿಷ್ಣುಭಕ್ತರು ಗಂಧ, ಚಂದನ, ಅಂಗಾರಕ ನಾಮಗಳನ್ನು ಹಾಕುತ್ತಾರೆ, ಭ್ರೂಮಧ್ಯೆಯ ಸ್ಥಳವು ಅಜ್ಞಾಚಕ್ರದ ಸ್ಥಾನವಾಗಿದ್ದು ಅಲ್ಲಿ ಜಾಗೃತಿ ಉಂಟಾದರೆ, ಜ್ಞಾನದ ಕಣ್ಣು ತೆರೆಯಿತೆಂದರೆ ಮಾನವನು ಮುಕ್ತನಾಗುತ್ತಾನೆ ಎಂಬುದು ಧಾರ್ಮಿಕ ನಂಬಿಕೆ. ಈ ಅಜ್ಞಾಚಕ್ರದ ಭಾಗದ ನಾಡಿ ಸದಾ ತಂಪಾಗಿರಲು ಗಂಧ, ಚಂದನ, ಕುಂಕುಮ, ಭಸ್ಮಗಳು ಸಹಾಯಮಾಡುತ್ತವೆ.

**ನಾಮಧಾರಣೆ :**

ನಾನು ಎಂದರೆ ಗಂಧವನ್ನಾಗಲೀ ಹಣೆಯ ಮೇಲೆ ಹಾಗೂ ಶರೀಕದ ನಿರ್ದಿಷ್ಟ ಅಂಗಗಳ ಮೇಲೆ ಹಚ್ಚುವುದಾಗಿದೆ. ಭಸ್ಮವು ವೈರಾಗ್ಯ ಮತ್ತು ತ್ಯಾಗದ ಸಂಕೇತವಾಗಿದೆ ಹಾಗೆಯೇ ಸೂಕ್ತವಾದ ವನಸ್ಪತಿ ಮತ್ತು ಬೆರಣಗಳ ಸುಡುವಿಕೆಯಿಂದ ತಯಾರಿಸಿದ ಭಸ್ಮದಲ್ಲಿ ಶರೀರದ ಶೀತ, ರಕ್ತದ ಒತ್ತಡ, ತಲೆಶೂಲೆ, ಮಿದುಳಿನ ಬೇನೆ ಇವುಗಳನ್ನು ಹತೋಟಿಗೆ ತರುವ ಶಕ್ತಿ ಇದೆ. ಜೊತೆಗೆ ಹಲವು ರೀತಿಯ ಕ್ರಿಮಿನಾಶಕ ಶಕ್ತಿಯೂ ಭಸ್ಮಕ್ಕಿದೆ.

ಗಂಧದ ಕೊರಡನ್ನು ತೀಡಿದಂತೆಲ್ಲಾ ಪರಿಮಳವು ಎಲ್ಲೆಲ್ಲೂ ಪಸರಿಸುವಂತೆ ಭಗವಂತನು ಜಗತ್ತನ್ನೇ ಆವರಿಸಿಕೊಂಡಿದ್ದಾನೆ ಎಂಬ ತತ್ವವನ್ನು ಗಂಧವು ಸಾರುತ್ತದೆ. ಗಂಧ ಪರಿಮಳಯುಕ್ತ ಮಾತ್ರವಲ್ಲದೆ ಔಷಧೀಯ ಗುಣ, ದೇಹದ ಹಣೆ, ಎದೆ, ತೋಳುಗಳನ್ನು ತಂಪಾಗಿಡುವುದು ಮಾತ್ರವಲ್ಲದೆ ಚರ್ಮವ್ಯಾಧಿಗಳನ್ನು ತಡೆಗಟ್ಟುವುದು ಹಾಗೂ ಗುಣಪಡಿಸುವುದು.

**ಶಿಖೆ (ಜುಟ್ಟು) ಇಡುವಿಕೆ :**

ಈ ಜಗತ್ತಿನ ಜೀವಿಗಳೆಲ್ಲವೂ ತಲೆಯಿಂದ ತಲೆಗೂದಲು ಹುಟ್ಟಿದಂತೆ ಭಗವಂತನಿಂದ ಹುಟ್ಟಿರುತ್ತವೆ ಎಂದು ಶ್ರುತಿಯ ಹೇಳುತ್ತದೆ. ತಲೆಯು ಜೀವಿಗಳ ಜ್ಞಾನ, ನಡವಳಿಕೆ, ಚಲನೆ-ಚಾಲನೆಗಳ ಕೇಂದ್ರ ಹಾಗೂ ಹತೋಟಿಯ ಸ್ಥಾನ. ಹಾಗೆಯೇ ಭಗವಂತನು ಜಗತ್ತಿನ ಜೀವಿಗಳನ್ನು ಹತೋಟಿಯಲ್ಲಿಡುವವರೂ ಮತ್ತು ಅವುಗಳ ಒಡೆಯನೂ ಆಗಿದ್ದಾನೆ ಎಂಬ ತತ್ವವು ತಲೆಯಲ್ಲಿ ಶಿಖೆಯನ್ನು ಇಡುವುದರ ಹಿಂದೆ ಅಡಗಿರುವ ಸಂಕೇತಾರ್ಥಗಳಲ್ಲಿ ಒಂದು. ಅದೇ ರೀತಿ ವೈಜ್ಞಾನಿಕವಾಗಿಯೂ ತಲೆಯ ಹಿಂಬಾಗದಲ್ಲಿ ಬ್ರಹ್ಮರಂಧ್ರ (ಮಣಿಶಿಕ) ಎಂಬ ಬಹಳ ಸೂಕ್ಷ್ಮವಾದ ಶಿರಸಂಧಿ ಇದ್ದು, ಅದನ್ನು ಬಿಸಿಲು, ಹೊಡೆತ, ಶೀತ ಇತ್ಯಾದಿ ತಾಪಗಳಿಂದ ರಕ್ಷಿಸಲು ಶಿಖೆ ಸಹಾಯಕವಾಗಿವೆ.

**ಯಜ್ಞೋಪವೀತ:**

ಹಿಂದೆ ಯಜ್ಞಮಾಡುವ ಕಾಲದಲ್ಲಿ ಇದನ್ನು ಧರಿಸುತ್ತಿದ್ದುದರಿಂದ ಇದಕ್ಕೆ ಯಜ್ಞೋಪವೀತವೆಂಬ ಹೆಸರಿದೆ. ಯಜ್ಞೋಪವೀತವು ಜೀವನವದಲ್ಲಿ ಯಜ್ಞಮಾಡುತ್ತಾ ಬಾಳಬೇಕು ಎಂಬುದನ್ನು ಸ್ಮರಣೆಗೆ ತಂದುಕೊಡುವ ಪವಿತ್ರದಾರ. ಇದರಲ್ಲಿರುವ ಮೂರುದಾರಗಳು ಒಂದೊಂದು ವಿಚಾರವನ್ನು ಸಾಂಕೇತಿಕವಾಗಿ ತಿಳಿಸುತ್ತವೆ. ದಿನನಿತ್ಯವೂ ಮನುಷ್ಯನಿಗೆ ತನ್ನ ಜೀವನದ ಗುರಿ, ಅದರ ಸಾಧನೆಗೆ ತಾನು ಅನುಸರಿಸಬೇಕಾದ ವೃತ್ತದ ಪ್ರಾಮುಖ್ಯತೆ, ಆಶ್ರಮ ಧರ್ಮದ ಅವಶ್ಯಕತೆ ಈ ಮೂರನ್ನೂ ಇದು ಸಂಕೇತಿಸುತ್ತದೆ. ಉಪನಯನ ಸಂಸ್ಕಾರದ ಅಂಗವಾಗಿ ಯಜ್ಞೋಪವೀತ ನೀಡಿದ ಮೇಲೆಯೇ ಗಾಯತ್ರಿ ಮಹಾಮಂತ್ರದ ಉಪದೇಶ ನೀಡಲಾಗುವುದು.

ಯಜ್ಞೋಪವೀತದ ಬಗೆಗೆ ಮಹತ್ವಪೂರ್ಣವಾದ ಅಂತರಾರ್ಥಗಳು ಇವೆ. ಯಜ್ಞೋಪವೀತದ ಮೂರು ಎಳೆಗಳು ಸೇರಿ ತೊಂಬತ್ತಾರು ಅಂಗುಲಗಳು ಆಗ ಬೇಕು ಎಂಬ ನಿಯಮವಿದೆ. ಸಾಮ ವೇದದ ಛಾಂದೊಗ್ಯ ಪರಿಶಿಷ್ಟದಲ್ಲಿ ಈ ಬ್ರಹ್ಮಾಂಡದಲ್ಲಿ ಅಡಗಿರುವ ಸಂಗತಿಗಳನ್ನು ಹೇಳಿ ಅವು ಒಟ್ಟು ತೊಂಬತ್ತಾರು ಎಂದು ಹೇಳಲಾಗಿದೆ. ಅವುಗಳು ಯಾವುದೆಂದರೆ- ಇಪ್ಪತ್ತೈದು ತತ್ವ, ಮೂರು ಗುಣ, ಹದಿನೈದು ತಿಥಿಗಳು, ಏಳುವಾರಗಳು, ಇಪ್ಪತ್ತೇಳು ನಕ್ಷತ್ರಗಳು, ನಾಲ್ಕುವೇದಗಳು, ಮೂರು ಕಾಲಗಳು, ಹನ್ನೆರಡು ಮಾಸಗಳು- ಒಟ್ಟು ಸಂಖ್ಯೆ ತೊಂಬತ್ತಾರನ್ನು ಯಜ್ಞೋಪವೀತದ ಸೂತ್ರದ ಅಳತೆ ಪ್ರಮಾಣವಾಗಿ ಸ್ವೀಕರಿಸಲಾಗಿದೆ.

ಅದೇ ರೀತಿ ಹೃದಯವು ಜೀವನ ಪ್ರಾಣಶಕ್ತಿಯ ಕೇಂಧ್ರವೂ ಭಗವಂತನ ವಾಸಸ್ಥಾನವೂ ಅದುದರಿಂದ ಯಜ್ಞೋಪವೀತವನ್ನು ಹೃದಯದ ಮೇಲಿನ ಭಾಗದಲ್ಲಿ ಬರುವಂತೆ ಎಡಭಾಗದಿಂದ ಬಲಭಾಗಕ್ಕೆ ಇಳಿಬಿಡುತ್ತಾರೆ. ಈ ಯಜ್ಞೋಪವೀತ ಹೃದಯದ ಮೇಲಿನಿಂದಲೇ ಹಾದು ಹೋಗುವುದರಿಂದ ಹೃದಯಕ್ಕೂ, ಯಜ್ಞೋಪವೀತಕ್ಕೂ ಯಾವುದೋ ಒಂದು ಸಂಬಂಧವಿರಲೇಬೇಕು

**ಘಂಟನಾದ :**

ಘಂಟೆಯು ಬ್ರಹ್ಮಾಂಡದ ಮೂಲಶಬ್ಧವಾದ ನಾದಬ್ರಹ್ಮದ ಪ್ರತೀಕವಾಗಿದೆ. ಭಗವಂತನನ್ನು ಮಂತ್ರ-ನಾಮಗಳಿಂದ ಪೂಜಿಸುವಾಗ ಘಂಟಾಶಬ್ಧ ಮಾಡಿದಾಗ ಸಾಧಕತನ ಮನಸ್ಸಿನ ಚಾಂಚಲ್ಯನಿಂತು ದಿವ್ಯ ಓಂಕಾರದ ನೆನಪಾಗುವಂತೆ ಮಾಡುವುದೇ ಘಂಟಾನಾದದ ಉದ್ದೇಶ ಅಲ್ಲದೆ ಬ್ರಹ್ಮಾಂಡದಲ್ಲಿ ಅಡಗಿರುವ ದುಷ್ಟಶಕ್ತಿಗಳು, ಭೂತಪ್ರೇತಾದಿಗಳು ನಾದಬ್ರಹ್ಮರ ರವದಿಂದ ಸರಿದುಹೋಗಲಿ ಎಂಬುದೂ ಸಾಂಕೇತಿಕವಾಗಿದೆ. ಅದೇ ರೀತಿ ಶಂಖದಿಂದ ಹೊರಡುವ ಓಂಕಾರ ಸಾಧಕನಿಗೆ ದೃಢಚಿತ್ತವನ್ನು

ನೀಡುವುದಲ್ಲದೆ, ಅವನ ದೇಹದ ಅಂಗಾಂಗಗಳಲ್ಲಿಯೂ ನಾದಬ್ರಹ್ಮ ತುಂಬುವಂತೆ ಮಾಡುತ್ತದೆ.

**ದೀಪಧೂಪಗಳು :**

ಉಪನಿಷತ್ತಿನಲ್ಲಿ ' ತಮಸೋಮ ಜ್ಯೋತಿರ್ಗಮಯ' ಎಂದು ಪ್ರಾರ್ಥನೆಯನ್ನು ಮಾಡಲಾಗಿದೆ. ದೀಪವು ಜ್ಯೋತಿಯನ್ನು ನೀಡುತ್ತದೆ, ಜ್ಯೋತಿಯು ಆಧ್ಯಾತ್ಮಿಕ, ಆದಿಭೌತಿಕ, ಆಧಿ ದೈವಿಕ ಸಂಬಂಧದ ಕತ್ತಲನ್ನು ಹೋಗಲಾಡಿಸುತ್ತದೆ ಎಂಬ ತತ್ವದ ಸಂಕೇತವಾಗಿ ಜ್ಯೋತಿಯನ್ನು ಮನೆಗಳಲ್ಲಿ, ದೇವಮಂದಿರಗಳಲ್ಲಿ ಪೂಜಾಸ್ಥಳಗಳಲ್ಲಿ ತ್ರಿಸಂಧ್ಯೆಯ ವೇಳೆಗಳಲ್ಲಿ ಹಚ್ಚಲಾಗುತ್ತದೆ. ಧೂಪವು ಪರಿಮಳವಾದ ಧೂಮದಿಂದ ಕೂಡಿದ್ದು, ಎಲ್ಲೆಲ್ಲೂ ವ್ಯಾಪಕವಾಗುವ ಶಕ್ತಿಯನ್ನು ಹೊಂದಿದೆ. ಭಗವಂತನೂ ಕೂಡಾ ಹೀಗೆ ವ್ಯಾಪಕಶಕ್ತಿಯನ್ನು ಹೊಂದಿದವನಾಗಿದ್ದಾನೆ ಎಂಬುದನ್ನು ಸಾಂಕೇತಿಕವಾಗಿ ತಿಳಿದುಕೊಳ್ಳಬಹುದು. ಔಷಧೀಯ ದೃಷ್ಟಿಯಿಂದ ಧೂಪವು ಕ್ರಿಮಿಕೀಟಗಳನ್ನು ನಾಶಮಾಡುವ ಗುಣವನ್ನು ಹೊಂದಿದ್ದು, ಪರಿಸರದ ಆರೋಗ್ಯವನ್ನು ಕಾಪಾಡಿಕೊಳ್ಳುವಲ್ಲಿ ಸಹಕಾರಿಯಾಗಿದೆ.

**ಸ್ವಹಸ್ತದರ್ಶನ :**

ಬೆಳಗ್ಗೆ ಎದ್ದಕೂಡಲೇ ''ಕರಾಗ್ರೇವಸತೇ ಲಕ್ಷ್ಮೀ: ಕರಮಧ್ಯೇ ಸರಸ್ವತಿ। ಕರಮೂಲೇ ಸ್ಥಿತಾಗೌರಿ ಪ್ರಭಾತೇ ಕರದರ್ಶನಂ ॥'' ಎಂದು ಶ್ಲೋಕ ಹೇಳುತ್ತಾ ತನ್ನ ಕೈಗಳನ್ನು ಕಣ್ಣಿಗೊತ್ತಿಗೊಂಡು ಅಂಗೈಯನ್ನು ನೋಡಿಕೊಳ್ಳುವುದು ಸಂಪ್ರದಾಯ. ಅಂಗೈಯಲ್ಲಿ ಲಕ್ಷ್ಮೀ, ಸರಸ್ವತೀ ಮತ್ತು ಗೌರೀ ದೇವಿಯ ಸಾನಿಧ್ಯಯ ಇದೆ. ಎಂಬುದು ಧಾರ್ಮಿಕ ನಂಬಿಕೆಯಾದರೆ ಅಂತಹ ದೈವೀ ಸಾನಿಧ್ಯವಿರುವ ಪವಿತ್ರವಾದ ಕೈಗಳಿಂದ ಕೆಟ್ಟಕೆಲಸ ಮಾಡಬಾರದೆಂಬುದನ್ನು ನೆನಪಿಸುವುದು ವೈಚಾರಿಕ ಕಾರಣವಾಗಿದೆ. ಅದಲ್ಲದೆ ವೈಜ್ಞಾನಿಕವಾಗಿ ಬೆಳಗ್ಗೆ ಎದ್ದೊಡನೆಯೇ ಒಮ್ಮೆಲೇ ಸಂಪೂರ್ಣ ಬೆಳಕಿಗೆ ಕಣ್ಣನ್ನು ತೆರೆದುಕೊಳ್ಳುವುದು ಕಣ್ಣಿಗೆ ಆರೋಗ್ಯ ದೃಷ್ಟಿಯಲ್ಲಿ ಒಳ್ಳೆಯದಲ್ಲ. ಅದಕ್ಕಾಗಿ ಹಸ್ತದಿಂದ ಕಣ್ಣನ್ನು ಒತ್ತಿ ನಿಧಾನವಾಗಿ ಕಣ್ಣನ್ನು ಬಿಟ್ಟು ಬೆರಳ ತುದಿಯಿಂದ ನಿಧಾನವಾಗಿ ಅಂಗೈಯ ಮೇಲೆ ದೃಷ್ಟಿಯನ್ನು ಹಾಯಿಸುತ್ತಾ ಕಣ್ಣು ಬಿಡಬೇಕು ಎಂಬುದು ವೈಜ್ಞಾನಿಕ ಸತ್ಯ.

**ಆಹಾರ ಸ್ವೀಕಾರ :**

ಹಿಂದೂ ಧರ್ಮದ ಆಹಾರ ಸ್ವೀಕಾರ ಪವಿತ್ರಕಾರ್ಯ ವಿಧಿಪ್ರಕಾರವಾಗಿ ಶುದ್ಧವಾದ ಸ್ಥಳದಲ್ಲಿ ಕುಳಿತು ಆಹಾರವನ್ನು ಎಲೆಯಲ್ಲಿ ಬಡಿಸಿದ ಕೂಡಲೇ ವಿಧಿಯುಕ್ತ ಮಂತ್ರದಿಂದ ಜಲಪ್ರೋಕ್ಷಣೆ ಮಾಡಿದಾಗ ಆಹಾರದಲ್ಲಿರುವ ಸೂಕ್ಷ್ಮದೋಷಗಳು ನಾಶವಾಗುತ್ತವೆ. ಅನಂತರ ಎಲೆಯ ಸುತ್ತಲೂ ಮಂತ್ರೋಕ್ತವಾಗಿ ನೀರನ್ನು ಸುತ್ತುಗಟ್ಟಬೇಕು. ಇದು ಆಹಾರ ಸ್ವೀಕಾರ ಮುಗಿಯುವ ತನಕ ದುಷ್ಟಶಕ್ತಿಗಳಿಂದ ತೊಂದರೆಯಾಗದಿರಲಿ ಎಂಬುದು ಧಾರ್ಮಿಕ ನಂಬಿಕೆಯಾದರೆ, ಆಹಾರ ಸುತ್ತ ನೀರನ್ನು ಚಿಮುಕಿಸಿ ಸುತ್ತಲಿನ ಪ್ರದೇಶವನ್ನು ತಂಪುಮಾಡಿ ಕ್ರಿಮಿಕೀಟಾದಿ ಸೂಕ್ಷ್ಮಜೀವಿಗಳು ಬರದಂತೆ ತಡೆಗಟ್ಟುವುದೇ ವೈಜ್ಞಾನಿಕ ಸತ್ಯ ನಂತರ ಆಹಾರ ಉತ್ಪತ್ತಿಗೆ ಸಹಾಯಮಾಡಿದ ಇಂದ್ರ, ಅಗ್ನಿ, ವರುಣಾದಿ ದೇವತೆಗಳಿಗೆ ಪ್ರೀತಿಯಾಗಲಿ, ಪಿತೃಗಳಿಗೆ ಸಂತೋಷವಾಗಲಿ ಎಂದು ಆಹಾರದ ಸ್ವಲ್ಪಾಂಶವನ್ನು ಎಲೆ ಅಥವಾ ತಟ್ಟೆಯ ಬದಿಯಲ್ಲಿ ಇಡಬೇಕು. ನಂತರ ಕೈಯಲ್ಲಿ ನೀರನ್ನು ತೆಗೆದುಕೊಂಡು ವಿಧಿಯುಕ್ತವಾಗಿ ನೀರನ್ನು ಸ್ವೀಕರಿಸಿ ಅನ್ನ ತುತ್ತನ್ನು ಐದು ಬಾರಿ ಮಂತ್ರಯುಕ್ತವಾಗಿ ಪಂಚಪ್ರಾಣಗಳಿಗೆ ಅರ್ಪಿಸುವುದು ಧಾರ್ಮಿಕ ವಿಚಾರವಾದರೆ ಗಂಟಲನ್ನು ಒದ್ದೆ ಮಾಡಿಕೊಂಡೇ, ಅವಸರವಸರವಾಗಿ ತಿನ್ನದೇ ಸಾವಕಾಶವಾಗಿ ನಮ್ಮ ತನುಮನಗಳೆರಡೂ ಆಹಾರ ಸ್ವೀಕಾರಕ್ಕೆ ಸಿದ್ಧವಾಗುವಂತೆ ಮಾಡುವುದೇ ಇದರ ಹಿಂದಿರುವ ವೈಜ್ಞಾನಿಕ ತತ್ವ, ಆಹಾರವನ್ನು ಪಂಚಪ್ರಾಣಗಳಿಗೆ ಅರ್ಪಿಸುವುದೇ ವಿನಃ ಅಹಂಕಾರದಿಂದ ತಾನು ಸ್ವೀಕರಿಸುವುದೆಂದು ಭಾವಿಸದೆ ಮುಕ್ತಾಯದಲ್ಲಿ ಮಂತ್ರಯುಕ್ತವಾಗಿ ಜಲವನ್ನು ಸ್ವೀಕರಿಸಬೇಕು. ಊಟದ ಮೇಲೆ ಎದ್ದು, ಕೈಕಾಲು ತೊಳೆದು, ಕೈಬೆರಳಲ್ಲಿ ಉಳಿದ ನೀರನ್ನು ಕಣ್ಣುಗಳಿಗೆ ಮುಟ್ಟಿಸಿ ''ಶಯಾಂತಿಂ ಚಸುಕನ್ಯಾಂಚಚ್ಯವನಂ ಶುಕ್ರಮಶ್ವಿನಂ । ಬೋಜಾನಂತೇ ಸ್ಮರೇದ್ಯಸ್ತು ತಸ್ಯ ಚುಕ್ಸುನರಹೀಯತೇ॥ ಎಂಬ ಶ್ಲೋಕವನ್ನು ಹೇಳಿ ನೂರು ಹೆಜ್ಜೆ ನಡೆಯಬೇಕು. ಅದನ್ನೇ ವ್ಯಾವಹಾರಿಕವಾಗಿ ನಾವು ಊಟದ ನಂತರ ಅರ್ಧ ಮೈಲು ನಡೆಯಬೇಕೆನ್ನುವುದು.

ಹಿಂದೂ ಧರ್ಮ ಇಂತಹ ಅನೇಕ ಆಚಾರ-ವಿಚಾರಗಳನ್ನು ಒಳಗೊಂಡಿದ್ದು, ಅದನ್ನು ಅರ್ಥಮಾಡಿಕೊಂಡು ಆಚರಿಸುವುದು ಪ್ರತಿಯೊಬ್ಬ ಹಿಂದುವಿನ ಕರ್ತವ್ಯವಾಗಿದೆ. ಅಣುರೇಣು ತೃಣ ಕಾಷ್ಟಗಳಲ್ಲಿಯೂ ಭಗವಂತನನ್ನು ಕಾಣುವ ಹಿಂದೂಧರ್ಮ ಅನೇಕ ನಂಬಿಕೆಗಳನ್ನು ಒಳಗೊಂಡಿದೆ. ಮೇಲ್ನೋಟಕ್ಕೆ ಇವುಗಳು ಅರ್ಥಹಿನವಾಗಿ ಕಂಡರೂ ಅರ್ಥೈಸಿಕೊಂಡಾಗ ಅಗಾಧ ಅರ್ಥವನ್ನು ಒಳಗೊಂಡಿರುವುದನ್ನು ತಿಳಿಯಬಹುದು. ''ಸರ್ವಂ ಖಲ್ವಿದಂ ಬ್ರಹ್ಮ'' ಎಂಬ ಮಹಾವಾಕ್ಯದಂತೆ ಪ್ರಪಂಚದ ಸಕಲವಸ್ತುಗಳು

ಬ್ರಹ್ಮಮಯವಾಗಿದೆ ಎಂದು ನಂಬಿದೆ ಹಿಂದೂಧರ್ಮ. ಗಾಳಿ ಬೆಳಕು ನೀರನ್ನು ನೀಡುವ ಸೂರ್ಯ, ಫಲ, ಆಹಾರ, ನೆರಳನ್ನು ನೀಡುವ ಗಿಡಮರಗಳು, ನಿಸರ್ಗದಲ್ಲಿ ಕಲ್ಲು, ಮಣ್ಣು, ನೀರು, ಗಾಳಿ, ಬೆಂಕಿ, ಆಕಾಶ; ಸಹಜೀವಿಗಳಾದ ಪಶುಪಕ್ಷಿಗಳೆಲ್ಲದರಲ್ಲಿಯೂ ದೇವರನ್ನು ಕಾಣುವ ಅರ್ಥಪೂರ್ಣ ನಂಬಿಕೆ ನಮ್ಮದು. ಯಾರಿಂದ, ಯಾವುದರಿಂದ ನಾವು ಜನಸಿದ್ದೇವೆ, ಬದುಕಿದ್ದೇವೆಯೋ ಅವುಗಳೆಲ್ಲವುಗಳಲ್ಲಿ ದೈವತ್ವ ಕಾಣುವ ವಿಶ್ವಾಸ ನಮ್ಮದು. ಪಡೆದ ಋಣಕ್ಕೆ ಪ್ರತಿಯಾಗಿ ವಂದನೆಗಳನ್ನು ಸಲ್ಲಿಸುವುದು ನಮ್ಮ ಕರ್ತವ್ಯ. ಅದುದರಿಂದ ಕಾಲಕಾಲಕ್ಕೆ ತಕ್ಕಂತೆ ಜೀವನದ ಮೂಲನಂಬಿಕೆ, ನಿಯಮಗಳನ್ನು ಬಿಡದೆ, ಸೂಕ್ತಪರಿವರ್ತನೆಗಳನ್ನು ಮಾಡುತ್ತಾ ಹಿಂದೂ ಧರ್ಮ ಬೆಳೆಯಲಿ ಬೆಳಗಲಿ.

''ಯಂ ಶೈವಾತ್ಸಮುಪಾಸತೇ ಶಿವಬ್ರಹ್ಮೇತಿವೇದಾತಿಂನೊ
ಬೌದ್ಧಾಃ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯ್ಯೊಯಿರಾಃ
ಅರ್ಹಶ್ವೇತಿಹ ಜೈನಶಾಸನರತಾಃ ಕರ್ಮೇತಿ ಮೀಮಾಂಸಕಾಃ
ಸೋಯಂ ವೊ ವಿದಧಾತು ವಾಂಛಿತಫಲಂ ಶ್ರೀ ಕೇಶವ ಸರ್ವದಾ॥''

ಶೈವರು ಶಿವನೆಂದೂ, ವೇದಾಂತಿಗಳು ಬ್ರಹ್ಮನೆಂದೂ, ಬೌದ್ಧರು ಬುದ್ಧನೆಂದೂ, ನೈಯಾಯಿಕರು ಕರ್ತವೆಂದೂ, ಜೈನರು ಅರ್ಹನ್ ಎಂದೂ ಮಿಮಾಂಷಕರು ಕರ್ಮನೆಂದೂ, ಯಾರನ್ನು ಕರೆದು ಪೂಜಿಸುತ್ತಾರೋ ಆ ಕೇಶವನು ನಮ್ಮ ಅಭೀಷ್ಟವನ್ನು ಈಡೇರಿಸಲಿ.

ಬಿ. ಮಂಜುನಾಥ ಹೆಗ್ಡೆ M.A. B.Sc. B.Ed
ವಿದ್ಯಾವರ್ಧಕ ಪದವಿ ಪೂರ್ವ ಕಾಲೇಜು ಮುಂಡ್ಕರು

ಹೊಸ ಚಿಗುರು ಹಳೆ ಬೇರು ಕೂಡಿರಲು ಮರ ಸೊಬಗು
ಹೊಸಯುಕ್ತಿ ಹಳೆ ತತ್ವದೊಡಗೂಡೆ ಧರ್ಮ
ಋಷಿ ವಾಕ್ಯದೊಡನೆ ವಿಜ್ಞಾನ ತಲೆಮೇಳವಿಸೆ
ಜಸವು ಜನಜೀವನಕೆ - ಮಂಕುತಿಮ್ಮ

''ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸೀ''
(ಜನ್ಮ ನೀಡಿದ ತಾಯಿಯೂ, ಜನ್ಮಭೂಮಿಯೂ ಸ್ವರ್ಗಕ್ಕಿಂತಲೂ ಶ್ರೇಷ್ಠ)

ಚಿತ್ತವಿಲ್ಲದೆ ಗುಡಿಯ ಸುತ್ತಿದಡೆ ಫಲವೇನು
ಎತ್ತುಗಾಣವನು ಹೊತ್ತುತಾ ನಿತ್ಯಾದಿ
ಸುತ್ತಿ ಬಂದಂತೆ - ಸರ್ವಜ್ಞ

ಸ್ಮಿತವಿರಲಿ ವದನದಲಿ, ಕಿವಿಗೆ ಕೇಳಿಸದಿರಲಿ
ಹಿತವಿರಲಿ ವಚನದಲಿ, ಋತವ ಬಿಡದಿರಲಿ।
ಮಿತವಿರಲಿ ಮನಸಿನುದ್ವೇಗದಲಿ, ಭೋಗದಲಿ
ಅತಿ ಬೇಡ ವೆಲ್ಲಿಯುಂ - ಮಂಕುತಿಮ್ಮ ॥

## ದೇವರು ಮತ್ತು ನಾವು

ಡಾ। ಪಿ.ಬಿ. ಆಳ್ವ, ಮುಂಡ್ಕೂರು

ಆಧ್ಯಾತ್ಮಿಕ ಕ್ಷೇತ್ರದಲ್ಲಿ ಭಾರತ ದೇಶಕ್ಕೆ ಒಂದು ವಿಶಿಷ್ಟ ಸ್ಥಾನ ಇದೆ. ಭಾರತಕ್ಕೆ ಬಂದ ಆರ್ಯ ಮತ್ತು ದ್ರಾವಿಡರ ಕಾಲದಿಂದಲೂ ದೇವಾರಾಧನೆ ಮತ್ತು ದೈವಾರಾಧನೆಗಳು ನಡೆದುಕೊಂಡು ಬರುತ್ತಿತ್ತು. ನಮ್ಮ ಪುರಾಣಗಳಲ್ಲಂತೂ ದೇವರೇ ಎಲ್ಲದಕ್ಕೂ ಮೂಲಾಧಾರ ದೇವರನ್ನು ನಂಬುವ ಆಸ್ತಿಕರು ಒಂದು ಕಡೆ ಇದ್ದರೆ, ನಂಬದ ನಾಸ್ತಿಕರು ಇನ್ನೊಂದು ಕಡೆ ವಿಮರ್ಶಕರು ಎಲ್ಲರೂ ದೇವರ 'ಅಸ್ತಿತ್ವ'ವನ್ನು ವಿಮರ್ಶಿಸಲು ಹೊರಡದೆ ಬದಲಾಗಿ ಭಕ್ತರಾಗಿಯೇ ಉಳಿದಿದ್ದಾರೆ ಹಾಗಿರುವಾಗ ದೈವತ್ವಕ್ಕೆ ಒಂದು ವಿಶಿಷ್ಟ ಸ್ಥಾನ ಇದೆ ಎಂಬುದು ನಿರ್ವಿವಾದ. ಇದರಿಂದಾಗಿಯೇ ದೇವಾಲಯ ಅಥವಾ ದೇವಸ್ಥಾನಗಳ ಉಗಮವಾಯಿತು ಎಂದರೂ ತಪ್ಪಾಗಲಾರದು. ವೇದ, ಪುರಾಣಗಳನ್ನು ಆಧರಿಸಿ ಬೇರೆ ಬೇರೆ ಹೆಸರಿನ ದೇವರನ್ನು ಬೇರೆ ಬೇರೆ ದೇವಸ್ಥಾನಗಳಲ್ಲಿ ಪ್ರತಿಷ್ಠಾಪಿಸಿ ಆರಾಧಿಸುತ್ತಾ ಬರುತ್ತಿರುವುದು ನಮ್ಮ ಭಾರತ ದೇಶದ ಸಂಪ್ರದಾಯ.

ವಿಚಲಿತವಾದ ಮನಸ್ಸನ್ನು ಕೇಂದ್ರೀಕರಿಸಿ, ಭಕ್ತಿ ಎಂಬ ಸಾಧನದ ಮುಖಾಂತರ ದೇವರನ್ನು ಪ್ರಾರ್ಥಿಸಿದರೆ ನಮ್ಮ ಇಷ್ಟಾರ್ಥವನ್ನು ಕೈಗೂಡಿಸುವ ಮಹಾಶಕ್ತಿ ದೇವರಲ್ಲಿ ಇದೆ ಎಂಬುದು ಭಕ್ತರ ಅಂಬೋಣ. ಇದು ದಿಟವಲ್ಲದೆ ಸಟೆಯಾಗಿದ್ದರೆ, ಲಕ್ಷೋಪಲಕ್ಷ ಭಕ್ತರು ಒಂದಲ್ಲ ಒಂದು ಉತ್ಸವಗಳಲ್ಲಿ ಭಾಗಿಯಾಗುತ್ತಿರುವುದಾದರೂ ಹೇಗೆ? ಹಾಗಿದ್ದರೆ 'ದೇವರು' ಎನ್ನುವಂತಹ ಒಂದು ''ಅದ್ಭುತ ಶಕ್ತಿ'' ಪ್ರಪಂಚದಲ್ಲಿ ಇದೆ ಎಂಬುದನ್ನು ಎಲ್ಲರೂ ನಂಬಲೇ ಬೇಕಾಗುತ್ತದೆ.

ಇದಕ್ಕೋಸ್ಕರ ದೇವಾಲಯಗಳ ಜೀರ್ಣೋದ್ಧಾರ, ಕ್ರಮಬದ್ಧವಾದ ಉತ್ಸವ, ಉತ್ತಮ ಆಡಳಿತವನ್ನು ಒದಗಿಸಿದಲ್ಲಿ ದೇವಸ್ಥಾನಗಳ ಮುಖಾಂತರ ಎಷ್ಟೆಷ್ಟೋ ಜನೋಪಯೋಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಾಧ್ಯ! ಉದಾಹರಣೆಗೆ - ಶ್ರೀಕ್ಷೇತ್ರ ಧರ್ಮಸ್ಥಳದ ವತಿಯಿಂದ ನಡೆಯುತ್ತಿರುವ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ, ವೈದ್ಯಕೀಯ ಮತ್ತು ಇನ್ನಿತರ ಹಲವು ಕೆಲವು ಕಾರ್ಯಕ್ರಮಗಳೇ ಜ್ವಲಂತ ಸಾಕ್ಷಿ. ಈ ರೀತಿ ಕಾರ್ಯಕ್ರಮಗಳನ್ನು ನಡೆಸುತ್ತಿರುವ ಅದೆಷ್ಟೋ ಕ್ಷೇತ್ರಗಳು ನಮ್ಮ ದೇಶದಲ್ಲಿ ಇವೆ. ಇದಲ್ಲದಕ್ಕೂ ಮೂಲಾಧಾರ ''ದೇವರು'' - ಎಂಬುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ.

ಸಣ್ಣ ಊರಾದ ನಮ್ಮ ಮುಂಡ್ಕೂರಿನಲ್ಲಿ ಈ ವರ್ಷ ನಡೆದ ಬ್ರಹ್ಮಕಲಶೋತ್ಸವವನ್ನು ಉದಾಹರಣೆಯಾಗಿ ತೆಗೆದುಕೊಂಡರೆ - ಆ ದಿನ ಯಾವ ಒಂದು ಫಲಾಪೇಕ್ಷೆಯಿಲ್ಲದೆ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಸರ್ವಕೆಲಸಗಳಲ್ಲಿ ಭಾಗಿಯಾದ ಸಹಸ್ರಾರು ಭಕ್ತಬಾಂಧವರ ಸಮೂಹ, ಹತ್ತುಸಾವಿರಕ್ಕೂ ಮೇಲ್ಪಟ್ಟು ಬ್ರಹ್ಮಕಲಶೋತ್ಸವದ ಅಂಗವಾಗಿ ನಡೆದ ಅನ್ನಸಂತರ್ಪಣೆಯ ಸ್ವೀಕಾರ ಮಾಡಿದ ಭಕ್ತವೃಂದ, ಊರ ಹಾಗೂ ನೆರೆಊರ ಭಕ್ತಾಭಿಮಾನಿಗಳಿಂದ ರಾಶಿರಾಶಿಯಾಗಿ ಬಂದ ಹೊರೆ ಕಾಣಿಕೆಗಳ ನೋಟ ಮತ್ತು ಜೀರ್ಣೋದ್ಧಾರಕ್ಕಾಗಿ ಲಕ್ಷೋಪಲಕ್ಷ ರೂಪಾಯಿಗಳನ್ನಿತ್ತ ದಾನಿಗಳ ಉದಾರತ್ವ, ಇವುಗಳನ್ನು ಗಮನಿಸಿದಾಗ ಶ್ರೀದೇವಿಯ ಶಕ್ತಿ ಜನರ ಭಕ್ತಿ ಎಷ್ಟು ಉನ್ನತ ಮಟ್ಟದಲ್ಲಿದೆ ಎಂಬುದರ ಅರಿವಾಗುತ್ತದೆ.

ಇದರಂತೆ ನಮ್ಮ ದೇಶದಲ್ಲಿ ಇನ್ನಷ್ಟು ಭಕ್ತರ ಸಂಖ್ಯೆ ಹೆಚ್ಚಿ, ದೇವಾಲಯಗಳ ಜೀರ್ಣೋದ್ಧಾರಗಳು ಆಗಲಿ, ತನ್ಮೂಲಕ ಸತ್ಯ, ಧರ್ಮ, ಶಾಂತಿಗಳು ಭಾರತದಲ್ಲಿ ನೆಲಸಿ ಜಗತ್ತಿಗೆ ನಮ್ಮ ದೇಶವು ಒಂದು ಮಾರ್ಗದರ್ಶನ ಆಗಲಿ ಎಂದು ಶ್ರೀ ದೇವಿಯಲ್ಲಿ ಪ್ರಾರ್ಥಿಸಿ ಹಾರೈಸೋಣ.

ಡಾ। ಪಿ. ಬಾಲಕೃಷ್ಣ ಆಳ್ವ M.B.B.S.
''ಮಕರಂದ''
ಮುಂಡ್ಕೂರು.

# ಬ್ರಹ್ಮಕಲಶೋತ್ಸವದ ಸವಿನೆನಪುಗಳು

- ಜಿ. ತಿರುಮಲ ಶರ್ಮ

ಸರ್ವ ಮಂಗಲ ಮಾಂಗಲ್ಯೇ ಶಿವೇ ಸರ್ವಾರ್ಥ ಸಾಧಿಕೇ।
ಶರಣ್ಯೇ ತ್ರ್ಯಂಬಕೇ ದೇವಿ ನಾರಾಯಣಿ ನಮೋಸ್ತುತೇ॥

ಅಂಗೀರಸ ಸಂವತ್ಸರ ಮುಂಡ್ಕೂರು ಹಾಗೂ ಸನಿಹದ ಗ್ರಾಮಸ್ಥರಿಗೆ ಸ್ಮರಣೀಯ ವರ್ಷ. ಈ ಸಂವತ್ಸರದ ಮುಂಡ್ಕೂರು ಶ್ರೀ ದುರ್ಗಾ ಪರಮೇಶ್ವರಿ ಬ್ರಹ್ಮಕಲಶಾಭಿಷೇಕದಿಂದ ಸರ್ವಾಂಗ ಮಂಗಲೆಯಾಗಿ ಭಜಕರನ್ನು ಆಶೀರ್ವದಿಸಿದ ಮಂಗಲ ಪರ್ವ.

ಭವ್ಯ ಹಾಗೂ ಸುಂದರವಾಗಿ ನವೀಕರಣಗೊಂಡ ದೇವಾಲಯದಲ್ಲಿ ದಿನಾಂಕ 8 - 2 - 1993 ರಿಂದ ಅಷ್ಟಬಂಧ - ಬ್ರಹ್ಮಕಲಶೋತ್ಸವದ ಕಾರ್ಯಕ್ರಮ ಆರಂಭಗೊಂಡು 19 - 2 - 1993 ರಂದು ಮಹಾ ಸಂಪ್ರೋಕ್ಷಣೆ - ಮಂತ್ರಾಕ್ಷತೆಯೊಂದಿಗೆ ಸಮಾಪ್ತವಾಯಿತು. ಧಾರ್ಮಿಕ ವಿಧಿ-ವಿಧಾನಗಳ ಜೊತೆ ಜೊತೆಗೆ ಭಕ್ತ ಜನರ ಮನರಂಜನೆ ಹಾಗೂ ಜ್ಞಾನವೃದ್ಧಿಗೆ ಸಾಂಸ್ಕೃತಿಕ ಹಾಗೂ ಧಾರ್ಮಿಕ ಸಭಾ ಕಾರ್ಯಕ್ರಮಗಳು ಹನ್ನೆರಡು ದಿನಗಳವರೆಗೆ ನಡೆಯಿತು.

ದಿನಾಂಕ 8 - 2 - 1993ನೇ ಸೋಮವಾರ ಬೆಳಿಗ್ಗೆ 7 ಘಂಟೆಗೆ ಸಾಮೂಹಿಕ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡ ಧಾರ್ಮಿಕ ವಿಧಿವಿಧಾನಗಳು ಪ್ರತಿದಿನ ಕ್ರಮ ಬದ್ಧವಾಗಿ ಜರುಗಿ ದಿನಾಂಕ 12 - 2 - 1993ನೇ ಶುಕ್ರವಾರ ಬೆಳಿಗ್ಗೆ 8-45ರ ಮೀನ ಲಗ್ನದಲ್ಲಿ ಬ್ರಹ್ಮಶ್ರೀ ಎಡಪದವು ಅನಂತ ತಂತ್ರಿಗಳ ನೇತೃತ್ವದಲ್ಲಿ ಶ್ರೀ ದುರ್ಗಾದೇವಿಗೆ ಸಹಸ್ರಕಲಶ ಬ್ರಹ್ಮಾಕುಂಭಾಭಿಷೇಕ ನೆರವೇರಿತು. ಮಧ್ಯಾಹ್ನ ಸಾವಿರಾರು ಜನರಿಗೆ ಮಹಾ ಸಂತರ್ಪಣೆ ಜರುಗಿತು. ಊರ ಪರಊರ ಜನರ ಸಂಭ್ರಮದ ದೃಶ್ಯ, ಯುವ ಸ್ವಯಂ ಸೇವಕರ ಉತ್ಸಾಹ, ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಹಾಯ ಹಸ್ತ ಮನ ತುಂಬುವಂತಿತ್ತು.

ಅದೇ ದಿನ ರಾತ್ರಿ ಧಾರ್ಮಿಕ ಸಭೆ ಹಾಗೂ ಉಪನ್ಯಾಸ ಕಾರ್ಯಕ್ರಮ ಜರುಗಿತು. ಉಡುಪಿಯ ಅಷ್ಟಮಠಗಳ ಯತಿಗಳೀರ್ವರು ಇದರಲ್ಲಿ ಪಾಲ್ಗೊಂಡಿದ್ದರು. ಪೂಜ್ಯ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ಶ್ರೀ ವಿಶ್ವೇಶ ತೀರ್ಥ ಶ್ರೀ ಪಾದರು ಹಾಗೂ ಶ್ರೀ ಅದಮಾರು ಕಿರಿಯ ಮಠಾಧೀಶರಾದ ಶ್ರೀ ಶ್ರೀ ವಿಶ್ವಪ್ರಿಯ ತೀರ್ಥ ಶ್ರೀ ಪಾದರು ಅನುಗ್ರಹ ಭಾಷಣ ಮಾಡಿದರು. ಕೆನರಾ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಜೆ.ಪಿ. ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಈ ಸಮಾರಂಭದಲ್ಲಿ ವೇದಮೂರ್ತಿ ಶ್ರೀ ಹರಿಕೃಷ್ಣ ತಂತ್ರಿಗಳನ್ನು ಸನ್ಮಾನಿಸಲಾಯಿತು. ಅಲ್ಲದೆ ದೇವಳದ ಸೇವಾ ಕಾರ್ಯಕರ್ತ ವಯೋವೃದ್ಧ ಶ್ರೀ ಚೆನ್ನಯ ಸಪಳಿಗ ಎಂಬುವರನ್ನು ಊರ ಜನರ ವತಿಯಿಂದ ಸನ್ಮಾನಿಸಲಾಯಿತು. ಶ್ರೀ ಉದ್ಯಾವರ ಮಾಧವಾಚಾರ್ಯರು ಉಪನ್ಯಾಸ ಮಾಡಿದರು. ಅದೇ ದಿನ ರಾತ್ರಿ ನೃತ್ಯ ವೈಭವ ಹಾಗೂ ಪ್ರಹ್ಲಾದ ಚರಿತ್ರೆ ನೃತ್ಯ ರೂಪಕ, ಶ್ರೀ ಮುಂಡ್ಕೂರು ಕ್ಷೇತ್ರ ಮಹಾತ್ಮೆ ಯಕ್ಷಗಾನ ಪ್ರದರ್ಶನ ನಡೆಯಿತು.

ದಿನಾಂಕ 17 - 3 - 1993 ರಂದು ಮಧ್ಯಾಹ್ನ 12 ಗಂಟೆಗೆ ಮಹಾಪೂಜೆಯಾಗಿ ಬ್ರಹ್ಮರಥಾರೋಹಣ ವೈಭವದಿಂದ ಜರುಗಿತು. ಸಂಜೆ ಭಾರ್ಗವ ಮಂಟಪದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರ ಉಪಸ್ಥಿತಿಯಲ್ಲಿ, ಡಾ। ಶ್ರೀ ಸುಧಾಕರ ಶೆಟ್ಟಿ, ಪ್ರಾಧ್ಯಾಪಕರು, ಕೆ.ಎಂ.ಸಿ. ಮಂಗಳೂರು ಇವರ ಅಧ್ಯಕ್ಷತೆಯಲ್ಲಿ, ಖ್ಯಾತ ಪತ್ರಿಕೋದ್ಯಮಿ ಶ್ರೀ ಎ. ರಾಮಣ್ಣನವರ ಆತಿಥ್ಯದಲ್ಲಿ ಧಾರ್ಮಿಕ ಸಮಾರಂಭ ನಡೆಯಿತು. ಪೂಜ್ಯ ಹೆಗ್ಗಡೆಯವರು ''ದುರ್ಗಾಸ್ಮೃತಿ'' ಸ್ಮರಣ ಸಂಚಿಕೆಯ ಪ್ರಾಯೋಗಿಕ ಸಂಚಿಕೆಯನ್ನು ಬಿಡುಗಡೆಗೊಳಿಸುತ್ತಾ ತನ್ನ ಭಾಷಣದಲ್ಲಿ ಭಕ್ತ ಜನರಲ್ಲಿ ಸುಪ್ತವಾಗಿದ್ದ ದೈವ ಭಕ್ತಿಯನ್ನು ಚೇತನಗೊಳಿಸಿದರು. ರಾತ್ರಿ ಸಂಭ್ರಮದ ರಥೋತ್ಸವ ವಿಜೃಂಭಣೆಯಿಂದ ನೆರವೇರಿತು.

ಧಾರ್ಮಿಕ ಸಮಾರಂಭಗಳೊಂದಿಗೆ, ಮನೋರಂಜನಾತ್ಮಕ ಸಾಂಸ್ಕೃತಿಕ ಕಾರ್ಯಕ್ರಮಗಳು ಶ್ರೀ ದೇವಳದ ಉತ್ಸವಕ್ಕೆ ಕಳೆಯೇರಿಸಿವೆ. ದಿನಾಂಕ 10 - 2 - 1993 ರಿಂದ 20 - 2 - 1993 ರ ತನಕ ಊರ ಪರವೂರ ಭಕ್ತ ಕಲಾಭಿಮಾನಿಗಳ ಸಹಕಾರದಿಂದ ಕನ್ನಡ ಹಾಗೂ ತುಳು, ಭಕ್ತಿ ಪ್ರಧಾನ ಪೌರಾಣಿಕ ಹಾಗೂ ಸಾಮಾಜಿಕ ನಾಟಕಗಳು, ನೃತ್ಯರೂಪಕಗಳು, ಸಂಗೀತ ಕಾರ್ಯಕ್ರಮಗಳು, ಯಕ್ಷಗಾನ ಹಾಗೂ ಹರಿಕಥೆ ಬಹುಜನರನ್ನು ಆಕರ್ಷಿಸಿತು.

ದಿನಾಂಕ 16 - 2 - 1993 ರಂದು ಶ್ರೀ ಸುಬ್ರಮಮಣ್ಯ ಮಠಾಧೀಶರಾದ ಶ್ರೀ ಶ್ರೀ ವಿದ್ಯಾಭೂಷಣ ತೀರ್ಥ ಸ್ವಾಮೀಜಿಯವರು ತಮ್ಮ ಭಕ್ತಿ ಸಂಗೀತ ಸುಧೆಯಲ್ಲಿ ಜನರನ್ನು ತಲ್ಲೀನ ಗೊಳಿಸಿದರು. ದಿನಾಂಕ 18 - 2 - 93 ರಂದು ನಡೆದ ಪುತ್ತೂರು ನರಸಿಂಹ ನಾಯಕ್ ಹಾಗೂ ಬಳಗದವರ ಸಂಗೀತ ರಸ ಸಂಜೆ ಜನರನ್ನು ಪುಲಕಿತಗೊಳಿಸಿತು. ಈ ಕಾರ್ಯಕ್ರಮಗಳೆಲ್ಲವುಗಳ ಪ್ರಾಯೋಜಕರು ಅಭಿನಂದನೀಯರು.

ಈ ರೀತಿ ಬ್ರಹ್ಮ ಕಲಶೋತ್ಸವ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನೆನಪಿನಂಗಳದಲ್ಲಿ ಸದಾ ಹಸಿರಾಗಿ ಉಳಿಯುವಂತಾಗಿದೆ.

ಲೇ: ಜಿ. ತಿರುಮಲ ಶರ್ಮ, ಎಂ.ಎ.ಬಿ.ಎಡ್.
ವಿದ್ಯಾವರ್ಧಕ ಪದವಿ ಪೂರ್ವ ಕಾಲೇಜು, ಮುಂಡ್ಕೂರು.

*With best compliments from:*

**KISSAN PRODUCTS LTD**

BANGALORE

*With best compliments from:*

# KARNATAKA ROADLINES

Rangappa Reddy Complex,
Office No. H.I., 13/1, R.V. Road,
Near Minerva Circle,
BANGALORE - 560 004

*Main Branches:*
BANGALORE, BOMBAY, DELHI, CALCUTTA
Services all over the country

ಓಂ

## ಶ್ರೀ ಕ್ಷೇತ್ರ ಮುಂಡ್ಕೂರಿನ ಪರಿಸರದ ದೇವಾಲಯ ಮತ್ತು ಭೂತಾಲಯಗಳು

- ದೊಂಬ ಶೆಟ್ಟಿಗಾರ್

'ದೇಹೋ ದೇವಾಲಯಃ ಪ್ರೋಕ್ತೋ ಜೀವೋ ದೇವಃ ಸನಾತನಃ' ಈ ದೇಹವೇ ದೇವಾಲಯ. ಇದರೊಳಗಿನ ಜೀವಾತ್ಮನೇ ಪರಮಾತ್ಮ. ಈ ಸತ್ಯ ಸಾಕ್ಷಾತ್ಕಾರಕ್ಕೆ ನಮ್ಮಲ್ಲಿರುವ ದೇವಸ್ಥಾನಗಳು ಹಾಗೂ ದೇವಸ್ಥಾನಗಳು, ಮುಖ್ಯ ಸಾಧನೆಗಳು.

ಶ್ರೀ ಮಹಿಷಮರ್ದಿನಿ ದುರ್ಗಾಪರಮೇಶ್ವರೀ ದೇಗುಲದ ಸುತ್ತ ಮುತ್ತಲಲ್ಲಿ 4-5 ಕಿ.ಮೀಗಳ ವಿಸ್ತೀರ್ಣದೊಳಗಿರುವ ದೇವಾಲಯಗಳು ಹಾಗೂ ಭೂತಾಲಯಗಳು ಹಲವಾರು. ಪರಬ್ರಹ್ಮನನ್ನು ವಿಷ್ಣು - ವಿಠಲ ನೆಂದು ಪೂಜಿಸುವವರಿಗೆ, ಶಿವ-ಶಕ್ತಿ ಎಂದು ಆರಾಧಿಸುವವರಿಗೆ, ದುರ್ಗ-ಮಹಮ್ಮಾಯಿ ಎಂದು ಭಜಿಸುವ ಭಕ್ತರಿಗೆ, ಭೂತಾರಾಧ್ಯಕರಿಗೆ ಧಾರ್ಮಿಕ ಮಾರ್ಗದಲ್ಲಿ ಮುನ್ನಡೆಯಲ್ಲಿ ಇಲ್ಲಿ ಅತುಲ ಅವಕಾಶಗಳಿವೆ.

ಭಗವತ್ಸನ್ನಿಧಿಯು ಹೆಜ್ಜೆ ಹೆಜ್ಜೆಯಲ್ಲಿ ಗೋಚರವಾಗುವ ಈ ಕ್ಷೇತ್ರಗಳ ಕಿರುಪರಿಚಯ ನೀಡುವುದು ನಮ್ಮ ಪ್ರಯತ್ನ.

### ಶ್ರೀ ವಿಠೋಬ ದೇವಸ್ಥಾನ ಮುಂಡ್ಕೂರು

1942ನೇ ಇಸವಿಯಲ್ಲಿ ಮುಂಡ್ಕೂರಿನ ಗೌಡ ಸಾರಸ್ವತ ಬ್ರಾಹ್ಮಣ ಸೇವಾ ಸಮಾಜದವರಿಂದ ನಿರ್ಮಿಸಲ್ಪಟ್ಟ ವಿಠೋಬ ದೇವಸ್ಥಾನದ ದೇವರುಗಳು ಶ್ರೀ ವಿಠೋಬ ನಿಂದೊಡಗೂಡಿದ ರುಕುಮಾ ಮತ್ತು ಸತ್ಯಭಾಮಾ ದೇವಿಯರು. ಭಾವುಕರ ಭಾಗ್ಯ ದೇವತೆಯ ಈ ದೇಗುಲದ ಆಡಳಿತ ಸಮಿತಿಯ ಅಧ್ಯಕ್ಷರು ಶ್ರೀ ವೆಂಕಟೇಶ ಕೇಶವ ಕಾಮತ್‌ರು ತನ್ನ ಕಾರ್ಯ ತತ್ಪರತೆಗೆ ಹೆಸರಾದವರು.

ಸ್ವರ್ಣ ಮಹೋತ್ಸವದ ಸವಿನೆನಪಿನ ಕಲ್ಯಾಣ ಮಂಟಪವು 1992 ರಲ್ಲಿ ರಚಿತವಾಗಿದೆ.

ಪ್ರತಿಷ್ಠಾಪನಾ ದಿನ, ಭಜನಾ ಪೂಜೆ, ಪ್ರಾತಃ ಕಾಲ ಪಶ್ಚಿಮ ಸಾಗರ ಪೂಜೆ, ಅಖಂಡ ಭಜನೆ, ವನಭೋಜನ, ದೀಪೋತ್ಸವ, ಶಿವರಾತ್ರಿ, ಅನಂತ ಚತುರ್ದಶಿ, ಸ್ಕಂದ ಷಷ್ಠಿ, ಮುಕ್ಕೋಟಿದ್ವಾದಶಿ, ವಿಶೇಷ ಉತ್ಸವಗಳು ಇಲ್ಲಿ ನಡೆಯುವ ಧಾರ್ಮಿಕ ಕಾರ್ಯಗಳು. ಕಾಲಕಾಲಕ್ಕೆ ಕಾಶಿ ಮಠಾಧೀಶರುಗಳ ಆಗಮನದಿಂದ ಈ ಕ್ಷೇತ್ರ ಪಾವನವಾಗಿದೆ.

ಶ್ರೀ ದುರ್ಗಾಪರಮೇಶ್ವರಿಯು ನೆಲೆ ನಿಂತ ಶ್ರೀ ಕ್ಷೇತ್ರ ಮುಂಡ್ಕೂರಿನ ನಾಲ್ಕು ದಿಕ್ಕುಗಳಲ್ಲೂ ಶಿವ ದೇವಾಲಯಗಳಿರುವುದು, ಶಿವ-ಶಕ್ತಿಯ ಐಕ್ಯದ ಸಂಕೇತ. ಶ್ರೀ ಮುದ್ದಣ ಮಹಾಲಿಂಗೇಶ್ವರ ದೇವಸ್ಥಾನ, ಇನ್ನ-ವಾಯುವ್ಯ ದಿಕ್ಕಿನಲ್ಲಿ, ಶ್ರೀ ಉಮಾಮಹೇಶ್ವರ ದೇವಸ್ಥಾನ, ಉಳೆಪಾಡಿ - ನೈಋತ್ಯ ದಿಕ್ಕಿನಲ್ಲಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಪೊಸ್ರಾಲು - ಆಗ್ನೇಯ ದಿಕ್ಕಿನಲ್ಲಿ ಶ್ರೀ ಮೃತ್ಯುಂಜಯ ರುದ್ರ ಸೋಮನಾಥೇಶ್ವರ ದೇವಾಲಯ, ಬೋಳ - ಈಶಾನ್ಯ ದಿಕ್ಕಿನಲ್ಲಿ.

### ಶ್ರೀ ಮುದ್ದಣ ಮಹಾಲಿಂಗೇಶ್ವರ ದೇವಸ್ಥಾನ :-

ಇನ್ನ ಗ್ರಾಮದ ಅಧಿದೇವತೆ ಶ್ರೀ ಮಹಾಲಿಂಗೇಶ್ವರ ದೇವರು. ಮುದ್ದಣ ಎಂಬ ಪುಣ್ಯಸ್ಥಳದಲ್ಲಿ ತಪೋನಿಷ್ಠರಾದ ಭಾರ್ಗವ ಮುನಿಗಳು ಕಂಡ ಲಿಂಗವಿದು. ಇದೊಂದು ಉದ್ಭವ ಲಿಂಗವಾಗಿದ್ದು ಅತಿಶಯ ಮಹಿಮೆಗಳಿಂದೊಡಗೂಗಿದೆ. ಸುಮಾರು 3000 ವರ್ಷಗಳ ಹಿಂದೆ ಊರ ಭಕ್ತಾದಿಗಳು ಇದರ ಸುತ್ತಲೂ ಗುಡಿ ಕಟ್ಟಿ, ಭಕ್ತಿ ಶ್ರದ್ಧೆಗಳಿಂದ ಪೂಜಿಸುತ್ತಾ ಶಿವನ ಆರಾಧನೆಯನ್ನು ಮಾಡುತ್ತಾ ಬಂದಿರುವುದು ಸರ್ವವಿದಿತ ವಿಚಾರ. ಶ್ರೀ ಕ್ಷೇತ್ರದಲ್ಲಿ ಶ್ರೀ ಮಹಾಗಣಪತಿಯೂ ಪ್ರತಿಷ್ಠಾಪಿಸಲ್ಪಟ್ಟಿದ್ದು ಭಕ್ತಾಭೀಷ್ಟ ಪ್ರದಾಯಕನಾಗಿ ಮೆರೆಯುತ್ತಿದ್ದಾನೆ.

### ಶ್ರೀ ಉಮಾ - ಮಹೇಶ್ವರ ದೇವಸ್ಥಾನ ಉಳೆಪಾಡಿ :-

ಕಲಿಯುಗದ ಆದಿಯಲ್ಲಿ ಈ ಮನೋಹರವಾದ ಪ್ರದೇಶದಲ್ಲಿ ತಪಸ್ಸು ಮಾಡುತ್ತಿದ್ದ ಉಳಗ (ಊಲೂಕ) ಮಹರ್ಷಿಗಳು ಪ್ರತಿಷ್ಠಾಪಿಸಿದ್ದ ಪಾವನ ಲಿಂಗವಿರುವ ಮಹಾರುದ್ರ ದೇವರ ದೇಗುಲವಿದು. ಈ ಪ್ರದೇಶವು ಅರ್ಜುನನ ಶಕ್ತಿ ಪರೀಕ್ಷೆಗಾಗಿ ಶಿವ-ಪಾರ್ವತಿಯರು ಶಬರ ವೇಷದಲ್ಲಿ ಬಂದು ಕಾದಾಡಿದ ತಾಣವಾಗಿತ್ತೆಂದು ಜೋತಿಷ್ಯದ ಆಧಾರದಿಂದ ತಿಳಿದು ಬಂದ ಸಂಗತಿ. ಕಾಲಾಂತರದಿಂದ ಈ ದೇಗುಲವು ಶಿಥಿಲಗೊಂಡು, ಪೂಜಾ ವಿಧಿಗಳು ಸ್ಥಗಿತಗೊಂಡಾಗ ಮಹಾರುದ್ರ ದೇವರ ಕೋಪಕ್ಕೆ ಊರವರು ತುತ್ತಾಗ ಬೇಕಾಯಿತು. ಊರ ಬುದ್ಧಿ ಜೀವಿಗಳು, ಆಸ್ತಿಕರು ಸೇರಿ, ಜನರ ಸಂಕಷ್ಟ ನಿವಾರಣಾರ್ಥವಾಗಿ ಈಗಿನ

ಶ್ರೀ ಉಮಾ ಮಹೇಶ್ವರ ದೇವಸ್ಥಾನವನ್ನು ನಿರ್ಮಿಸುವುದು ಅನಿವಾರ್ಯವಾಯಿತು. ಶ್ರೀ ಕ್ಷೇತ್ರ ಮುಂಡ್ಕೂರು ಮತ್ತು ಶಾಂಭವೀ ನದಿಯ ಪಶ್ಚಿಮಕ್ಕಿರುವ 'ದೇವರ ಗುಡ್ಡೆ'ಯ ತಪ್ಪಲಲ್ಲಿ ಕಾಣುವ ಈ ದೇಗುಲವನ್ನು ನಿರ್ಮಿಸಿ 25 - 5 - '83 ರಂದು ಬ್ರಹ್ಮಕಲಶ ಉತ್ಸವ ಜರಗಿ ಪ್ರಸ್ತುತ ನಿತ್ಯ ಪೂಜಾರಾಧನೆ ನಡೆಯುತ್ತಾ ಬಂದಿರುತ್ತದೆ. ಅರ್ಚಕರಾಗಿ ಶ್ರೀ ಜಯರಾಮ ಆಚಾರ್ಯ ಮುಂಡ್ಕೂರು ಇವರು ಸೇವೆ ಸಲ್ಲಿಸುತ್ತಿದ್ದಾರೆ. ಪಡ್ಡಣಗುತ್ತು ಶ್ರೀ ನಿರಂಜನ ಶೆಟ್ಟಿ, ದೇಗುಲದ ಆಡಳಿತ ಮೊಕ್ತೇಸರರಾಗಿ ಇದರ ಸರ್ವಾಂಗೀಣ ಪ್ರಗತಿಗಾಗಿ ಶ್ರಮಿಸುತ್ತಿದ್ದಾರೆ.

ಶಿವರಾತ್ರಿಯಂದು ವಿಶೇಷ ಪೂಜೆ, ಭಜನೆಗಳಲ್ಲದೆ ಶ್ರೀ ಕ್ಷೇತ್ರದಲ್ಲಿ ಬ್ರಾಹ್ಮಣ ಆರಾಧನೆಯು ನಡೆಯುತ್ತಿರುವುದು ಸಂತಸದಾಯಕ.

**ಶ್ರೀ ಮಹಾಲಿಂಗೇಶ್ವರ, ಮಹಾಗಣಪತಿ ದೇವಸ್ಥಾನ, ಪೊಸ್ರಾಲು**

ಪರಾಶರ ಮುನಿಯು ತಪೋಮಗ್ನನಾಗಿದ್ದ ಪರಮ ಪವಿತ್ರ ನೆಲ ಪೊಸ್ರಾಲು. ಈ ತಾಣವನ್ನು, ಶಿವನ ಲಿಂಗವನ್ನು ಪ್ರತಿಷ್ಠಾಪಿಸಲು ಮಹಾಮುನಿ ಆಯ್ದುಕೊಂಡ ಕಾಲ ಕಲಿಯುಗದ ಆದಿ ಇರಬಹುದು. ಶ್ರೀ ಮಹಾಲಿಂಗೇಶ್ವರನೆಂದು ಬಿರುದಾಂಕಿತ ಪರ ಶಿವನಿಲ್ಲಿ ಎಳನೀರಿನ ಅಭಿಷೇಕ ಪ್ರಿಯನು. ಭಕ್ತರ ಮನದಾಳದ ಭಕ್ತಿ, ಪ್ರೀತಿಗೆ ಒಲಿದು ಫಲದಾಯಕನಾಗಿದ್ದಾನೆ. 15ನೇ ಶತಮಾನದಲ್ಲಿ ಕುಲಶೇಕರ ನೆಂಬ ಜೈನ ಅರಸನು ಗರ್ಭಗುಡಿಯ ಸುತ್ತಲಿನ ಪೌಳಿಯ ನಿರ್ಮಾಣ ಕಾರ್ಯವನ್ನು ಮಾಡಿದುದಲ್ಲದೆ, ದೇಗುಲದ ಎಲ್ಲಾ ಆಗು ಹೋಗುಗಳಿಗೆ ಅಪಾರ ಭೂಮಿಯನ್ನು ಉಂಬಳಿ ಬಿಟ್ಟಿದ್ದನೆಂದು ಶಿಲಾ ಶಾಸನವು ಸಾರುತ್ತಿದೆ, ಎಂದು ಪ್ರಾಜ್ಞರ ಅಂಬೋಣ.

ಸಚ್ಚೇರ ಪರಾರಿ ಶ್ರೀ ಮಹಾಬಲ ಶೆಟ್ಟರ ಆಡಳಿತದಲ್ಲಿ ಈ ಕ್ಷೇತ್ರ ಹಲವಾರು ಪ್ರಗತಿಗಳನ್ನು ಕಂಡಿದೆ. ಸರ್ವಾಂಗ ಸುಂದರವಾದ ಕಲ್ಯಾಣ ಮಂಟಪವು ಇಲ್ಲಿದೆ. ದೀಪೋತ್ಸವ, ಮಹಾ ಶಿವರಾತ್ರಿ, ರಥೋತ್ಸವಗಳು ಇಲ್ಲಿಯ ಮುಖ್ಯ ಉತ್ಸವಗಳು. ಶ್ರೀ ಮಹಾ ಗಣಪತಿಯು ಇಲ್ಲಿ ಪಂಚಕಜ್ಜಾಯ ದಿಂದ ಸಂಪ್ರೀತನಾಗಿ ಅನುಗ್ರಹಿಸುತ್ತಿದ್ದಾನೆ.

**ಶ್ರೀ ಮೃತ್ಯುಂಜಯ ರುದ್ರ ಸೋಮನಾಥೇಶ್ವರ ದೇವಾಲಯ ಬೋಳ:-**

ಈ ದೇವಾಲಯದ ಮೃತ್ಯುಂಜಯ ಲಿಂಗದ ನಿರ್ಮಾತೃ, ಮಹಾತ್ಮನಾದ ಭೃಗು ಮುನಿ. ಬೋಳದಲ್ಲಿ ಆಡಳಿತ ನಡೆಸುತ್ತಿದ್ದ ಆಕಾಲದ ರಾಜನ ಮಂತ್ರಿ, ರಾಜನ ಕಾಲಾ ನಂತರ ತಾನು ಸ್ವತಂತ್ರ ರಾಜನಂತೆ ಮೆರೆದು ಬಾಳುತ್ತಿದ್ದ. ಕಾಡಿನಲ್ಲಿ ಋಷಿಯೋರ್ವನಿಂದ ಪೂಜೆಗೊಳ್ಳುತ್ತಿದ್ದ, ಮಾರ್ಕಾಂಡೇಯ ರೇಖಾಂಕಿತ ಈ ದಿವ್ಯ ಲಿಂಗವನ್ನು ಆತನಿಂದ ಪಡೆದು ಆ ಸ್ಥಳದಲ್ಲೇ ದೇಗುಲವನ್ನು ನಿರ್ಮಿಸಿ ಮೃತ್ಯುಂಜಯನನ್ನು ಆರಾಧಿಸಲುಪಕ್ರಮಿಸಿದ. ರಾಜನ ಆಳ್ವಿಕೆಯಲ್ಲಿ ದೇಗುಲವು ಬೆಳಗಿ, ಪೂಜಾ ವಿಧಿಗಳು, ಉತ್ಸವಗಳು ವೈಭವದಿಂದ ನೆರವೇರುತ್ತಿದ್ದುದನ್ನು ಇತಿಹಾಸ ಸಾರುತ್ತಿದೆ.

ಕಾಲಕ್ರಮೇಣ ಊರ ಜನರ ಒಗ್ಗಟ್ಟು ಕ್ಷೀಣ ಗೊಂಡು, ಭಕ್ತಿ ಶ್ರದ್ಧೆಗಳು ಮಾಯವಾಗಿ ದೇವಸ್ಥಾನದ ನಿತ್ಯ ವಿಧಿಗೂ ಅಡಚಣೆಯಾದುದು ಊರಿನ ದುರ್ದೈವ.

ಪ್ರಸ್ತುತ ಊರ ಜನರ ಧಾರ್ಮಿಕ ಭಕ್ತಿ ಶ್ರದ್ಧೆಗಳು ಅರ್ಥಿಕಗೊಂಡುದುದರ ಫಲವಾಗಿ, ದೇಗುಲವು ಜೀರ್ಣೋದ್ಧಾರಗೊಳ್ಳುತ್ತಿದೆ. ಪೂಜಾ ವಿಧಿಗಳು ಸಾಂಗವಾಗಿ ನೆರವೇರುತ್ತಿದೆ.

ಕ್ಷೇತ್ರದ ಪ್ರಧಾನ ಶಕ್ತಿಗಳು :- ಮೃತ್ಯುಂಜಯ ರುದ್ರ ಸೋಮನಾಥೇಶ್ವರ ದೇವರು, ಗಣೇಶ ಹಾಗೂ ದೈವಗಳಾದ ಧೂಮಾವತಿ, ಕ್ಷೇತ್ರಪಾಲ, ರಕ್ತೇಶ್ವರಿ, ವಾರಾಹಿ, ವ್ಯಾಘ್ರ ಚಾಮುಂಡಿ, ನಂದಿ, ನಾಗಾಲಯಗಳು.

**ಶ್ರೀ ಆಂಜನೇಯ ದೇವಾಲಯ, ಬೋಳ:-**

'ದಾಸೋಹಂ ರಘುನಾಥಸ್ಯ' ಎಂದು ತನ್ನನ್ನು ಕರೆಸಿಕೊಂಡ ಆಂಜನೇಯ ದೇವರಾದೆ. ಭಕ್ತರಿಂದ ತನಗೆ ದೇವಾಲಯಗಳನ್ನು ನಿರ್ಮಿಸಿಕೊಂಡು ಪೂಜಾರ್ಹನಾದ. ಬೋಳವನ್ನಾಳುತ್ತಿದ್ದ ಜೈನ ಅರಸನ ವೈಶ್ಯ ಮಂತ್ರಿಯ ಇಷ್ಟ ದೇವರು ಶ್ರೀ ಆಂಜನೇಯ ಸ್ವಾಮಿ. ಆತ ಬೋಳದಲ್ಲಿ ಆಂಜನೇಯ ಸ್ವಾಮಿಗೊಂದು ದೇವಸ್ಥಾನ ಕಟ್ಟಿ ಅದರ ಪೂಜಾ ವಿಧಿಗಳಿಗೆ ಬೇಕಾದ ವ್ಯವಸ್ಥೆಗಳನ್ನು ಮಾಡಿದ್ದರೂ, ಶ್ರೀ ಸೋಮನಾಥ ದೇವಾಲಯ ಕಂಡ ದುರವಸ್ಥೆಯನ್ನು ಇದೂ ಕಾಣ ಬೇಕಾಯಿತು.

ಜ್ಯೋತಿಷ್ಯದ ಆಧಾರದಿಂದ ಮಣ್ಣು ಪಾಲಾಗಿದ್ದ ಈ ವಿಗ್ರಹವನ್ನು ಕಂಡು ಹುಡುಕಿ, ಶ್ರೀ ಆಂಜನೇಯ ಸ್ವಾಮಿಗೆ ಸುಂದರವಾದ

ದೇವಾಲಯವನ್ನು ಊರ ಜನರು ನಿರ್ಮಿಸಿದುದಲ್ಲದೆ, ಪೂಜಾ ವಿಧಿಗಳು, ಉತ್ಸವಗಳು ಕ್ರಮದಂತೆ ನಡೆಯುತ್ತಿರುವುದು ಹರ್ಷದಾಯಕ.

**ಕಡಂದಲೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ:-**

ಮುಂಡ್ಕೂರಿನಿಂದ ಮೂಡ ಬಿದಿರೆಗೆ ಹೋಗುವ ರಸ್ತೆಯಲ್ಲಿ ಸುಮಾರು 5 ಕಿ.ಮೀ. ದೂರದಲ್ಲಿ 'ಗೋಲ್ದಡಿ' ಎಂಬ ಹಳ್ಳಿ. ಇಲ್ಲಿ ನಿರ್ಮಿಸಿದ ಮಹಾದ್ವಾರದ ಮಾರ್ಗ ನಮ್ಮನ್ನು ಕಡಂದಲೆ ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ಕ್ಷೇತ್ರಕ್ಕೆ ಒಯ್ಯುತ್ತದೆ.

ಚಾರಿತ್ರಿಕ ಹಿನ್ನಲೆ:- ಕಾರ್ಕಳ ಸೀಮೆಯು ಚೌಟ ಮನೆತನದ ಜೈನ ಅರಸರ ಆಳ್ವಿಕೆಗೆ ಒಳಪಟ್ಟಿದ್ದರೂ, ಇವರು ವಿಜಯನಗರದ ರಾಜರ ಸಾಮಂತರಾಗಿದ್ದರು. ಕಾರಣಾಂತರದಿಂದ ಚೌಟರಸನು ವಿಜಯನಗರದ ರಾಜನ ಕೋಪಕ್ಕೆ ಗುರಿಯಾಗಿ ಕಾರಾಗೃಹವಾಸವನ್ನು ಅನುಭವಿಸ ಬೇಕಾಯಿತು. ಸೆರೆ ಮನೆಯಲ್ಲಿ ದುಃಖದಿಂದ ಬೇಯುತ್ತಿದ್ದ ಚೌಟರಸ ಒಂದು ರಾತ್ರಿ ಶುಭ ಸ್ವಪ್ನ ಕಂಡನು. - ಪಾಳು ಬಿದ್ದ ಒಂದು ಬಾವಿಯಲ್ಲಿ ಶ್ರೀ ಸುಬ್ರಹ್ಮಣ್ಯ ಸ್ವಾಮಿಯ ಶಿಲಾ ವಿಗ್ರಹ. ಅದನ್ನೆತ್ತಿ ಕಡಂದಲೆ ಎಂಬ ಗ್ರಾಮದಲ್ಲಿ ಪ್ರತಿಷ್ಠಾಪಿಸಿದರೆ ಅವನ ಸಂಕಷ್ಟಗಳೆಲ್ಲಾ ಪರಿಹಾರವಾಗುವುದೆಂಬ ಅಭಯ ವಾಣಿ. ಮಹಾರಾಜನೂ ಇದೇ ಕನಸನ್ನು ಕಂಡುದುದರಿಂದ ಚೌಟರಸನಿಗೆ ಕಾರಾಗೃಹದಿಂದ ಮುಕ್ತಿದೊರೆಯಿತು. ಊರನ್ನು ಸೇರಿದ ಚೌಟರಸನು ಶ್ರೀ ಸ್ವಾಮಿಯ ಮೂರ್ತಿಯನ್ನು ಕಡಂದಲೆಯಲ್ಲಿ ಪ್ರತಿಷ್ಠಾಪಿಸಿ ಧನ್ಯನಾದ.

ಹಿಂದೊಮ್ಮೆ ನೀಲಾವರದಿಂದ ಬಂದ ಬ್ರಾಹ್ಮಣ ಕುಟುಂಬದವರು ಇಂದು ಕೂಡಾ ಈ ಕ್ಷೇತ್ರದಲ್ಲಿ ಅರ್ಚಕರಾಗಿ ಮುಂದುವರಿಯುತ್ತಿದ್ದಾರೆ. ಕಡಂದಲೆ ಗುತ್ತು ಶ್ರೀ ಸುದರ್ಶನ ಶೆಟ್ಟಿ ಇವರ ಆಡಳಿತದಲ್ಲಿ ಹಲವು ಸುಧಾರಣೆಗಳನ್ನು ಶ್ರೀ ಕ್ಷೇತ್ರ ಕಂಡಿದೆ. ಹೋಟೇಲು ಉದ್ಯಮದಲ್ಲಿ ಅಂತರಾಷ್ಟ್ರೀಯ ಖ್ಯಾತಿಯ ದಿ| ಕೃಷ್ಣರಾಯರು ಈ ಕ್ಷೇತ್ರ ಉನ್ನತಿಗೆ ಕಾರಣ ಪುರುಷರು.

**ಕಜೆ ಮಹಮ್ಮಾಯಿ ದೇವಸ್ಥಾನ:-**

ಮುಂಡ್ಕೂರು ಗ್ರಾಮಕ್ಕೆ ಒಳಪಟ್ಟ 'ಕಜೆ' ಎಂಬ ಪ್ರದೇಶವು ಸಚ್ಚೆರಿಪೇಟೆಯಿಂದ 1 ಕಿ.ಮೀ. ಅಂತರದಲ್ಲಿರುವ ಒಂದು ಹಳ್ಳಿ.

ಸುಮಾರು 75-80 ವರ್ಷಗಳ ಹಿಂದಿನ ಕಥೆ - ಕಜೆಯಲ್ಲಿ ವಾಸವಾಗಿದ್ದ 6 ಕುಟುಂಬಿಕರ ಮುಖ್ಯ ಕಸುಬು ವ್ಯವಸಾಯ. ಈ ಮನೆಗಳ ಪುಟ್ಟ ಮಕ್ಕಳಿಗೆ ದನಕರುಗಳನ್ನು ಗುಡ್ಡಕ್ಕೆ ಒಯ್ದು ಮೇಯಿಸಿ ಹಿಂದಕ್ಕೆ ತರುವ ಕೆಲಸ. ಸಮಯ ಕಳೆಯಲು ಮಕ್ಕಳಾಡುತ್ತಿದ್ದ ಆಟ ವಿಚಿತ್ರವಾದುದು. ಒಂದು ಕಲ್ಲನ್ನು ಮರದಡಿಯಲ್ಲಿ ನೆಟ್ಟು, ಗುಡ್ಡದ ಕಾಡು ಹೂಗಳನ್ನು ಆಯ್ದು ಅದನ್ನು ಸಿಂಗರಿಸಿ, ಹಣ್ಣುಗಳನ್ನು ಸಮರ್ಪಿಸಿ, ಕೈಗೆ ಸಿಕ್ಕ ಹಕ್ಕಿಗಳನ್ನು ಕೊಯ್ದು ರಕ್ತ ತರ್ಪಣವನ್ನು ನೀಡುತ್ತಿದ್ದುವು ಆ ಮುಗ್ಧ ಹಸುಳೆಗಳು. ಇವರಲ್ಲಿ ಒಬ್ಬನು 'ದರ್ಶನದ ಪಾತ್ರಿ'ಯ ಪಾತ್ರವಹಿಸಿ ಆಟಕ್ಕೆ ಕಳೆ ಏರಿಸುತ್ತಿದ್ದ. ಈ ಆಟವೇ ಮುಂದೆ ಮಹಮ್ಮಾಯಿ ಗುಡಿಯ ಸ್ಥಾಪನೆಗೆ ನಾಂದಿಯಾದುದು ಊರ ಜನರ ಭಾಗ್ಯ! ಈ ದೇವಸ್ಥಾನದ ಎಲ್ಲಾ ಪೂಜಾ ವಿಧಿಗಳ ಜವಾಬ್ದಾರಿಯು 6 ಒಕ್ಕಲಿನವರ ಹೆಗಲ ಮೇಲೆ; ಇದು ಶ್ರೀದೇವಿಯ ಆದೇಶ ಕೂಡ. ಇಂದಿಗೂ ಇದು ನಡೆಯುತ್ತಾ ಬಂದಿದೆ.

ಈ ಕ್ಷೇತ್ರದ ನವೀನ ಗರ್ಭಗುಡಿ ಹಾಗೂ ಸುತ್ತಲ ಪೌಳಿಗಳ ನಿರ್ಮಾಣ 15 ವರ್ಷಗಳ ಹಿಂದೆ ಆಗಿ ಬ್ರಹ್ಮ ಕಲಶ, ಚಂಡಿಕಾಯಾಗಗಳಿಂದ ಪುನೀತವಾಗಿದೆ. ಪ್ರತಿ ವರ್ಷ ವಾರ್ಷಿಕ ಮಾರಿ ಪೂಜೋತ್ಸವ, ಆಷಾಡ ಪೂಜೆ, ಚಂಡಿಕಾ ಯಾಗ, ಭೂರಿ ಭೋಜನ ಮುಂತಾದ ಧಾರ್ಮಿಕ ಕೆಲಸಗಳಲ್ಲದೆ 2 ವಾರಕ್ಕೊಮ್ಮೆ ಮಂಗಳವಾರದಂದು ದೇವಿ ದರ್ಶನವಿದೆ. ಇಲ್ಲಿಯ ದೈವ 'ಗುಳಿಗ'. ನಾಗಬ್ರಹ್ಮರ ಗುಡಿಯೂ ಇದೆ.

**ಭೂತಾಲಯಗಳು**

ಶಿವನ ಗಣಗಳು ಧರ್ಮೋನ್ನತಿಗಾಗಿ ಆಗಾಗ ಅವತರಿಸಿ, ಜನರಲ್ಲಿ ಸತ್ಯ, ಧರ್ಮ ಆಚರಣೆ ವೃದ್ಧಿಯಾಗುವಂತೆ ಪ್ರೇರೇಪಿಸುತ್ತವೆ. ಮಾನವರಾಗಿ ಹುಟ್ಟಿ ತಮ್ಮ ಅತಿಶಯವಾದ ಭಕ್ತಿ, ಶಕ್ತಿ, ಸಾಮರ್ಥ್ಯಗಳಿಂದ ಗೌರವಿಸಲ್ಪಟ್ಟ ಗಂಡು, ಹೆಣ್ಣುಗಳು ಗತಿಸಿದ ಬಳಿಕ ಜನರು ಅವರ ನೆನಪಿನ ಗುಡಿಗಳನ್ನು ನಿರ್ಮಿಸಿ ಆರಾಧಿಸುವುದನ್ನು ನಾವು ಕಾಣುತ್ತೇವೆ. ಇಂಥ ಪ್ರಮುಖ ದೈವ ಸ್ಥಾನಗಳು ಶ್ರೀ ಕ್ಷೇತ್ರ ಮುಂಡ್ಕೂರಿನ ಪರಿಸರದಲ್ಲಿ ಇವೆ. ಅವುಗಳ ಬಗ್ಗೆ ತಿಳಿಯೋಣ.

**ಮುಲ್ಲಡ್ಕ ಗರಡಿ:-**

ಇಲ್ಲಿ ಪ್ರಧಾನವಾದ ದೈವಗಳು ಬ್ರಹ್ಮ ಮತ್ತು ಕೋಟಿ ಚೆನ್ನಯ. ಒಟ್ಟಿನಲ್ಲಿ 'ಬ್ರಹ್ಮ-ಬೈದರ್ಕಳು' ಎಂದೇ ಪ್ರಸಿದ್ಧ.ವರ್ಷದಲ್ಲಿ

3 ದಿನದ ಉತ್ಸವ ಇವರಿಗೆ. ಜಾರಂದಾಯ ದೈವದ ಮಹಿಮೆ ಅಪಾರ. ಮೇ ತಿಂಗಳಲ್ಲಿ ಇದರ ನೇಮೋತ್ಸವ. ಗರಡಿಯಿಂದ ಭಂಡಾರ ಬಂದು ಶ್ರೀ ಕ್ಷೇತ್ರ ಮುಂಡ್ಕೂರಿನ ಮುಂಭಾಗದ ಚಪ್ಪರದಲ್ಲಿ ನೇಮೋತ್ಸವ ಜರಗುವುದು. ಹೆಣ್ಣು ದೈವ - ಮಾಹಿಂದಲೆ, ವ್ಯಾಘ್ರ ಚಾಮುಂಡಿಯ ಗುಡಿಯೂ ಪಕ್ಕದಲ್ಲಿದ್ದು ವರ್ಷಂಪ್ರತಿ ನೇಮೋತ್ಸವ ಜರುಗುತ್ತದೆ.

**ಪೇರೂರು ಆಲಡೆ :-**

ಮುಂಡ್ಕೂರಿನಿಂದ ಮೂಡಬಿದಿರೆಯ ಮಾರ್ಗದಲ್ಲಿ 3 ಕಿ.ಮೀ ದೂರದಲ್ಲಿ ಮಾರ್ಗದ ಬಲಪಾರ್ಶ್ವದಲ್ಲಿ ಶ್ರೀ ಅಬ್ಬಗ-ದಾರಗ, ಬ್ರಹ್ಮಲಿಂಗೇಶ್ವರ ಸನ್ನಿಧಿ ಇದೆ. ಇಲ್ಲಿಯ ಶಕ್ತಿಗಳು ಬ್ರಹ್ಮಲಿಂಗೇಶ್ವರ, ಕುಮಾರ, ಸಿರಿ, ಅಬ್ಬಗ-ದಾರಗ ದೇವಿಯರು. ವೀರಭದ್ರ ಹಾಗೂ ನಂದಿ ಗೋಣ ಮೂಲ ಮೈಸಂದಾಯ, ಕ್ಷೇತ್ರಪಾಲ ಮತ್ತು ರಕ್ತೇಶ್ವರಿಯರ ಗುಡಿಯೂ ಇದೆ. ಪ್ರತಿ ವರ್ಷ ಮೇ ತಿಂಗಳ 1ನೇ ತಾರೀಕಿನಿಂದ ಆಲಡೆ ಉತ್ಸವವು ಸಾವಿರಾರು ಜನರನ್ನು ಆಕರ್ಷಿಸುತ್ತದೆ.

**ಉಳೆಪಾಡಿಯ ಗುಡ್ಡೆ ದೇವಸ್ಥಾನ :-**

ಇಲ್ಲಿಯ ದೈವಗಳು - ಧೂಮಾವತಿ, ಉಲ್ಲಯ, ಜಾರಂದಾಯ, ಸರಳಧೂಮಾವತಿ, ಕಾಂತಾ ಬಾರೆ - ಬೂದಾಬಾರೆ ಮತ್ತು ಸಾವಿರ ಮಣ ಭೂತ. ಪ್ರತಿ ವರ್ಷವೂ ನೇಮೋತ್ಸವ, ಹರಕೆ ಸೇವೆಗಳು ಜರಗುತ್ತವೆ.

**ಇನ್ನ ಗರಡಿ :-**

ಪ್ರದಾನ ದೈವ ಧೂಮಾವತಿ ಹಾಗೂ ವ್ಯಾಘ್ರ ಚಾಮುಂಡಿ.

**ಸಂಕಲಕರಿಯದ ಕೋರ್ದಬ್ಬು ದೇವಸ್ಥಾನ :-**

ದೊಡ್ಡ ಮನೆ ಮತ್ತು ಊರವರ ಸಹಕಾರದಿಂದ ದೈವರಾಜ ಕೋರ್ದಬ್ಬು ಮತ್ತು ತಣಿಮಾನಿಗ ದೈವಗಳ ಆರಾಧನೆ ಮತ್ತು ನೇಮೋತ್ಸವಗಳು ಜರಗುತ್ತವೆ.

**ಕೊಲ್ಲೊಟ್ಟು ಕೋರ್ದಬ್ಬು ದೇವಸ್ಥಾನ :-**

ಸಾಂತ್ರಾಲಗುತ್ತಿನವರ ಮುಂದಾಳುತನದಲ್ಲಿ ಊರವರ ಸಹಕಾರದಿಂದ ಪೂಜಾವಿಧಿಗಳು, ನೇಮೋತ್ಸವಗಳು ಸಾಂಗವಾಗಿ ನೆರವೇರುತ್ತಿವೆ.

**ಬೋಳದ ಮುಗುಳಿಗಿರ :-**

ಬ್ರಹ್ಮಲಿಂಗೇಶ್ವರ ಇಲ್ಲಿಯ ಶಕ್ತಿ. ದೈವಾಂಶ ಸಂಭೂತೆಯಾದ ಸಿರಿಗೆ ಎಲ್ಲಾ ವಿಧಗಳಲ್ಲೂ ಅನುಗ್ರಹಿಸಿದೆ ಬ್ರಹ್ಮನನ್ನು ಇಲ್ಲಿ ಬ್ರಹ್ಮಲಿಂಗೇಶ್ವರನೆಂದು ಆರಾಧಿಸಲಾಗುತ್ತಿದೆ. ಸೋಮನಾಥ ದೇವರ ಧ್ವಜಾರೋಹಣದ ದಿನ ಇಲ್ಲಿ ಪೂಜೆ ನಡೆದು ವರ್ಷಾವಧಿ ಉತ್ಸವವು ಮೀನ ಮಾಸದ ಶುದ್ಧ ಚತುರ್ದಶಿಯಂದು ನಡೆಯುತ್ತಿದೆ. ಬ್ರಹ್ಮಲಿಂಗೇಶ್ವರನು ಕ್ಷಿಪ್ರ ಫಲದಾತನು.

ಜನರ ಭಾವನೆಗಳು ದೈವತ್ವದಕಡೆಗೆ ಹರಿದಾಗ ಅವರ ರೀತಿ-ನೀತಿ, ಆಚಾರ-ವಿಚಾರಗಳು ಉತ್ತಮಗೊಂಡು ಸಮಾಜದಲ್ಲಿ ಸುಖ ಶಾಂತಿ ನೆಲೆಸುತ್ತದೆ. ಜನರಲ್ಲಿ ದೈವ ಪ್ರೀತಿ, ಪಾಪ ಭೀತಿ, ಸಂಘ ನೀತಿ ಬಲವಾದಾಗ ಮಾತ್ರ ಧರ್ಮ ಸ್ಥಾಪನೆ ಸಾಧ್ಯ. ಇಂಥಹ ಪವಿತ್ರ ಕ್ಷೇತ್ರಗಳಲ್ಲಿ ಜನರನ್ನು ಕತ್ತಲೆಯಿಂದ ಬೆಳಕಿನೆಡೆಗೆ, ಅಸತ್ಯದಿಂದ ಸತ್ಯದೆಡೆಗೆ, ವಿನಾಶದಿಂದ ಅಮೃತತ್ವದೆಡೆಗೆ ಕೊಂಡೊಯ್ಯುವ ಸಾರ್ಥಕ ಕಾರ್ಯಗಳು ನಿರಂತರ ಜರಗುತ್ತಿರಲಿ ಎಂದು ಹಾರೈಸೋಣ.

ಲೇಖಕರು : **ದೊಂಬಶೆಟ್ಟಿಗಾರ್**, ಅಧ್ಯಾಪಕ,
ವಿದ್ಯಾವರ್ಧಕ ಪದವಿಪೂರ್ವ ಕಾಲೇಜು,
ಮುಂಡ್ಕೂರು, ದ.ಕ.



ದೇವಳದ ಒಳಅಂಗಣದಲ್ಲಿರುವ ಧೂಮವತಿ ದೈವ



ವಿನೂತ ಭಾರ್ಗವ ಮಂಟಪ,
ದೇವಳದ ಉತ್ಸವದ ಸಮಯದಲ್ಲಿ ನಡೆಯುವ ಸಾಂಸ್ಕೃತಿಕ ಚಟುವಟಿಕೆಗಳು ಇದರಲ್ಲಿಯೇ ಜರಗುವುದು



ಆಕರ್ಷಕವೆನಿಸಿರುವ ಜಿಲ್ಲೆಯಲ್ಲೆ ಬೃಹತ್ತಾದ ಬ್ರಹ್ಮ ರಥ



ಹೊರಾಂಗಣದಲ್ಲಿರುವ ರಕ್ತೇಶ್ವರಿ ದೈವಸ್ಥಾನ



ಶ್ರೀ ದುರ್ಗಾಪರಮೇಶ್ವರೀ ದೇವಳದ ಚಂದ್ರಮಂಡಲ ರಥ




ಶ್ರೀ ದೇವಳದ 'ಅಂಬಿಕಾನಿಲಯ'



ಬ್ರಹ್ಮಕಲಶೋತ್ಸವಕ್ಕೆ ಊರ-ಪರವೂರ ದಾನಿಗಳಿಂದ ಕೊಡುಗೆಯಾಗಿ ಬಂದ ತರಕಾರಿಯ ಒಂದು ನೋಟ



ಬ್ರಹ್ಮಕಲಶೋತ್ಸವಕ್ಕೆ ಊರ-ಪರವೂರ ದಾನಿಗಳಿಂದ ಕೊಡುಗೆಯಾಗಿ ಬಂದ ಅಕ್ಕಿಮುಡಿ ರಾಶಿ



ಶ್ರೀ ದೇವಳದ ಮುಂಭಾಗ



ಒಳಪ್ರಾಂಗಣದ ಮುಖ್ಯದ್ವಾರ



ತೀರ್ಥಮಂಟಪದಲ್ಲಿ ಪ್ರಧಾನ ಅರ್ಚಕ ಶ್ರೀ ವೇ.ಮೂ. ಜಯರಾಮ ಆಚಾರ್ಯರು



## ಅಪೂರ್ವ ಕಂಬಗಳು

ಇಲ್ಲಿಯ ದೇವಸ್ಥಾನದ ಅಂಬೆಲದ ಇಕ್ಕಡೆಗಳಲ್ಲಿರುವ ಎರಡು ಕಂಬಗಳು ವಿಶೇಷ ಕೆತ್ತನೆಯ ಕೆಲಸಗಳುಳ್ಳ ಕಂಬಗಳಲ್ಲವಾದರೂ ಗಾತ್ರದ ದೃಷ್ಟಿಯಿಂದ ನಮ್ಮ ಜಿಲ್ಲೆಯಲ್ಲಿಯೇ ಇಂತಹ ಕಂಬಗಳು ದೊರಕುವುದು ಬಹಳ ಅಪರೂಪ. ಪ್ರತಿಯೊಂದು ಕಂಬದ ಸುತ್ತಳತೆಯು 96 ಇಂಚುಗಳಿವೆ. ಈ ಎರಡು ಕಂಬಗಳನ್ನು ಒಂದೇ ಹಲಸಿನ ಮರದಿಂದ ತಯಾರಿಸಲಾಗಿದೆ. ಮೂಡಬಿದಿರೆಯ ಅರಮನೆಯ ಮುಂಭಾಗದಲ್ಲಿದ್ದ ಈ ಮರವನ್ನು ಶ್ರೀದೇವಿಗೆ ಭಕ್ತಿಪೂರ್ವಕವಾಗಿ ಅರ್ಪಿಸಿರುವರಂತೆ.



ವಿಘ್ನ ವಿನಾಶಕ
ಶ್ರೀ ಗಣಪತಿಯ ವಿಗ್ರಹ



ಮಧ್ವ ಸಮಾಜದವರಿಂದ ಕೊಡುಗೆಯಾಗಿ ನೀಡಿದ ಶ್ರೀ ರಾಘವೇಂದ್ರ ಮಂದಿರ



ನವೀಕೃತ ವಸಂತ ಮಂಟಪ

# ಸಂಪಾದಕರ ಲೇಖನಿಯಿಂದ

ಸಾಣೂರಿನಲ್ಲಿ ಉದ್ಭವಿಸಿ, ಪಶ್ಚಿಮವಾರಿಧಿಯನ್ನು ಸೇರುವ ಪುನೀತೆಯಾದ ನದಿ ಶಾಂಭವಿ. ಈ ನದಿಯು ಶ್ರೀಕ್ಷೇತ್ರ ಮುಂಡ್ಕೂರಿನ ಸಮೀಪ ಬಂದಾಗ ತನ್ಮಯತೆಯಿಂದ ಸಾಗಿ ತುಂಬಿ ಹರಿಯುತ್ತಿರುವಳು. ಈ ನದಿಯ ಇಕ್ಕೆಲಗಳಲ್ಲೂ ಕಣ್ಣು ಹಾಯಿಸಿದಷ್ಟು ದೂರಕ್ಕೆ ಕಾಣುವ ಬತ್ತದ, ಪಚ್ಚೆಪೈರಿನ ಹೊಲಗದ್ದೆಗಳು. ಸುತ್ತಲೂ ಬೆಟ್ಟಗುಡ್ಡಗಳ ಗಂಭೀರ ಹಿನ್ನೆಲೆ ಈ ಸುಂದರ ಪ್ರಕೃತಿಗೆ ಕಲಶವಿಟ್ಟಂತೆ ಕಾಣುವುದು. ಮುನಿಪುಂಗವ ಭಾರ್ಗವ ಮಹರ್ಷಿಗಳಿಂದ ಪ್ರತಿಷ್ಠಾಪಿಸಲ್ಪಟ್ಟ ಶ್ರೀ ದುರ್ಗಾಪರಮೇಶ್ವರಿಯ ದಿವ್ಯ ದೇಗುಲ. ಮುಂಡಾಸುರನನ್ನು ಸಂಹಾರಗೈದ ಮಹಿಷಮರ್ದಿನಿ ಶ್ರೀ ದುರ್ಗಾಪರಮೇಶ್ವರಿ ನೆಲೆನಿಂತ ಪುಣ್ಯಕ್ಷೇತ್ರ ಈ ಮುಂಡ್ಕೂರು. ಇದೀಗ ಈ ದೇಗುಲದಲ್ಲಿ ಅಷ್ಟಬಂಧ ಬ್ರಹ್ಮಕಲಶೋತ್ಸವದ ಸಂಭ್ರಮ.

ಪುರಾಣ ಪ್ರಸಿದ್ಧವಾದ ಈ ಕ್ಷೇತ್ರವಿದೀಗ ಅನೇಕ ಜೀರ್ಣೋದ್ಧಾರ, ನವೀಕರಣಗಳಿಂದ ಕಂಗೊಳಿಸುತ್ತಿದೆ. ಈ ಸಂದರ್ಭದಲ್ಲಿ ದೇಗುಲವನ್ನು ಶುದ್ಧೀಕರಣಗೊಳಿಸಿ, ಯಾಗ ಯಜ್ಞಾದಿಗಳಿಂದ ದೇವತೆಗಳನ್ನು ಆಹ್ವಾನಿಸಿ, ಶ್ರೀಕ್ಷೇತ್ರದಲ್ಲಿ ದೈವೀಶಕ್ತಿ ಕಳೆಗೂಡುವಂತೆ ಮಾಡುವುದೇ ಅಷ್ಟಬಂಧ ಬ್ರಹ್ಮಕಲಶೋತ್ಸವದ ಉದ್ದೇಶ. ಇದು ದೇಗುಲದ, ಊರಿನ ಶ್ರೇಯಸ್ಸಿನ ದೃಷ್ಟಿಯಲ್ಲಿ ಮಹೋನ್ನತ ಸಮಾರಂಭ. 'ಯದ್ಭಾವಂ ತದ್ಭವತಿ' ಎಂಬ ವೇದವಾಕ್ಯದಂತೆ ಭಕ್ತಿ ಭಾವನೆ ಹೆಚ್ಚಾದಷ್ಟು ದೇವಿಯು ನಮಗೆ ಹೆಚ್ಚು ಆಧ್ಯಾತ್ಮಿಕ, ಆದಿಭೌತಿಕ, ಸುಖ ಶಾಂತಿಯನ್ನು ನೀಡಬಲ್ಲಳು.

ಬ್ರಹ್ಮಕಲಶವು ಊರಪರವೂರ ಭಕ್ತಾದಿಗಳಿಗೆ ಭಕ್ತಿಯ ಸಂಗಮಕ್ಕೆ ಕಲಶ ಪ್ರಾಯವಿದ್ದಂತೆ. ಬ್ರಹ್ಮಕಲಶೋತ್ಸವವು ಸಹಸ್ರಾರು ಭಕ್ತರ ಕೊಡುಗೆಯಿಂದ, ದಾನಿಗಳ ಕಾಣಿಕೆಗಳಿಂದ ಚೈತನ್ಯ ಪಡೆಯಬೇಕಾದದ್ದು ಸಹಜ. ಬ್ರಹ್ಮಕಲಶೋತ್ಸವ ಕೇವಲ ಧಾರ್ಮಿಕ ಭಾವನೆಗಳಿಗೆ ಇಂಬುಕೊಡುವುದಲ್ಲದೆ, ಕಲೆ, ಸಂಸ್ಕೃತಿಯ ಸಮ್ಮೇಳನದ ಕೇಂದ್ರವಾಗಬೇಕೆಂಬ ಉದ್ದೇಶದಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ನಮ್ಮ ದೇಶದ ಸಂಸ್ಕೃತಿಯ ಐಕ್ಯತೆಯ ದ್ಯೋತಕವಾಗಿ ಸಾಂಸ್ಕೃತಿಕ ಚಟುವಟಿಕೆಗಳನ್ನು ಸಾಂಸ್ಕೃತಿಕ ಸಮಿತಿಯು ಹಮ್ಮಿಕೊಂಡಿದೆ.

ಅಷ್ಟಬಂಧ-ಬ್ರಹ್ಮಕಲಶೋತ್ಸವ ಜರುಗುವ ಈ ವಿಶಿಷ್ಟ ಸುಸಂದರ್ಭದಲ್ಲಿ ನಡೆಯುವ ಕಾರ್ಯಕ್ರಮಗಳು ಅವಿಸ್ಮರಣೀಯವಾಗಿ ಉಳಿಯುವಂತೆ ಮಾಡುವುದೇ ನಮ್ಮೀ ಸಂಚಿಕೆಯ ಉದ್ದೇಶ. ಭಕ್ತಾಭಿಮಾನಿಗಳ ಸ್ಮೃತಿಪಟಲದಲ್ಲಿ ದುರ್ಗಾಪರಮೇಶ್ವರಿಯ ವಿಜೃಂಭಣೆಯ ಉತ್ಸವ ಸ್ಥಿರವಾಗಿಸುವುದು ''ದುರ್ಗಾ ಸ್ಮೃತಿ''ಯ ಸದುದ್ದೇಶ. ಶ್ರೀಕ್ಷೇತ್ರದ ಪರಿಚಯದೊಂದಿಗೆ ಧಾರ್ಮಿಕ ವಿಚಾರಗಳನ್ನು ಸಮಾರಂಭದ ನೆನಪುಗಳನ್ನು ಸಚಿತ್ರವಾಗಿ ನಿಮ್ಮ ಮುಂದಿಡುವ ಪ್ರಯತ್ನ ನಮ್ಮದು. ಸಂಸಾರ ಜಂಜಾಟದಲ್ಲಿ ಮುಳುಗಿರುವ ನಮಗೆ ಈ ಸಂಚಿಕೆಯನ್ನು ಕಂಡಾಗಲಾದರೂ ಉತ್ಸವದ ಸವಿನೆನಪು ನಮ್ಮಲ್ಲಿ ಭಕ್ತಿಭಾವನೆಗಳನ್ನು ಸ್ಫುರಿಸಬಹುದೆಂಬುದು ನಮ್ಮ ನಂಬಿಕೆ.

ಶ್ರೀಕ್ಷೇತ್ರದ ಆಡಳಿತ ಮೊಕ್ತೇಸರರಾದ ಶ್ರೀ ಯಂ. ಜಗದೀಶ್ಚಂದ್ರ ಹೆಗ್ಡೆಯವರ ಸಂಪೂರ್ಣ ಬೆಂಬಲ, ಶ್ರೀದೇವಳದ ಮೊಕ್ತೇಸರ ಹಾಗೂ ಅರ್ಚಕರಾದ ಶ್ರೀವೇದಮೂರ್ತಿ ಜಯರಾಮ ಆಚಾರ್ಯರ ಆಶೀರ್ವಾದ ಈ ಕಾರ್ಯಕ್ಕೆ ಭಕ್ತಿ ಹಾಗೂ ಶಕ್ತಿ ದಾಯಕ. ಎಲ್ಲದಕ್ಕಿಂತಲೂ ಮುಖ್ಯವಾಗಿ ಜಗನ್ಮಾತೆ ಶ್ರೀ ದುರ್ಗಾಪರಮೇಶ್ವರಿಯ ಅನುಗ್ರಹ ಈ ಸಂಚಿಕೆಗೆ ಅಭಯಕವಚ.

ಶ್ರೀ ದುರ್ಗಾಪರಮೇಶ್ವರಿಯ ಭಕ್ತಾಭಿಮಾನಿಗಳಾದ ಸಾಹಿತಿಗಳು, ವಿದ್ವಾಂಸರೂ ತಮ್ಮ ಲೇಖನಗಳಿಂದ ಈ ಸಂಚಿಕೆಯನ್ನು ಶ್ರೀಮಂತಗೊಳಿಸಿದ್ದಾರೆ. ನೀಡಿದ ಅಲ್ಪ ಕಾಲದಲ್ಲಿಯೇ ತಮ್ಮ ಪ್ರತಿಭೆಯಿಂದ ಅತ್ಯುತ್ತಮ ಲೇಖನಗಳನ್ನು ನೀಡಿದ ಇವರ ತುಂಬು ಹೃದಯದ ಸಹಕಾರ ಅನನ್ಯ. ಜಾಹಿರಾತುಗಳನ್ನು ನೀಡಿ ಆರ್ಥಿಕ ಬಲವನ್ನು ಹೆಚ್ಚಿಸಿದ ಶ್ರೀಕ್ಷೇತ್ರದ ಅಭಿಮಾನಿಗಳು ಅಭಿನಂದನೀಯರು. ಛಾಯಾಚಿತ್ರಗಳನ್ನು ಸಕಾಲದಲ್ಲಿ ನೀಡಿ ಸಹಕರಿಸಿದ ಮುಂಡ್ಕೂರು ಫೋಟೋ ಸ್ಟುಡಿಯೋದವರ ಕಾರ್ಯ ಮೆಚ್ಚುವಂತದ್ದು. ಸ್ಮರಣ ಸಂಚಿಕೆ ಸಮಿತಿಯ ಎಲ್ಲಾ ಸದಸ್ಯರ ತುಂಬು ಹೃದಯದ ಸಹಕಾರದ ನೆನಪು ನನ್ನ ಹೃದಯ ತುಂಬಿದೆ. ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಆತ್ಮ ನಿವೇದಿತ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

''ಆಕಾಶಾತ್ ಪತಿತಂ ತೋಯಂ ಯಥಾಗಚ್ಛತಿ ಸಾಗರಂ।
ಸರ್ವದೇವ ನಮಸ್ಕಾರ ಶ್ರೀದುರ್ಗಾಂ ಪ್ರತಿಗಚ್ಛತಿ''॥

ಅಂದರೆ ಆಕಾಶದಿಂದ ಸುರಿದ ಮಳೆಯೆಲ್ಲ ಸಾಗರವನ್ನು ಸೇರುವಂತೆ ಎಲ್ಲಾ ದೇವರಿಗೂ ಮಾಡಿದ ನಮಸ್ಕಾರ ಶ್ರೀ ದುರ್ಗಾಮಾತೆಗೆ ಸಲ್ಲುತ್ತದೆ. ಅಂತೆಯೇ ಈ ಸಂಚಿಕೆಯನ್ನು ಶ್ರೀ ದುರ್ಗಾಪರಮೇಶ್ವರಿಯ ಪಾದ ಕಮಲಗಳಿಗೆ ಅರ್ಪಿಸುತ್ತಾ ನನ್ನ ಲೇಖನಿಯನ್ನು ಕೆಳಗಿಳಿಸುತ್ತಿದ್ದೇನೆ.

ಇತೀ ನಿಮ್ಮವ,

ಬಿ. ಮಂಜುನಾಥ ಹೆಗ್ಡೆ

ಪ್ರಧಾನ ಸಂಪಾದಕ

# ಧರ್ಮದರ್ಶಿಗಳ ಅನಿಸಿಕೆ

ಶ್ರೀಕ್ಷೇತ್ರ ಮುಂಡ್ಕೂರಿನ ಶ್ರೀ ದುರ್ಗಾಪರಮೇಶ್ವರೀ ದೇವಾಲಯದಲ್ಲಿ ನಡೆಯುವ ಅಷ್ಟಬಂಧ-ಬ್ರಹ್ಮ ಕಲಶೋತ್ಸವದ ಪರ್ವದಿನಗಳು ಸ್ಮೃತಿಪಟಲಗಳಲ್ಲಿ ಸ್ಥಿರವಾಗಿ ನಿಲ್ಲುವ ಒಂದು ವಿಶೇಷ ಕಾರ್ಯಕ್ರಮ. ಈ ಸಂದರ್ಭದಲ್ಲಿ ದೇವಳದ ಜೀರ್ಣೋದ್ಧಾರ ಕಾರ್ಯಕ್ರಮಗಳಲ್ಲಿ ಸಹಕರಿಸಿದ ಸಕಲ ಭಕ್ತಾಭಿಮಾನಿಗಳೆಲ್ಲರೂ ಸ್ಮರಣೀಯರು. ಅದರಲ್ಲಿಯೂ ಸದಾಕಾಲ ಬ್ರಹ್ಮಕಲಶೋತ್ಸವಾದಿ ಸಕಲ ಪುಣ್ಯಕಾರ್ಯಗಳಲ್ಲಿ ಸಹಕರಿಸಿದವರು ಗರಡಿಮನೆ ಶ್ರೀ ರಾಜು ಶೆಟ್ಟಿ ಮತ್ತು ಸಹೋದರರು. ಮುಲ್ಲಡ್ಕ ಹೊಸಮನೆ ದಿ. ಶ್ರೀ ವೆಂಕಣ್ಣ ಶೆಟ್ಟಿಯವರು, ಇವರ ಪತ್ನಿ ಮತ್ತು ಮಕ್ಕಳು; ಶ್ರೀ ಕೃಷ್ಣಮೂರ್ತಿ ಉಡುಪ ಮತ್ತು ಸಹೋದರರು, ಇವರನ್ನೂ ಈ ಸಂದರ್ಭದಲ್ಲಿ ಮರೆಯುವಂತಿಲ್ಲ. ಬ್ರಹ್ಮಕಲಶೋತ್ಸವದಂತಹ ಮಹತ್ಕಾರ್ಯದಲ್ಲಿ ಊರಪರವೂರ ಅನೇಕ ಮಹನೀಯರು ಭಕ್ತಿಪೂರ್ವಕವಾಗಿ ತನು, ಮನ, ಧನಗಳಿಂದ ಸಹಕರಿಸಿದ್ದಾರೆ. ಇವರೆಲ್ಲರೂ ಅಭಿನಂದನೀಯರು.

''ಸಕಲ ಕಾಲಸ್ಯ ಕಾರಣಂ'' ಎಂಬಂತೆ ಪ್ರತಿಯೊಂದು ಕಾರ್ಯಕ್ಕೂ ಕಾಲ ಕೂಡಿ ಬರಬೇಕು. ಆದರೂ ಶ್ರೀ ದೇಗುಲದ ಜೀರ್ಣೋದ್ಧಾರ, ನವೀಕರಣ ಹಾಗೂ ಇನ್ನಿತರ ಅನೇಕ ಉಪಯುಕ್ತ ಕಾರ್ಯಕ್ರಮ ಜರಗುವಂತೆ ನಮಗೆಲ್ಲ ಸ್ಫೂರ್ತಿ ನೀಡಿದ್ದು ಜಗನ್ಮಾತೆ ಶ್ರೀ ದುರ್ಗಾಪರಮೇಶ್ವರೀ ದೇವಿ ಎನ್ನುವುದು ನಿರ್ವಿವಾದ. ಕರುಣಾಮಯಿಯಾದ ಜಗದ್ವಂದ್ಯೆ ಶ್ರೀದೇವಿಯು ನಮ್ಮೆಲ್ಲರನ್ನು ಕಾಪಾಡಲಿ ಎಂದು ಆಶಿಸುತ್ತೇನೆ.

**ನಡಿಗುತ್ತು ಯಂ. ಜಗದೀಶ್ಚಂದ್ರ ಹೆಗ್ಡೆ,**

ಆಡಳಿತ ಮೊಕ್ತೇಸರರು
ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ
ಮುಂಡ್ಕೂರು.

# ದೇವೀ ಸುಪ್ರಭಾತ

ರಾಗ: ಮೋಹನ
ತಾಳ: ಝಂಪೆ

ಏಳು ದುರ್ಗಾಂಬಿಕೆಯೆ, ಏಳು ಜಗದಾಂಬಿಕೆಯೆ।
ಒಳಮ್ಮ ಏಳು ನೀ ಬೆಳಗಾಯಿತು ।।ಪಲ್ಲವಿ।।

ಶರಣರೆಲ್ಲರು ನಿನ್ನ ದರುಶನಕೆ ಕಾದಿಹರು।
ದುರುಳ ಮಹಿಷನ ಕೊಂದು ದಣಿವಾಯ್ತೊ ನಿನಗೆ ।।ಅ.ಪ.।।

ತರಿದು ಮುಂಡನ ತಾಯೆ। ವರ ಮುಂಡ್ಕೂರೇಶ್ವರಿಯೆ।
ಹರುಷದಲಿ ನೆಲೆ ನಿಂತೆ ಪ್ರಣವಸ್ವರೂಪೆ।।

ಪೊರೆವೆನೆಂಬೀ ಬಿರುದು। ಧರಿಸಿಲು ಭಯವೇನು।।
ಮರೆಹೊಕ್ಕೆ ನಾ ನಿನ್ನ। ವರಮಹಿಷ ಮರ್ದಿನಿಯೆ।। । ।।

ಪರಮ ಋಷಿ ಭಾರ್ಗವನು। ಪರಮಾತಿಶಯದಿಂದ।।
ಪರಮ ಮಂಗಳೆ ನಿನ್ನ ಪ್ರತಿಷ್ಠಿಸಿದನು।।

ಪರಮೇಶ್ವರಿಯೇ ಬೇಗ। ದುರಿತವನು ಪರಿಹರಿಸಿ।
ಕರುಣದಲಿ ಪೊರೆಯಮ್ಮ ವರದೆ ಶಾಂಭವಿಯೆ ।।2।।

ಹೊಳೆವ ಪೀತಾಂಬರದಿ। ಥಳಥಳಿಪ ಹಾರದಿಂ।
ಇಳೆಯೊಳತಿ ಮಿಗಿಲೆನಿಪ ರತ್ನ ಕಿರೀಟ।।

ಹೊಳೆವ ಕರದಲಿ ಶಂಖ, ಚಕ್ರವನು ಧರಿಸುತಲಿ।
ಬಲದ ಹಸ್ತದಿ ಇರಿದೆ। ಖೂಳ ಮಹಿಷನ ಶಿರವ।।3।।

ಸಲ್ಲಿಸಲು ಸೇವೆಯನು। ಮಲ್ಲಿಗೆಯ ಪುಷ್ಪದಿಂ।
ಫುಲ್ಲಲೋಚನೆ ಬೇಗ ಮಂದಹಾಸದಲಿ।।

ಒಲಿಯುತಲಿ ನೆಲೆನಿಂತೆ। ಮಾಧವನ ಭಗಿನಿಯೆ।
ಸಲ್ಲೀಲೆಯಲಿ ಪೊರೆವ। ಭಾರವದು ನಿನಗೆ ।।4।।

ಯಂ. ನಾರಾಯಣ ಸಪಳಿಗ, ಎಂ. ಎ.
ಮುಖ್ಯೋಪಾಧ್ಯಾಯರು,
ಪೊಸ್ರಾಲ್ ಖಾಸಗಿ ಹಿರಿಯ ಪ್ರಾಥಮಿಕ ಶಾಲೆ,
ಅಂಚೆ: ಸಚ್ಚೇರಿ ಪೇಟೆ, ಮುಂಡ್ಕೂರು.

# ಮುನಿಪುಂಗವ ಭಾರ್ಗವ ಋಷಿಯವರಿಂದ ಪ್ರತಿಷ್ಠಾಪಿತ
# ಶ್ರೀಕ್ಷೇತ್ರ ಮುಂಡ್ಕೂರು

ನಮ್ಮ ಈ ಭರತಖಂಡದ ಮಣ್ಣಿನ ಕಣಕಣಗಳಲ್ಲಿಯೂ ದೈವೀ ಶಕ್ತಿಯನ್ನು ಕಂಡುಕೊಂಡ ಋಷಿಮುನಿಗಳು, ಸ್ಥಳದ ಮಹತ್ವವನ್ನು ಅರಿತು, ದೇಗುಲವನ್ನು ನಿರ್ಮಿಸಿ, ನಾಡಿನ ಜನತೆಯಲ್ಲಿ ಧರ್ಮಪ್ರಜ್ಞೆಯನ್ನು ಜಾಗೃತಗೊಳಿಸುವುದರೊಂದಿಗೆ ಇಹಪರಕ್ಕೂ ಸುಖ-ಶಾಂತಿಯ ದಾರಿ ತೋರಿಸಿದ್ದಾರೆ. ಅಂತೆಯೇ ಈ ಪರಶುರಾಮ ಸೃಷ್ಟಿಯಲ್ಲಿ ಐತಿಹಾಸಿಕ ಹಿನ್ನೆಲೆಯಿರುವ ಹಲವು ಪುರಾತನ ದೇವಾಲಯಗಳನ್ನು ಕಾಣಬಹುದು. ಇವುಗಳಲ್ಲಿ ಒಂದು ನಮ್ಮೀ ಶ್ರೀ ಮುಂಡ್ಕೂರು ಕ್ಷೇತ್ರ.

**ಪೌರಾಣಿಕ ಇತಿಹಾಸ:**

ಹಿಂದೊಮ್ಮೆ ಮುಂಡಾಸುರನೆಂಬ ದೈತ್ಯನು ಗರಳಪುರಿ ಎಂಬಲ್ಲಿ ರಾಜ್ಯಭಾರ ಮಾಡಿಕೊಂಡು, ಬ್ರಹ್ಮನ ವರಬಲವನ್ನು ಪಡೆದು, ಋಷಿಮುನಿಗಳನ್ನು ಪೀಡಿಸಿ, ದೇವತೆಗಳನ್ನೆಲ್ಲಾ ಸದೆಬಡಿದು, ಲೋಕಕಂಟಕನಾಗಿ ಮೆರೆಯುತ್ತಿದ್ದನು.

ಈ ಸಂದರ್ಭದಲ್ಲಿ ದೇವತೆಗಳೆಲ್ಲರೂ ಜಗನ್ಮಾತೆಯನ್ನು ಪ್ರಾರ್ಥಿಸಿದರು. ದೇವತೆಗಳ ಮೊರೆಗೆ ಓಗೊಟ್ಟು ಈ ದುರುಳ ರಾಕ್ಷಸನನ್ನು ಸಂಹರಿಸಿದ ಕ್ಷೇತ್ರ ಇದಾಗಿದೆ. ಮುಂಡನನ್ನು ಶೂಲದಿಂದ ಇರಿದು ಸಂಹರಿಸಿದ ಸ್ಥಳಕ್ಕೆ ಮುಂಡಕೂರು ಎಂದು ಹೆಸರಾಯಿತು.

ಕೋಲಾಪುರದ ಸುರಸನೆಂಬ ಅರಸನು ತನ್ನ ದುರ್ದೆಶೆಯಿಂದಾಗಿ ರಾಜ್ಯಭ್ರಷ್ಟನಾಗಿ, ಕ್ಷೇತ್ರಸಂಚಾರ ಮಾಡುತ್ತಾ ಈ ಮಾರ್ಗವಾಗಿ ಬರುತ್ತಿರಲು, ಇಲ್ಲಿಯೇ ಸಮೀಪದ ಗುರುಮೇರು ಎಂಬಲ್ಲಿ ತಪೋನಿರತರಾಗಿದ್ದ ಮುನಿ ಭಾಗರ್ವರು, ಅರಸನನ್ನು ಬರಮಾಡಿಸಿ, ಆತನ ವೃತ್ತಾಂತಗಳನ್ನೆಲ್ಲಾ ತಿಳಿದು, ತನ್ನ ಮನದಾಸೆಯಂತೆ ಈ ರಾಜನ ಸಮಕ್ಷಮದಲ್ಲಿ ಅಷ್ಟಕುಲ ವಿಪ್ರರೊಡಗೂಡಿ ಸ್ಥಳದ ಹಿನ್ನೆಲೆ ಮಹತ್ವವನ್ನು ಅರಿತು, ಶ್ರೀ ಮಹಿಷಮರ್ದಿನಿ ದುರ್ಗಾಪರಮೇಶ್ವರೀ ದೇವಿಯನ್ನು ಪ್ರತಿಷ್ಠಾಪಿಸಿದರು.

**ಶ್ರೀಕ್ಷೇತ್ರದ ಮಧ್ಯಕಾಲೀನ ಇತಿಹಾಸ:**

ಅಂದಿನಿಂದ ಈ ನಾಡಿನ ಆಳರಸರ ಮೇಲ್ವಿಚಾರಣೆಯಲ್ಲಿ ನಿತ್ಯನೈಮಿತ್ತಿಕಾದಿಗಳು ನಡೆದುಕೊಂಡು ಬರುತ್ತಿದ್ದವು. ಮುಂದೆ ಇದೇ ಪೀಳಿಗೆಯ ದುಷ್ಟ ಅರಸನೊಬ್ಬನು ಪದ್ಧತಿಗಳನ್ನು ವ್ಯತಿರಿಕ್ತಗೊಳಿಸಿದನು. ನಾಡಿನ ಸಜ್ಜನರಿಗೂ, ವಿಪ್ರರಿಗೂ ಇವನ ಉಪಟಳ ಸಹಿಸಲಾಗದೆ ಈ ಊರನ್ನು ಬಿಡುವ ಪ್ರಸಂಗ ಬಂದಿತು. ಇದೇ ಸಂದರ್ಭದಲ್ಲಿ ನಮ್ಮ ನೆರೆಯ ಮೂಲ್ಕಿ ಸೀಮೆಯ ಸಾಮಂತರ ಒಂಬತ್ತು ಮಾಗಣೆಗೆ ಒಳಪಟ್ಟ ಶಾಂಭವೀ ನದಿಯ ಪಶ್ಚಿಮಕ್ಕಿರುವ ಉಳೆಪಾಡಿ ಗ್ರಾಮದಲ್ಲಿ, ಗುಡ್ಡಸ್ಥಾನ ಎಂಬಲ್ಲಿ ದೈವಾಂಶಸಂಭೂತರಾದ ಕಾಂತಬಾರೆ, ಬೂದಾಬಾರೆ ಎಂಬಿಬ್ಬರು ಸಹೋದರರು ನೆಲೆಸಿದ್ದರು. ಸಜ್ಜನರಾದ ಇವರು ಪ್ರತೀದಿನ ಮುಂಡ್ಕೂರು ದೇವಿಯ ದರ್ಶನವನ್ನು ಮಾಡಿ ದೇವಿಯ ಅನನ್ಯ ಭಕ್ತರಾಗಿದ್ದರು. ಇವರು ಮಹಾಪರಾಕ್ರಮಶಾಲಿಗಳಾಗಿದ್ದುದರಿಂದ ಜನತೆಯ ಬೆಂಬಲ ಮತ್ತು ವಿಶ್ವಾಸಗಳನ್ನು ಗಳಿಸಿಕೊಂಡಿದ್ದರು. ಇಲ್ಲಿಯ ದುಷ್ಟರಸನಿಗೆ ಕಾಂತಾಬಾರೆ, ಬೂದಾಬಾರೆಯವರು ತೊಡಕಾಗಿದ್ದರು. ಈ ಸಹೋದರರಿಬ್ಬರೂ ಮುಂಡ್ಕೂರಿಗೆ ಬರದಂತೆ ಮಾಡಲು ಸರ್ವಪ್ರಯತ್ನ ಮಾಡಿದ್ದನು. ಮುಂದೊಂದು

**ಶ್ರೀ ವೇದಮೂರ್ತಿ ಜಯರಾಮ ಆಚಾರ್ಯ**
ಮೊಕ್ತೇಸರರು ಹಾಗೂ ಅರ್ಚಕರು,
**ಶ್ರೀ ದುರ್ಗಾ ಪರಮೇಶ್ವರೀ ದೇವಸ್ಥಾನ,**
ಮುಂಡ್ಕೂರು - 576 121, ಕಾರ್ಕಳ ತಾಲೂಕು, ದ.ಕ.

ದಿನ ಮಳೆಗಾಲದ ಸಂದರ್ಭದಲ್ಲಿ ಶಾಂಭವೀ ನದಿಯು ತುಂಬಿ ಹರಿಯುತ್ತಿರಲು, ದೇವೀ ದರ್ಶನಕ್ಕೆ ಬರುತ್ತಿದ್ದ ಕಾಂತಾಬಾರೆ, ಬೂದಾಬಾರೆಯವರಿಗೆ ನದಿದಾಟಲು ದೋಣಿ ಬಿಡದಂತೆ ಇಲ್ಲಿಯ ಅರಸನು ಅಂಬಿಗರಿಗೆ ಕಟ್ಟಾಜ್ಞೆಯನ್ನು ಮಾಡಿದನು. ಬಾರೆಯರಿಬ್ಬರೂ ಇದಕ್ಕಾಗಿ ಚಿಂತಿಸಿ, ಅನನ್ಯ ಭಕ್ತಿಯಿಂದ ದೇವಿಯನ್ನು ಸ್ತುತಿಸಿದಾಗ, ಆಶ್ಚರ್ಯವೆಂಬಂತೆ ದೇವಿಯ ಪ್ರಭಾವದಿಂದ ನದಿಯ ನೀರು ಇಬ್ಭಾಗವಾಗಿ ಸಹೋದರರಿಗೆ ಮುಂಡ್ಕೂರಿಗೆ ಬರಲು ದಾರಿಯಾಯಿತು.

ಈ ಪವಾಡವನ್ನು ಅರಿತ ದುಷ್ಟ ಅರಸನು ಒಳ್ಳೆಯ ಮಾಂತ್ರಿಕರಿಂದ ಪಶ್ಚಿಮಾಭಿಮುಖವಾಗಿದ್ದ ದೇವಿಯ ಮುಖವನ್ನು ಪೂರ್ವಾಭಿಮುಖವಾಗಿ ಇರಿಸಿದನು (ಪಶ್ಚಿಮ ಪಾರ್ಶ್ವದ ಗರ್ಭಗುಡಿಯ ಗೋಡೆಯಲ್ಲಿ ದ್ವಾರದ ಕುರುಹು ಈಗಲೂ ಇದೆ.) ಖತಿಗೊಂಡ ಅರಸನು ಕುಟಿಲತಂತ್ರದಿಂದಲಾದರೂ ಬಾರೆಯರನ್ನು ಅವಮಾನಗೊಳಿಸಲು ಮಂತ್ರಿಯೊಡಗೂಡಿ ಯೋಚಿಸುತ್ತಿದ್ದನು. ಒಂದು ದಿನ ಮಂತ್ರಿಯ ಕುತಂತ್ರದಿಂದ ಈ ಸಹೋದರರಿಬ್ಬರನ್ನು ಆಸ್ಥಾನಕ್ಕೆ ಬರಮಾಡಿಸಿ ಪಣವೊಂದನ್ನು ಮುಂದೊಡ್ಡಿದನು. ''ಬಾರೆಯರೇ ನಾನೊಂದು ಕಬ್ಬಿನ ಕಟ್ಟನ್ನು ಇಟ್ಟಿದ್ದೇನೆ, ಅದನ್ನು ಖಡ್ಗದಿಂದ ಒಂದೇ ಏಟಿಗೆ ತುಂಡರಿಸಬೇಕು''. ಸಾಧ್ಯವಾಗದ ಈ ಕೆಲಸವನ್ನು ಸಾಧಿಸಿದವನಿಗೆ/ಜಟ್ಟಿಗಳಿಗೆ ಉಂಬಳಿ ಬಿಟ್ಟ ಒಬ್ಬನ್ ತೋಟವನ್ನು ಕೊಡಬೇಕೆಂಬುದಾಗಿ ಒಪ್ಪಂದವಾಯಿತು. ಸ್ಪರ್ಧೆ ಮರುದಿನ ನಡೆಯುವುದಾಗಿ ನಿರ್ಧರಿಸಲಾಯಿತು. ದಾರಿಯಲ್ಲಿ ಬರುತ್ತಿದ್ದಾಗ ಅಣ್ಣ ಕಾಂತಾಬಾರೆಯೊಡನೆ ತಮ್ಮನು ''ಅಣ್ಣಾ! ಈ ಕಾರ್ಯದಲ್ಲಿ ಏನೋ ಮೋಸವಿರುವಂತೆ ಭಾಸವಾಗುತ್ತಿದೆ. ನಾವು ಈ ಪಣಕ್ಕೆ ಒಪ್ಪಬಾರದಿತ್ತು'' ಎಂದನು. ಆಗ ಕಾಂತಾಬಾರೆಯು ''ನಿನ್ನ ಊಹೆಯು ನಿಜವಿರಬಹುದಾದರೂ, ಆಡಿದ ಮಾತನ್ನು ತಪ್ಪುವುದು ಸಮಂಜಸವಲ್ಲ, ಅದು ಅಧರ್ಮವೂ ಆಗಿದೆ. ನಮ್ಮನ್ನು ಹಲವು ಸಂದರ್ಭಗಳಲ್ಲಿ ಕಾಪಾಡಿದ ಪರಮಮಂಗಳೆ ಆ ದುರ್ಗಾದೇವಿಯ ದಯೆಯು ನಮಗೊಂದಿದ್ದರೆ ಇದಾವುದೂ ನಮಗೆ ಗಣ್ಯವಲ್ಲ'' ಎಂದನು. ಮರುದಿನ ಬೆಳಿಗ್ಗೆ ಪ್ರಾತರ್ವಿಧಿಗಳನ್ನು ಪೂರೈಸಿ, ಇಲ್ಲಿಯ ದೇವಿಸನ್ನಿಧಿಗೆ ಸಹೋದರರಿಬ್ಬರೂ ಬಂದು, ಅಂತರಂಗ ಪರಿಶುದ್ಧ ಭಕ್ತಿಯಿಂದ ''ಅಮ್ಮಾ ನಾವು ನಿನ್ನ ಪರಮ ಅನುಗ್ರಹದಿಂದಲೇ ಇಷ್ಟರವರೆಗೆ ಅನೇಕ ಅಡ್ಡಿ ಆತಂಕಗಳನ್ನು ಜಯಿಸಿ ಕೀರ್ತಿಶಾಲಿಗಳಾಗಿದ್ದೇವೆ. ಓ ತಾಯೇ, ಭಾರ್ಗವಮುನಿ ಕರಕಮಲ ಸಂಪೂಜಿತೆಯೇ, ಇಂದಿನ ಕಾರ್ಯದಲ್ಲಿ ಮರ್ಯಾದೆಗೆ ಚ್ಯುತಿ ಬಾರದಂತೆ ಮಾಡು'' ಎಂದು ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತಿರಲು, ತನ್ನ ಅಂತರಂಗ ಭಕ್ತರ ಪ್ರಾರ್ಥನೆಗೆ ಮೆಚ್ಚಿದ ದೇವಿಯು ಮೈದಳೆದು ಬಂದು ವೀರರಭಯರನ್ನು ತಕ್ಕೈಸಿ, ಹರಿತವಾದ ಖಡ್ಗವನ್ನಿತ್ತು, ಅನುಗ್ರಹಿಸಿ ಮರೆಯಾದಳು.

ಗುಂಡುಗಲಿಗಳಾದ ಸಹೋದರರು ಆಡಿದ ಭಾಷೆಯಂತೆ ಪಣಕ್ಕೆ ಸಿದ್ಧರಾದರು. ಕಾಂತಾಬಾರೆಯು ದೇವಿಯನ್ನು ಮನಸಾರೆ ಪ್ರಾರ್ಥಿಸಿ, ಮುಂದೆ ಬಂದು ಕೂಡಿರುವ ಸಭೆಗೆ ವಂದಿಸಿ, ಒಂದೇ ಏಟಿಗೆ ಕಬ್ಬಿನ ಕಟ್ಟನ್ನು ತುಂಡರಿಸಿದನು! ಸಹೋದರರು ಮುಂದೆ ಬಂದು ಕಬ್ಬಿನ ಕಟ್ಟಿನೊಳಗಿದ್ದ ಕಬ್ಬಿಣದ ಸರಳುಗಳನ್ನು ತೆಗೆದು, ಸಭೆಗೆ ತೋರಿಸಿ ಮಂತ್ರಿಯ ವಂಚನೆಯನ್ನು ಪ್ರಕಟಪಡಿಸಿದರು. ಅಲ್ಲದೆ ನುಡಿದಂತೆ ತಮಗೆ ಒಬ್ಬನ್ ತೋಟವನ್ನು ಕೊಡಬೇಕೆಂದು ಕೇಳಿದರು! ವಂಚಕನಾದ ಅರಸನು ಅದಕ್ಕೊಪ್ಪಲಿಲ್ಲ. ವೀರರಿಬ್ಬರೂ ಕೋಪಗೊಂಡು ತಮಗೆ ವಾಗ್ದಾನವಿತ್ತ ಜಾಗ ಒಬ್ಬನ್ ತೋಟಕ್ಕೆ ಬಂದು, ಎರಡು ಬಾವಿಗಳನ್ನು ತೋಡಲು ಪ್ರಾರಂಭಿಸಿದರು. ಧಾವಿಸಿ ಮುಂದೆ ಬಂದ ಸಿದ್ಧ ಮುಂಗುಲಿ, ಶಿವ ಮುಂಗುಲಿಯರನ್ನು ಹತ್ಯೆಗೈದು, ತಾವು ತೋಡಿದ ಬಾವಿಯ ನೀರನ್ನು ಕುಡಿದರು. ಅರಸನು ಸೈನ್ಯ ಸಮೇತನಾಗಿ ಬಾರೆಯರಿಬ್ಬರನ್ನು ಎದುರಿಸಿದನು. ದೇವಿಯ ದಿವ್ಯಶಕ್ತಿಯನ್ನು ಪಡೆದಿರುವ ಸಹೋದರರಿಬ್ಬರೂ ಅರಸನ ಎಲ್ಲಾ ಸೈನ್ಯವನ್ನು ಪುಡಿಗೈದರು. ಅರಸನನ್ನೆ ಯಮಸದನಕ್ಕಟ್ಟಿದರು.

ತಮಗೆ ಸಿಕ್ಕಿದ ಒಬ್ಬನ್ ತೋಟವನ್ನು ಮುಂಡ್ಕೂರು ದುರ್ಗಾದೇವಿಯ ನಿರಂತರ ನಂದಾದೀಪಕ್ಕೆ ವಿನಿಯೋಗಿಸಲ್ಪಡಲಿ ಎಂದು ಮೂಡಬಿದ್ರೆಯ ಚೌಟರಸರಿಗೆ ಹೇಳಿ ಕಳುಹಿಸಿ, ತಮ್ಮ ಸ್ವಸ್ಥಾನಕ್ಕೆ ನಿರ್ಗಮಿಸಿದರು.

**ಚರಿತ್ರೆಯ ಪುಟಗಳಿಂದ:**

ಚರಿತ್ರೆಯನ್ನು ತಿರುವಿದಾಗ ನಮ್ಮ ಈ ತುಳುನಾಡನ್ನು ಅನೇಕ ಅರಸರು ರಾಜ್ಯಭಾರ ಮಾಡಿದ ವಿಚಾರ ತಿಳಿಯುತ್ತದೆ. ಅವರಲ್ಲಿ ಭಂಗರಾಜ ಅರಸರು ಪ್ರಸಿದ್ಧರು. ಅವರ ಕೈಕೆಳಗೆ ಇಲ್ಲಿಯ ಮೂಡೂ ಗ್ರಾಮಗಳು ಸೇರಿದ್ದವು. ಭಂಗರಸರಿಗೂ

ಮುಂಡ್ಕೂರಿಗೂ ನೇರವಾದ ಸಂಬಂಧವಿತ್ತು. ಈಗಲೂ ಭಂಗರ ಗದ್ದೆ ಎಂಬುದು ಇದೆ. ಶಕವರ್ಷ 1337 ಹೇಮಲಂಬಿ ಸಂವತ್ಸರದಲ್ಲಿ ಇಲ್ಲಿಯ ಅಧಿಕಾರವು ನರಸಿಂಹ ಭಂಗರಾಜರಿಂದ ಮೂಡಬಿದ್ರಿಯ ತಿರುಮಲರಾಯ ಚೌಟರಸರಿಗೆ ಹಸ್ತಾಂತರಿಸಿದ ದಾಖಲೆಗಳಿವೆ. ಇಲ್ಲಿಯ ವಿಶೇಷ ಸಂದರ್ಭಗಳಲ್ಲಿ ಅವರು ತಪ್ಪದೆ ಬಂದು ದೇವಿಯ ದರ್ಶನ ಪಡೆದು ಕೃತಾರ್ಥರಾಗಿದ್ದರು. ಚೌಟರಸರು ಸಪತ್ನೀಕರಾಗಿ ಬಂದು ಭಕ್ತಿಯಿಂದ ಒಪ್ಪಿಸಿದ ಓಲೆಗಳೆರಡು ಇಂದಿಗೂ ದೇವಿಯ ಅಲಂಕಾರಕ್ಕಾಗಿ ಉಪಯೋಗಿಸಲ್ಪಡುತ್ತಿವೆ. ರಥೋತ್ಸವದ ಹಿಂದಿನ ದಿನ ಕೆರೆದೀಪೋತ್ಸವ ಅರಸರ ವತಿಯಿಂದಲೇ ನಡೆಯುತ್ತಿತ್ತು. ಉತ್ಸವ ಕಾಲದಲ್ಲಿ ಅವರು ಬಂದಾಗ ಜಾರ್ಗೆಕಟ್ಟೆ ಎಂಬಲ್ಲಿ ಗ್ರಾಮಸ್ಥರು ಬಹಳ ವೈಭವದಿಂದ ದೇವಾಲಯಕ್ಕೆ ಬರಮಾಡಿಕೊಳ್ಳುತ್ತಿದ್ದರು.

ಈ ದೇವಳದ ನಿತ್ಯನೈಮಿತ್ಯಕಾದಿ ಕಟ್ಟುಕಟ್ಟಲೆಗಳು ಸರಾಗವಾಗಿ ನಡೆಯುವಂತೆ ಇನ್ನ-ಮುಂಡ್ಕೂರು ಗ್ರಾಮಗಳಲ್ಲಿ ಎಂಟುಗುತ್ತು, ನಾಲ್ಕು ಬಾಳಿಕೆ, ನಾಲ್ಕು ಪರಾರಿ ಎಂಬ ಮನೆತನಗಳವರು ಈ ದೇವಳ ಮೇಲ್ವಿಚಾರ ನೋಡಿಕೊಂಡು ಬರುವಂತೆ ಆಜ್ಞಾಪಿಸಿದರು. ಇತ್ತೀಚೆಗೆ ಉತ್ಸವ ಕಾಲದಲ್ಲಿ ಅರಸರು ಬರುವುದು ನಿಂತರೂ, ಕೆರೆದೀಪೋತ್ಸವ ರಥೋತ್ಸವ, ಮರುದಿನ ಚೂರ್ಣೋತ್ಸವ- ಈ ಮೂರು ದಿನಗಳಲ್ಲಿ ಅರಸರ ಕಾಣಿಕೆ ಎಂದು ಭಂಡಾರದಿಂದ ನಾಲ್ಕು ತೆಂಗಿನ ಕಾಯಿಗಳನ್ನು ದೇವಿಗೆ ಅರ್ಪಿಸುವುದು ಇಂದಿಗೂ ರೂಢಿಯಾಗಿದೆ.

**ಅಭಿವೃದ್ಧಿಯ ಪಥದಲ್ಲಿ:**

ಮುಂದೆ ದೇವಾಲಯದ ಆಡಳಿತೆಯು ಮುಂಡ್ಕೂರು-ಅಂಗಡಿಗುತ್ತು ಎಂಬ ಮನೆತನದವರು ವಹಿಸಿಕೊಂಡ ಕಾಲದಲ್ಲಿ ಅಗ್ನಿಸ್ಪರ್ಶದಿಂದ ದೇವಾಲಯ ಹಾಗೂ ರಥವು ಸುಟ್ಟುಹೋದವು. ನಂತರ ಅಂಗಡಿಗುತ್ತು ಕಾಂತರ ಶೆಟ್ಟಿ ಎಂಬವರು 1856ರಲ್ಲಿ ನೂತನ ರಥವನ್ನು ನಿರ್ಮಿಸಿ, ದೇವರಿಗೆ ಒಪ್ಪಿಸಿದರು. ಈ ರಥವು ನಮ್ಮ ಜಿಲ್ಲೆಯಲ್ಲೇ ಆಯಪ್ರಮಾಣದಲ್ಲಿಯೂ, ಶಿಲ್ಪಕೌಶಲ್ಯದಿಂದಲೂ ಕೂಡಿದ್ದಾಗಿದೆ. ಇತ್ತೀಚೆಗೆ ಈ ರಥದ ನಾಲ್ಕು ಗಾಲಿಗಳು, ಒಳಗಿನ ಜಂತಿಗಳು ಶಿಥಿಲಗೊಂಡಿದ್ದರಿಂದ 1990ರಲ್ಲಿ ಅದೇ ಅಂಗಡಿಗುತ್ತು ಕುಟುಂಬಸ್ಥರು ನವೀಕರಿಸಿ, ಶ್ರೀದೇವಿಗೆ ಒಪ್ಪಿಸಿದರು. ಮುಂದೆ ಈ ದೇವಾಲಯದ ಆಡಳಿತೆಯು ಮುಂಡ್ಕೂರು ನಡಿಗುತ್ತು ಸಿದ್ದು ಶೆಟ್ಟಿ ಎಂಬವರು ವಹಿಸಿಕೊಂಡರು. ಇವರ ಕಾಲದಲ್ಲಿ ದೇವಾಲಯ ಬಹು ಅಭಿವೃದ್ಧಿಯನ್ನು ಹೊಂದಿತ್ತು. ಒಳಗಿನ ತೀರ್ಥಮಂಟಪ, ಮುಂಭಾಗದ ಗೋಪುರ ಇವರು ಕಟ್ಟಿಸಿದ್ದಾಗಿದೆ. ಕಾರ್ತಿಕ ಬಹುಳ ಅಮಾವಾಸ್ಯೆಯ ದಿನ ದೀಪೋತ್ಸವವು ನಡೆಯುತ್ತಿದ್ದು, ಮಧ್ಯಾಹ್ನ ಸಮಾರಾಧನೆ, ರಾತ್ರಿ ಹೂವಿನ ಪೂಜೆ ಮತ್ತು ಆ ದಿನ ಮಧ್ಯಾಹ್ನ ಹರಿಜನರಿಗೂ ಭೋಜನ ನೀಡುವಂತೆ ವ್ಯವಸ್ಥೆ ಮಾಡಿದ್ದರು. ಇಂದಿಗೂ ಈ ಕೆಲಸ ನಡೆಯುತ್ತಿದೆ.

ಮುಂದೆ ಇವರ ಅಳಿಯರಾದ ರಾಜು ಶೆಟ್ಟಿಯವರು ತಮ್ಮ ಕಾಲದಲ್ಲಿ (17-2-1940) ದೇವಳದ ಸುತ್ತುಪಾಳಿಗಳನ್ನು ಜೀರ್ಣೋದ್ಧಾರಪಡಿಸಿ ಪ್ರಪ್ರಥಮವಾಗಿ ಬ್ರಹ್ಮಕಲಶಾಭಿಷೇಕವನ್ನು ಮಾಡಿಸಿದರು.

ರಾಜು ಶೆಟ್ಟಿಯವರ ನಂತರ ಇವರ ತಮ್ಮ ನಡಿಗುತ್ತು ಕೃಷ್ಣ ಶೆಟ್ರ ಆಡಳಿತದಲ್ಲಿ ಅಂದರೆ 15-2-1956ರಲ್ಲಿ ನೂತನ ಬಲಿಮೂರ್ತಿಯನ್ನು ಮಾಡಿಸಿ, ಅಷ್ಟಬಂಧ ಬ್ರಹ್ಮಕಲಶಾಭಿಷೇಕವನ್ನು ನಡೆಸಲಾಯಿತು. ಮುಂದೆ ಈ ದೇವಳವು ಹಲವು ರೀತಿಯಿಂದ ಅಭಿವೃದ್ಧಿ ಹೊಂದುತ್ತಾ, 1958ರಲ್ಲಿ ಶ್ರೀ ದೇವಿಯ ಭಕ್ತಾದಿಗಳ ನೆರವಿನಿಂದ ರಜತಪಾಲಕಿಯೂ, ರಜತ ಮಂಟಪವೂ ಮತ್ತು ಮಹಾಗಣಪತಿ ದೇವರಿಗೆ ಬೆಳ್ಳಿಯ ಕವಚವೂ ಮಾಡಲ್ಪಟ್ಟಿತು. 1963ರಲ್ಲಿ ದೇವಸ್ಥಾನದ ಪಶ್ಚಿಮ ಭಾಗದಲ್ಲಿ ಪಾಕಶಾಲೆ, ಒಳಾಂಗಣದಲ್ಲಿ ಸಿಮೆಂಟು ಪತ್ರದ ಚಪ್ಪರ ಇತ್ಯಾದಿ ಮಹತ್ಕಾರ್ಯಗಳು ಕೂಡಾ ಉದಾರಿಗಳ ನೆರವಿನಿಂದ ಮಾಡಲ್ಪಟ್ಟಿತು. 1965ರಲ್ಲಿ ದೇವಳದ ಮುಂಭಾಗದಲ್ಲಿ ಕಾಂಕ್ರೀಟಿನ ಮಂಟಪ ಹಾಗೂ ಚಪ್ಪರ, ದಕ್ಷಿಣ ಪಾರ್ಶ್ವದಲ್ಲಿ ಮಧ್ವ ಮಂದಿರ, ಅದರ ಮುಂಭಾಗದಲ್ಲಿ ವಾದಿರಾಜ ಮಂದಿರ ಇವೆಲ್ಲವೂ ಶ್ರೀದೇವಿಯ ಭಕ್ತ ಸಮೂಹದ ಸಹಕಾರದಿಂದಲೇ ಕಟ್ಟಲ್ಪಟ್ಟಿತ್ತು.

ಈಗಿನ ಆಡಳಿತ ಮೊಕ್ತೇಸರರಾದ ಶ್ರೀ ಯಂ. ಜಗದೀಶ್ಚಂದ್ರ ಹೆಗ್ಡೆಯವರು, ತಮ್ಮ ಕಾಲದಲ್ಲಿ ಅಂದರೆ 1976ರಲ್ಲಿ ದೇವಳದ ಮುಂಭಾಗದಲ್ಲಿ, ವಿನೂತನ ಕಟ್ಟಡ ''ಅಂಬಿಕಾ ನಿಲಯ''ವನ್ನು ಭಕ್ತಾದಿಗಳ ಸಹಾಯದಿಂದ ನಿರ್ಮಿಸಿ,

ಇದರ ಉತ್ಪತ್ತಿಯು ಶ್ರೀದೇವಿಯ ಭಂಡಾರಕ್ಕೆ ಬರುವಂತೆ ಮಾಡಿರುತ್ತಾರಲ್ಲದೆ, 1978ರಲ್ಲಿ ಶ್ರೀದೇವಿಯ ಭಕ್ತಾಭಿಮಾನಿಗಳಿಂದ ಅಷ್ಟಬಂಧ ಬ್ರಹ್ಮ ಕಲಶವು ವೈಭವದಿಂದ ನೆರವೇರಿಸಲ್ಪಟ್ಟಿತು. ಶ್ರೀದೇವಿಯ ಭಕ್ತಾಭಿಮಾನಿಗಳ ಸಹಕಾರದಿಂದ ಹಿಂಭಾಗದಲ್ಲಿ ಒಂದು ಸುಂದರ ಕೆರೆ ಹಾಗೂ ಮೇಲ್ಭಾಗದಲ್ಲಿ ಗೋಪುರ ಮತ್ತು ದೇವಳದ ಸುತ್ತ ಕಾಂಕ್ರೀಟಿನ ದಳಿಯನ್ನು ರಚಿಸಿದ್ದಲ್ಲದೆ ಪುರಾತನ ಚಂದ್ರಮಂಡಲವು ಶಿಥಿಲಗೊಂಡಿರುವುದರಿಂದ ಹೊಸ ಚಂದ್ರಮಂಡಲವನ್ನು ರಚಿಸಲಾಯಿತು.

ದೇವಳದ ಮುಂಭಾಗದಲ್ಲಿ ಆಕರ್ಷಕವಾದ ಭಾರ್ಗವ ಮಂಟಪವೊಂದನ್ನು 1987ನೇ ಇಸವಿಯಲ್ಲಿ ಭಕ್ತಾಭಿಮಾನಿಗಳ ಸಹಕಾರದಿಂದ ರಚಿಸಲಾಯಿತು. 1991ರಲ್ಲಿ ವಿನೂತನ ವಸಂತ ಮಂಟಪವೊಂದನ್ನು ಮಾಡಿಸಿ ಶ್ರೀದೇವಿಗೆ ಭಕ್ತಾಭಿಮಾನಿಗಳು ಅರ್ಪಿಸಿರುತ್ತಾರೆ. 1992ರಲ್ಲಿ ಶ್ರೀಗುರುರಾಘವೇಂದ್ರ ಸ್ವಾಮಿಗಳ ವಿನೂತನ ಮಂದಿರವನ್ನು ಮಾಧ್ವ ಸಮಾಜ ಬಾಂಧವರಿಂದ ರಚಿಸಲ್ಪಟ್ಟಿದೆ.

ಪ್ರಸ್ತುತ ವರುಷಗಳಲ್ಲಿ ಹಲವು ಜೀರ್ಣೋದ್ಧಾರ ಕಾರ್ಯಕ್ರಮಗಳನ್ನು ನಡೆಸಲಾಗಿದೆ. ಭಕ್ತಾಭಿಮಾನಿಗಳ ಸಹಕಾರದಿಂದ ಹೊರಾಂಗಣಕ್ಕೆ ಶಿಲಾಕಲ್ಲುಗಳನ್ನು ಹಾಸಿದ್ದು, ಸಿಮೆಂಟು ಪತ್ರದ ಚಪ್ಪರವನ್ನು ರಚಿಸಲಾಗಿದೆ. ಇದಲ್ಲದೆ ಶಿಥಿಲಗೊಂಡ ಪುರಾತನ ಗರ್ಭಗುಡಿಯನ್ನು ಭಕ್ತ ಸಮೂಹದ ಸಹಕಾರದಿಂದ ನವೀಕರಿಸಿ, ದೇವಸ್ಥಾನದ ಒಳಾಂಗಣಕ್ಕೂ ಹಾಸು ಚಪ್ಪಡಿಗಳನ್ನು ಹಾಸಿ ಸುಂದರಗೊಳಿಸಲಾಗಿದೆ.

ದಿನಾಂಕ 12-2-1993ರಂದು ಬ್ರಹ್ಮ ಕಲಶಾಭಿಷೇಕವು ಅತೀ ವಿಜೃಂಭಣೆಯಿಂದ ನೆರವೇರಿರುವುದು ಅತೀ ಸಂತೋಷದಾಯಕವಾದ ವಿಷಯ. ಇನ್ನು ಮುಂದೆಯೂ ಭಕ್ತಾಭಿಮಾನಿಗಳ ಸಹಕಾರದಿಂದ ಶ್ರೀಕ್ಷೇತ್ರವು ಬೆಳಗಿ, ಜಗದ್ವಂದ್ಯೆ ಶ್ರೀ ಮಹಿಷ ಮರ್ದಿನಿ ದುರ್ಗಾಪರಮೇಶ್ವರೀ ದೇವಿಯು ಸಕಲ ಜನರ ಅಭೀಷ್ಟಗಳನ್ನು ಈಡೇರಿಸಲೆಂದು ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತೇವೆ.

॥ ಭದ್ರಂ ಶುಭಂ ಮಂಗಲಂ ॥

ಹಿಂದೆ ಹೂವಿನ ವ್ಯಾಪಾರ ಮಾಡುವ ಮುಸ್ಲಿಂ ಬಂಧುವೊಬ್ಬರು ದೇಗುಲದ ಮುಂಭಾಗದಿಂದ ಹೂವಿನೊಂದಿಗೆ ಸಾಗುವಾಗ ಯಾರೋ ಒಬ್ಬರು ಅಂದರಂತೆ:- ''ನಮ್ಮ ದೇವರಿಗೆ ಹೂವೆಂದರೆ ಬಲು ಪ್ರೀತಿ. ನೀವೂ ಸ್ವಲ್ಪ ಹೂವನ್ನು ಕಾಣಿಕೆಯಾಗಿ ನೀಡಿದರೆ ಶುಭವಾದೀತು''. ಆದರೆ ಅವರು ಅದನ್ನು ನಿರಾಕರಿಸಿ ಕೆಲವು ಕೆಟ್ಟ ನುಡಿಗಳನ್ನು ನುಡಿದರಂತೆ. ಆದರೆ ಇದರ ಫಲವಾಗಿ, ಅವರು ಎದುರಿಸಿದ ಗಂಡಾಂತರ ವರ್ಣನಾತೀತ. ಹಿಂತಿರುಗಿದ ವ್ಯಾಪಾರಿ ಚೆಂಡು ಮಲ್ಲಿಗೆಯನ್ನು ಕಾಣಿಕೆಯಾಗಿ ಅರ್ಪಿಸಿದಾಗ ಸಂಕಷ್ಟ ಪರಿಹಾರವಾಯಿತಂತೆ. ಅಂದಿನಿಂದ ಪ್ರತಿಬಾರಿಯೂ ಸನ್ನಿಧಿಯ ಪಥದಲ್ಲಿ ಸಾಗುವಾಗ ಚೆಂಡು ಮಲ್ಲಿಗೆಯನ್ನು ತಪ್ಪದೆ ಒಪ್ಪಿಸುತ್ತಿದ್ದರು. ಪ್ರತ್ಯಕ್ಷಕ್ಕೆ ಪ್ರಮಾಣ ಬೇಡವೆಂಬಂತೆ ಇಂತಹ ಹಲವಾರು ಘಟನೆಗಳು ನಡೆದಿವೆ. ಹೀಗೆ ಮಹತ್ತಾದ ಕಾರ್ಯಸಾಧನೆಗೂ, ಕೈತಪ್ಪಿದ ವಸ್ತುವಿನ ಪ್ರಾಪ್ತಿಗೂ ಹೂವಿನ ಪೂಜೆ ಅರ್ಪಿಸುತ್ತಾರೆ.

# ದೇವಸ್ಥಾನಗಳಲ್ಲಿ ಶಕ್ತಿಸಂಚಯ

• ಶ್ರೀ ಬಿ. ಜನಾರ್ದನ ಭಟ್

ವಿಶ್ವದ ಹಿಂದೆ ಒಂದು ಮಹಾ ಚೈತನ್ಯ ಇದೆ. ಅದನ್ನು ಪ್ರಕೃತಿ ಅಂತಲೋ ದೇವರು ಅಂತಲೋ ನಮ್ಮ ನಮ್ಮ ನಂಬಿಕೆಗಳಿಗೆ ಅನುಗುಣವಾಗಿ ಕರೆದುಕೊಳ್ಳಬಹುದು. ಅದೇನೆಂಬುದು ನಮಗೆ ಗೊತ್ತಿಲ್ಲ ಎಂಬುದು ಖಂಡಿತ. ನಮಗೆ ವಿಜ್ಞಾನದಿಂದಾಗಲೀ ಇತರ ಶಾಸ್ತ್ರಗಳಿಂದಾಗಲೀ ವಿಶ್ವದ ಮೂಲ ರಹಸ್ಯಗಳನ್ನು ಇನ್ನೂ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಿಲ್ಲ. ಉದಾಹರಣೆಗೆ ವಿಶ್ವ ಯಾವ ಆಕಾರದಲ್ಲಿದೆ, ಅದು ಎಲ್ಲಿಯವರೆಗೆ ಹಬ್ಬಿದೆ, ಅದರಾಚೆಗೆ ಏನು ಇತ್ಯಾದಿ ಪ್ರಶ್ನೆಗಳನ್ನು ನಾವು ಉತ್ತರಿಸಲಾರೆವು. ಹಾಗೆಯೇ ವಿಶ್ವ ಚೈತನ್ಯದ ಸ್ವರೂಪ ಏನು ಎನ್ನುವುದು ನಾವು ಕಲ್ಪಿಸಲಾರೆವು. ಅದಕ್ಕೆಯೇ ನಿರಾಕಾರ ನಿರ್ಗುಣ ಬ್ರಹ್ಮ ಎಂದಿರಬಹುದು.

ದೇವಸ್ಥಾನಗಳಲ್ಲಿರುವ ಶಕ್ತಿ ವಿಶ್ವ ಚೈತನ್ಯದ ಒಂದು ಅಭಿವ್ಯಕ್ತಿ ಆಗಿರಬಹುದೆಂದು ನಾವು ಊಹಿಸಬಹುದು. ಅದು ಎಲ್ಲ ಕಡೆಯೂ ಇರುವಾಗ ದೇವಸ್ಥಾನದಲ್ಲಿ ಏನು ವಿಶೇಷ ಎಂದು ಪ್ರಶ್ನಿಸಿಕೊಳ್ಳಬೇಕಾಗುತ್ತದೆ. ಅದಕ್ಕೆ ಉತ್ತರ ಹುಡುಕಲು ನಮಗೆ ತಿಳಿಯದ ವಿಚಾರದಿಂದ (ದೇವರು) ಪ್ರಾರಂಭಿಸುವುದಕ್ಕಿಂತ ನಮಗೆ ತಿಳಿದಿರುವ ವಿಚಾರದಿಂದ (ಮನಸ್ಸು, ಮನೋಬಲ ಇದನ್ನೂ ತಿಳಿದಿದ್ದೇವೆಯೆ ಎನ್ನುವ ಪ್ರಶ್ನೆ ಸದ್ಯ ಒತ್ತಟ್ಟಿಗಿರಲಿ) ಪ್ರಾರಂಭಿಸುವುದು ಒಳ್ಳೆಯದೆಂದುಕೊಂಡಿದ್ದೇನೆ.

ಹೀಗೆ ಮಾನವ ಕೇಂದ್ರಿತವಾಗಿ ಯೋಚಿಸುವಾಗ ದೇವಸ್ಥಾನಗಳ ರಚನೆ ಯಾಕಾಯಿತು, ಅವುಗಳಲ್ಲಿ ದೇವಶಕ್ತಿಯ ಸಂಚಯ ಹೇಗಾಗುತ್ತದೆ ಎನ್ನುವುದಕ್ಕೆ ಒಂದು ಮನೋವೈಜ್ಞಾನಿಕ ವಿವರಣೆ ಕೊಡಬಹುದು. (ಇದು ಯೂಂಗ್ ಮಾದರಿಯ ಮನೋವಿಜ್ಞಾನ. ಕೆಲವು ಮನೋವಿಜ್ಞಾನಿಗಳು ಇದು occult ಅತಿಮಾನುಷ ಎಂದಾರು)

ವಿವರಣೆಗಿಂತ ಮುಂಚೆ ಒಂದು ಕತೆ ನೋಡುವ. ಆಧ್ಯಾತ್ಮಿಕ ವಿಚಾರಗಳನ್ನು ಬಲ್ಲ ನನ್ನ ಮಿತ್ರರೊಬ್ಬರು ಹೇಳಿದ ಕತೆಯಿದು. ನಮ್ಮದೇ ಯಾವುದೊ ಸಂಸ್ಕೃತ ವೈಚಾರಿಕ ಗ್ರಂಥದಲ್ಲಿರುವ ಕತೆಯೆಂದು ಅವರು ಹೇಳಿದ ನೆನಪು.

ರಾಜನೊಬ್ಬ ದೇವಸ್ಥಾನಗಳ ಆಯವ್ಯಯಗಳನ್ನು ವಿಚಾರಿಸುತ್ತಿದ್ದಾಗ ಅವನಿಗೆ ಆಶ್ಚರ್ಯಕರವಾದ ಸಂಗತಿಯೊಂದು ತಿಳಿಯಿತಂತೆ. ಸಂಬಳದ ಪಟ್ಟಿ ನೋಡಿದಾಗ ಅರ್ಚಕರಿಗೆ ಐದು ರೂಪಾಯಿ, ಶಾಂತಿಯವರಿಗೆ ಒಂದು ರೂಪಾಯಿ, ಡೋಲುಗಂಟೆಯವರಿಗೆ ಎಂಟಾಣೆ ಇತ್ಯಾದಿ ಇದ್ದರೆ ಸುಮ್ಮನೆ ಕುಳಿತವನಿಗೆ ಇಪ್ಪತ್ತು ರೂಪಾಯಿ ಎಂದಿತ್ತು. ರಾಜನಿಗೆ ಆಶ್ಚರ್ಯವೂ ಸಿಟ್ಟೂ ಬಂದು ವಿಚಾರಿಸಲು ಹೊರಟ. ಈ ಸುಮ್ಮನೆ ಕುಳಿತವನು ಯಾರು, ಅವನಿಗೆ ಎಲ್ಲರಿಗಿಂತ ಹೆಚ್ಚು ಸಂಬಳ ಯಾಕೆ ಎಂದು ವಿಚಾರಿಸಿದ. ಒಂದು ದೇವಸ್ಥಾನದಲ್ಲಿ ಧ್ಯಾನಸ್ಥನಾಗಿ ಕುಳಿತಿದ್ದ ಒಬ್ಬನನ್ನು ಜನ ತೋರಿಸಿದರು. ಸುಮ್ಮನೆ ಕುಳಿತಿರುವ ಧ್ಯಾನಸ್ಥನನ್ನೇ ರಾಜ ನೇರವಾಗಿ ಕೇಳಿದ, "ನಿನಗೆ ಯಾಕೆ ಎಲ್ಲರಿಗಿಂತ ಹೆಚ್ಚು ಸಂಬಳ?"

ಸುಮ್ಮನೆ ಕುಳಿತವನು: "ಯಾಕೆಂದರೆ ನನ್ನ ಕೆಲಸ ಎಲ್ಲರಿಗಿಂತ ಕಷ್ಟದ್ದು."

ರಾಜ: "ಅದೇನು ಕಷ್ಟ? ಯಾರು ಕೂಡ ಸುಮ್ಮನೆ ಕುಳಿತಿರಬಹುದು."

ಸುಮ್ಮನೆ ಕುಳಿತವನು: "ಸಾಧ್ಯವಿಲ್ಲ. ನೀವು ಬೇಕಿದ್ದರೆ ಪ್ರಯತ್ನಿಸಿ ನೋಡಿ."

ರಾಜ ಸುಮ್ಮನೆ ಕುಳಿತುಕೊಂಡ. ಸ್ವಲ್ಪ ಹೊತ್ತಿಗೆ ಧ್ಯಾನಸ್ಥ ಅವನನ್ನು ಎಚ್ಚರಿಸಿದ. "ಮಹಾಪ್ರಭೂ, ನೀವು ಸುಮ್ಮನೆ ಕುಳಿತುಕೊಂಡಿಲ್ಲ. ನೀವು ಮಹಾರಾಣಿ ಏನು ಮಾಡುತ್ತಿರಬಹುದೆಂದು ಯೋಚಿಸುತ್ತಿದ್ದೀರಿ."

---

ಶ್ರೀ ಬಿ. ಜನಾರ್ದನ ಭಟ್, ಇಂಗ್ಲಿಷ್ ಲೆಕ್ಚರರ್

ಸರಕಾರಿ ಪದವಿ ಪೂರ್ವಕಾಲೇಜು, ಪಡುಬಿದ್ರಿ - 574 111, ದ.ಕ.

ರಾಜನಿಗೆ ಆಶ್ಚರ್ಯವಾಯಿತು. ಎಲ! ಇವನಿಗೆ ಹೇಗೆ ಗೊತ್ತಾಯಿತು? "ಸುಮ್ಮನಿರುವುದೆಂದರೆ ಯೋಚನೆ ಕೂಡ ಮಾಡಬಾರದೆಂದು ಗೊತ್ತಿರಲಿಲ್ಲ" ಎಂದು ಹೇಳಿ ಮತ್ತೆ ಸುಮ್ಮನೆ ಕುಳಿತ. ರಾಜ ಈ ಸಲ ತನ್ನ ಕುದುರೆಯ ಕಾಲು ನೋವಿನ ಕುರಿತು ಯೋಚಿಸುತ್ತಿದ್ದಾನೆಂದು ಧ್ಯಾನಸ್ಥ ಎಚ್ಚರಿಸಿದ. ರಾಜನಿಗೆ ಕೊನೆಗೆ ತಿಳಿಯಿತು - ಸುಮ್ಮನೆ ಕುಳಿತುಕೊಳ್ಳುವುದು ಕಷ್ಟ ಎಂದು; ಧ್ಯಾನಸ್ಥ ಸುಮ್ಮನೆ ಕುಳಿತುಕೊಂಡು ಅವನ ಅತೀಂದ್ರಿಯ ಶಕ್ತಿಯನ್ನು (ಇನ್ನೊಬ್ಬರ ಮನಸ್ಸನ್ನು ತಿಳಿಯುವ ಶಕ್ತಿ ಅವನಿಗಿತ್ತಲ್ಲ) ಹೆಚ್ಚು ಮಾಡಿಕೊಂಡದ್ದಲ್ಲದೆ ದೇವಸ್ಥಾನದಲ್ಲಿಯೂ ಶಕ್ತಿಸಂಚಯ ಮಾಡುತ್ತಿದ್ದನೆಂದು.

ಈ ಕತೆಯಲ್ಲಿರುವ ಹಾಗೇ ದೇವಸ್ಥಾನಗಳಲ್ಲಿ ದೇವಶಕ್ತಿ ಕೂಡುವುದು ಮನೋಬಲದಿಂದಲೇ ಎಂದು ಊಹಿಸಬಹುದು. ಮನೋಬಲ ಕೂಡುವುದು ಎರಡು ರೀತಿಯಲ್ಲಿ - ಒಂದು: ದೇವಸ್ಥಾನದಲ್ಲಿ ದೇವಶಕ್ತಿಯನ್ನು ಜ್ಞಾನಿಗಳು ಶಾಸ್ತ್ರೋಕ್ತವಾಗಿ ನೆಲೆಗೊಳಿಸುವಾಗ ಅವರ ಮನೋಬಲ (ಮಂತ್ರಬಲವೂ ಅದರದೇ ಒಂದು ರೂಪವೆಂದು ಹೇಳಬಹುದು; ವಿವರಣೆಗೆ ಇಲ್ಲಿ ಆಸ್ಪದವಿಲ್ಲ). ಎರಡು: ದೇವಸ್ಥಾನದಲ್ಲಿ ಪ್ರಾರ್ಥಿಸುವ ಜನರ ಮನೋಬಲ.

ಮನಸ್ಸಿನ ಬಲವನ್ನು ಶಕ್ತಿಯನ್ನಾಗಿ ಮಾಡಬಹುದು; ಹೊರಜಗತ್ತಿನ ವಸ್ತುಗಳ ಮೇಲೆ ಅದರ ಪರಿಣಾಮ ತೋರಿಸಬಹುದು. ಸೈಕೋ ಕೈನೆಸಿಸ್ (psycho kinesis) ಎಂದು ಕರೆಯಲ್ಪಡುವ ಒಂದು ಅತೀಂದ್ರಿಯ ವ್ಯಾಪಾರವೇನೆಂದರೆ ವಸ್ತುಗಳನ್ನು ನೋಡಿ, ಮನೋಬಲದಿಂದ ಅವು ಚಲಿಸುವಂತೆ ಮಾಡುವುದು. ಉದಾಹರಣೆಗೆ, ಮೇಜಿನ ಮೇಲಿರುವ ಲೋಟವನ್ನು ದೃಷ್ಟಿಸಿ ನೋಡುವ ಮೂಲಕ ಅದನ್ನು ಚಲಿಸುವಂತೆ ಮಾಡಬಲ್ಲವರಿದ್ದಾರೆ. ಕೆಲವರ ದೃಷ್ಟಿ ಬಿದ್ದ ಕೂಡಲೇ ತೆಂಗಿನ ಕಾಯಿ ಉದುರುವುದು, ವಸ್ತುಗಳು ಮುರಿಯುವುದು ಕೂಡ ಇದರದೇ ಸೂಚನೆ.

ದೇವಸ್ಥಾನಗಳಲ್ಲಿ ಶಕ್ತಿ ಸಂಚಯ ಇದೇ ರೀತಿ ಆಗಬಹುದೆಂದು ನನ್ನ ಊಹೆ. ಬೇರೆ ಬೇರೆ ದೇವರುಗಳಿಗೆ ಬೇರೆ ಬೇರೆ ರೂಪ, ಗುಣಗಳು ಇವೆಯಲ್ಲ ಅವನ್ನು ಕೂಡ ನಮ್ಮ ಧ್ಯಾನದಲ್ಲಿ ನಾವು ಆರೋಪಿಸಿ ಒಂದು ನಿರ್ದಿಷ್ಟ ಶಕ್ತಿ (ನಿರ್ದಿಷ್ಟ ಹೆಸರು, ರೂಪ, ಗುಣಗಳುಳ್ಳ ಶಕ್ತಿ) ನಮಗೆ ಬೇಕಾದಲ್ಲಿ ನೆಲೆನಿಲ್ಲುವಂತೆ ಮಾಡಬಹುದು. ಹೀಗೆ ಮಾಡುವುದಕ್ಕೆ 'ಯೋಚನಾ ರೂಪ' (thought-form)ಗಳನ್ನು ಸೃಷ್ಟಿಸುವುದೆಂದು ಹೇಳುತ್ತಾರೆ. ದೇವಸ್ಥಾನಗಳಲ್ಲಿ ಆಗಿರುವುದು ಇದೇ ರೀತಿ ಎಂದು ನಾನು ತೀರ್ಮಾನ ಕೊಡುತ್ತಿಲ್ಲ. ಇದೊಂದು ಯೋಚನೆ ಅಷ್ಟೆ.

## ಕುಸುಮ ಸಂಪ್ರೀತೆ

ಮುಂಡಾಸುರನ ವಧಾಕಾರ್ಯದ ಬಳಿಕ ಸುಮನಸರು ಶ್ರೀದೇವಿಯನ್ನು ನಾನಾ ತರದ ಸುಮಗಳಿಂದ ಅರ್ಚಿಸಿ ಸಂಸ್ತುತಿಸಿದರು ಎಂಬ ಪುರಾಣೋಕ್ತಿಯ ದ್ಯೋತಕವಾಗಿ ಈಗಲೂ ಶ್ರೀ ದುರ್ಗಾಂಬಿಕೆಗೆ ಮಲ್ಲಿಕಾ ಸುಮವೆಂದರೆ ಬಹಳ ಪ್ರೀತಿ. ಮದುವೆ ದಿಬ್ಬಣಗಳು ದೇವಳದ ಮುಂದೆ ಸಾಗುತ್ತಿದ್ದರೆ, ಸ್ವಲ್ಪ ತಡೆದು, ದೇವಿಯ ದರ್ಶನ ಮಾಡಿ ಮುಂದುವರಿಯುವುದು ಪುರಾತನದಿಂದ ನಡೆದು ಬಂದ ಸಂಪ್ರದಾಯ.

ಆದರೆ ಅದೊಂದು ದಿನ ಅಲ್ಲಿಂದ ಸಾಗುತ್ತಿದ್ದ ದಿಬ್ಬಣಿಗರು ಅದನ್ನು ಮರೆತು ತಾವೇ ಹೂಮುಡಿದುಕೊಂಡು ದೇವಿಯ ದರ್ಶನ ಪಡೆಯದೆ ಮುಂದುವರಿದಾಗ, ತಕ್ಷಣವೇ ಮದುಮಗಳು ಸ್ಮೃತಿ ತಪ್ಪಿ ಬಿದ್ದು ಬಿಟ್ಟಳಂತೆ. ಕಾರಣವರಿಯದೆ ಉಳಿದವರು ಮರುಗುತ್ತಿರಲು,ಹಿರಿಯರೊಬ್ಬರು ಕಾರಣವನ್ನು ಊಹಿಸಿದರು. ಕೂಡಲೇ ಎರಡು ಚೆಂಡು ಮಲ್ಲಿಗೆಯನ್ನು ಶ್ರೀದೇವಿಗೆ ಅರ್ಪಿಸಿ ತಮ್ಮ ತಪ್ಪನ್ನು ಒಪ್ಪಿ ಕೈ ಮುಗಿದಾಗ ಯಥಾಸ್ಥಿತಿ ಉಂಟಾಯಿತಂತೆ.

# ನಮ್ಮ ದೇವಾಲಯಗಳು

• ಶ್ರೀ ಪು. ಶ್ರೀನಿವಾಸ ಭಟ್ಟ, ಕಟೀಲು

ನಮ್ಮ ನಾಡಿನ ದೇವಾಲಯಗಳಿಗೆ, ಸಾವಿರಾರು ವರ್ಷಗಳ ಭವ್ಯ ಇತಿಹಾಸವಿದೆ. ಆಧ್ಯಾತ್ಮ ಚಿಂತನೆಯ ನೆರಳಿನಲ್ಲಿ ಜೀವನವನ್ನು ಸಾಗಿಸಿಕೊಂಡು ಬಂದಿರುವ ನಮ್ಮ ದೇಶದ ಸಮಾಜಕ್ಕೆ ಮಾನಸಿಕ ನೆಮ್ಮದಿಯ ತಾಣವಾಗಿ, ತಮ್ಮ ದೈವ ಭಕ್ತಿಯನ್ನು ಅಭಿವ್ಯಕ್ತಪಡಿಸುವ ಮಾಧ್ಯಮವಾಗಿ, ದೇವಾಲಯಗಳು ಮಹತ್ವದ ಪಾತ್ರವನ್ನು ವಹಿಸಿವೆ. ಇದರಿಂದಾಗಿಯೇ ನಮ್ಮ ಜನರು ದೇವಾಲಯಗಳ ಅಭಿವೃದ್ಧಿ ಹಾಗೂ ಉತ್ಸವಾದಿಗಳಿಗೆ ಲಕ್ಷೋಪಲಕ್ಷ ರೂಪಾಯಿಗಳನ್ನು ಆತ್ಮ ಸಂತೋಷದಿಂದ ವೆಚ್ಚ ಮಾಡುತ್ತಾರೆ. ಒಂದು ದೇವಾಲಯವು, ಆದರ ಉದ್ದೇಶ ಸಾಧನೆಯನ್ನು ನೆರವೇರಿಸಿಕೊಳ್ಳಲು ಬೇಕಾದ ಸಾಧನೆಗಳೇನು ಎನ್ನುವುದನ್ನು ಕೆಳಗಿನ ಶ್ಲೋಕದಲ್ಲಿ ಗಮನಿಸಬಹುದು.

"ಆಚಾರ್ಯ ತಪಸಾಮ್ನಾಯಜಪೇನ ನಿಯಮೇನಚ |

ಉತ್ಸವೇ ನಾನ್ನ ದಾನೇನ ಕ್ಷೇತ್ರವೃದ್ಧಿಸ್ತು ಪಂಚದಾ ||"

ಈ ವಿಷಯಗಳನ್ನು ಒಂದು ದೇವಾಲಯದಲ್ಲಿ ಅನುಷ್ಠಾನಕ್ಕೆ ತಂದಲ್ಲಿ ಆ ದೇವಳವು ಖಂಡಿತವಾಗಿಯೂ ಪ್ರಗತಿಯಾಗುವುದರಲ್ಲಿ ಅನುಮಾನವಿಲ್ಲ.

ಮೊಲನೆಯದ್ದು ಆಚಾರ್ಯ ತಪಸಾ- ಇದು ದೇವಾಲಯವನ್ನು ನಡೆಸುವ ವ್ಯಕ್ತಿಗಳಿಗೆ ಅನ್ವಯಿಸುತ್ತದೆ. ಅರ್ಚಕರು, ಆಡಳಿತೆ ನೋಡುವವರು ಇವರೆಲ್ಲ ಬಂದ ಭಕ್ತ ಜನರಿಂದ, ಹಣ ದೋಚುವ ಬುದ್ಧಿಯವರಾಗಿರದೆ, ಒಂದು ರೀತಿಯ ತ್ಯಾಗ ಜೀವನವನ್ನು ನಡೆಸುವವರಾಗಿರಬೇಕು. ತಮ್ಮ ಕರ್ತವ್ಯವನ್ನು ತಪಸ್ಸಿನಂತೆ ಮಾಡುವ ಭಾವನೆ ಅವರಿಗಿರಬೇಕು.

ಆಮ್ನಾಯಜಪ.... ಇದು ವೇದಾಧ್ಯಯನಕ್ಕೆ ಸಂಬಂಧಿಸಿದ ಪದವಾಗಿದೆ. ಈ ಕಾಲದಲ್ಲಿ ಜ್ಞಾನ ಮತ್ತು ಸಂಸ್ಕೃತಿ ಪ್ರಚಾರಕ್ಕಾಗಿ ಮಾಡಿಸುವ ಧಾರ್ಮಿಕ ಉಪನ್ಯಾಸ, ಹರಿಕಥೆ, ಪ್ರವಚನ, ಯಕ್ಷಗಾನ ಇತ್ಯಾದಿಗಳನ್ನು ಇದಕ್ಕೆ ಸೇರಿಸಬಹುದು. ಇವುಗಳಿಂದ ಆಕರ್ಷಿತರಾಗಿ ಭಕ್ತರು ಹೆಚ್ಚು ಹೆಚ್ಚಾಗಿ, ದೇವರ ಸನ್ನಿಧಿಗೆ ಬರುವ ಅವಕಾಶವಾಗುತ್ತದೆ.

ದೇವಾಲಯದ ಸಕಲ ಕಾರ್ಯಕ್ರಮಗಳಿಗೂ ಒಂದು ನಿಯಮವಿರಬೇಕು. ಈ ನಿಯಮಗಳು ಸ್ಥಳದಿಂದ ಸ್ಥಳಕ್ಕೆ ಕಿಂಚಿತ್ ಬದಲಾವಣೆ ಇರುವ ಸಂದರ್ಭವಿಲ್ಲದ್ದಿಲ್ಲ. ಬೇರೆ ಕಡೆ ಮಾಡುವುದನ್ನು ನಾವು ಮಾಡೋಣ ಎಂಬ ಭಾವನೆಯಿರಬಾರದು. ಹಿನ್ನೆಲೆಯಲ್ಲಿ ಮಹತ್ವದ ಕಾರಣವಿದ್ದಾಗ ಮಹಾಜನರು ಸೇರಿ ವಿಚಾರ ವಿನಿಮಯ ಮಾಡದೆ ನಿಯಮ ಬದಲಾಯಿಸಬಾರದು. ಕೆಲವು ನಿಯಮಗಳೇ ಸಾನ್ನಿಧ್ಯಸಂವರ್ಧನೆಗೂ ಕಾರಣೀಭೂತವಾಗುವುದುಂಟು.

ದೇವಾಲಯಗಳಲ್ಲಿ ಉತ್ಸವವೆಂದರೆ, ಕೇವಲ ವಾರ್ಷಿಕೋತ್ಸವ ಮಾತ್ರ ಎನ್ನುವ ಭಾವನೆ ಸರಿಯಲ್ಲ. ಪರ್ವದಿನಗಳಲ್ಲೂ ವಿಶೇಷ ಉತ್ಸವಗಳಿರಬೇಕು. ದೀಪೋತ್ಸವ, ರಂಗಪೂಜೆ, ಪುಷ್ಪಾಲಂಕಾರ, ಇಂತಹ ವೈವಿಧ್ಯಮಯ ಆಚರಣೆಗಳಿರುವುದು ಒಳ್ಳೆಯದು. ಮಹೋತ್ಸವ ಕಾಲದಲ್ಲಿ ಊರಭಕ್ತರು ಪರವೂರಿಗೆ ಹೋಗಬಾರದು, ಮಾಂಸಭಕ್ಷಣೆ ಮಾಡಬಾರದು, ವಿವಾಹ, ಉಪನಯನದಂತಹ ಸಮಾರಂಭಗಳನ್ನು ಏರ್ಪಡಿಸಬಾರದೆಂಬ ಪದ್ಧತಿಯಿದೆ. ಯಾಕೆಂದರೆ ಆಗ ಜನರ ಪೂರ್ಣ ಗಮನ ಉತ್ಸವದ ಕಡೆಗಿರಬೇಕು ಭಾವನೆ ಅದರಲ್ಲಿದೆ.

ನಮ್ಮ ಹಿರಿಯರು ಅನ್ನವನ್ನು 'ಅನ್ನ ಬ್ರಹ್ಮ'ನೆಂದು ಹೇಳಿರುತ್ತಾರೆ. ದೇವಾಲಯಗಳಲ್ಲಿ ಕೂಡ ಪ್ರಸಾದ ರೂಪದ ಭೋಜನ, ಪಂಚಗಜ್ಜಾಯಗಳು ಪೂಜಾವಸಾನ ಕಾಲದಲ್ಲಿ ವಿತರಣೆಯಾದರೆ ಅಲ್ಲಿ ಒಂದು ಸಂತೃಪ್ತಿಯ ವಾತಾವರಣ ಉಂಟಾಗುತ್ತದೆ. ಪ್ರಾಚೀನ ಕಾಲದಲ್ಲಿ ದೇವಾಲಯದಲ್ಲಿ ಭೋಜನ ವ್ಯವಸ್ಥೆಗೆಂದು, ರಾಜ ಮಹಾರಾಜರುಗಳು ದಾನದತ್ತಿಗಳನ್ನು

ಶ್ರೀ ಪು. ಶ್ರೀನಿವಾಸ ಭಟ್ಟ,

ಪಂಚವಟಿ, ಕಟೀಲು,

ಮಂಗಳೂರು, ದ.ಕ.

ಬಿಟ್ಟ ಉಲ್ಲೇಖವಿರುವ ನೂರಾರು ಶಿಲಾಶಾಸನಗಳು ನಮ್ಮಲ್ಲಿವೆ. ಈಗ ಈ ಕಾಲದಲ್ಲಿ ನಿತ್ಯಾನ್ನ ದಾನಗಳನ್ನು ನಡೆಸುವುದು ಕಷ್ಟಸಾಧ್ಯವಾದರೂ, ಪರವೂರಿನಿಂದ ಬಂದವರಿಗೂ, ಸೇವಾದಿಗಳನ್ನಿತ್ತವರಿಗೂ, ಸಣ್ಣ ಪ್ರಮಾಣದ ಭೋಜನದ ವ್ಯವಸ್ಥೆಯಿರುವುದು ಒಳ್ಳೆಯದು. ಮಹೋತ್ಸವ ಕಾಲದಲ್ಲೂ, ವರ್ಷದ ಕೆಲವು ನಿಯಮಿತ ದಿನಗಳಲ್ಲೂ, ಸಾರ್ವಜನಿಕ ಅನ್ನ ಸಂತರ್ಪಣೆ ಮಾಡಿಸಬಹುದು.

ಈ ದಿಶೆಯಲ್ಲಿ ಈಗ ಸಂಭ್ರಮದ ಬ್ರಹ್ಮ ಕಲಶೋತ್ಸವ ನಡೆಯುತ್ತಿರುವ ಮುಂಡಕೂರು ಶ್ರೀ ದುರ್ಗಾಪರಮೇಶ್ವರೀ ಅಮ್ಮನವರ ಸಾನ್ನಿಧ್ಯವು ಸಕಲ ರೀತಿಯಲ್ಲಿಯೂ ಪರಿಪೂರ್ಣತೆಯನ್ನು ಪಡೆದಿದೆ. ಆಡಳಿತೆ, ಅರ್ಚನೆ, ಉತ್ಸವ, ಅನ್ನದಾನ, ಪ್ರವಚನ, ಯಕ್ಷಗಾನ ಹೀಗೆ ಎಲ್ಲವೂ ಇಲ್ಲಿರುವುದು ಗಮನಾರ್ಹವಾಗಿದೆ. ಇಲ್ಲಿ ನಡೆಯುವ ಘನ, ಘನ ಕಾರ್ಯಗಳು, ಶ್ರೀ ದೇವಿಯ ಸೇವೆಯೆಂಬ ಭಾವನೆಯಿಂದ, ಸದ್ದು ಗದ್ದಲವಿಲ್ಲದೆ ನಡೆಯುತ್ತವೆ. ವ್ಯಕ್ತಿ ಪ್ರತಿಷ್ಠೆ, ಪ್ರಚಾರ, ಪ್ರಸಿದ್ಧಿಯ ಮನೋಭಾವ ಇದ್ದಂತಿಲ್ಲ. ಶ್ರೀ ದೇವಿಯ ಸನ್ನಿಧಾನಕ್ಕೆ ಹೋದಾಗ ಮಾತ್ರ ಅಲ್ಲಿ ನಡೆದ ಪವಾಡ ಸದೃಶ ಕಾರ್ಯಗಳ ಅರಿವು ನಮಗಾಗುತ್ತದೆ. ಈ ಪರಂಪರೆ ಮುಂದುವರಿಯುವಂತಾಗಲಿ ಎಂದು ಹಾರೈಸೋಣ.

## ಮುಂಡ್ಕೂರು ಮಹಿಷಮರ್ದಿನಿ ಸ್ತುತಿ

ರಾಗ: ಅಠಾಣ

ರಾಜೀವ ಲೋಚನೆ ರಾಜರಾಜೇಶ್ವರಿ
ರಾಕ್ಷಸ ಮರ್ದಿನಿ ಪಾಲಯ ಮಾಂ || ಪ ||
ರಾಮ ಸಹೋದರಿ ರಾಕೇಂದು ವದನೆ
ಕಾಮಿತದಾಯಿನಿ ಪಾಲಯ ಮಾಂ || ಅನು|ಪ||

ಕುಂದಬಂದೂಕ ಜಾಜಿ ಮಲ್ಲಿಕಾ
ಸೇವಂತಿಕಾ ಪುಷ್ಪ ಮಾಲಾಧಾರಿಣೆ
ವೃಂದ ಭಕುತ ಸಂದೋಹ ವಂದಿಸಿ
ಕಾದಂಬಿನಿ ಅಂಬ ಮಹಿಷ ಮರ್ದಿನಿ

ರಾಗ-ತಾಳ-ಲಯ ಲಾಸ್ಯ ವಿನೋದಿನಿ
ಯೋಗ-ಯಾಗ-ರತ ಜನ ಪೋಷಿಣಿ
ಬೋಗ ಭಾಗ್ಯ ಐಶ್ವರ್ಯ ಪ್ರದಾಯಿನೀ
ಮುಂಡಕೂರ ನಿವಾಸೆ ವರದಾಯಿನಿ

ರಚನೆ: ಯಂ. ವಿಶ್ವನಾಥ ಕಾಮತ್
"ಸಾಕೇತ" ಮುಂಡ್ಕೂರು

# ದಾಸರು ಕಂಡ ಶ್ರೀಕೃಷ್ಣ

* ಶ್ರೀ ಉದಯ ಕುಮಾರ್ ಹಬ್ಬು ಎಂ.ಎ.

ನಮಸ್ತೇ ಶ್ರೀ ಪಾದರಾಜಾಯ, ನಮಸ್ತೇ ವ್ಯಾಸ ಯೋಗಿನೇ ನಮಃ ಪುರಂದರಾರ್ಯಾಯ, ವಿಜಯಾರ್ಯಯ ತೇ ನಮಃ

ನಮ್ಮ ಭರತಖಂಡದಲ್ಲಿ ಭಕ್ತಿ ಮಾರ್ಗ ಎನ್ನುವುದು ಬಹು ದೊಡ್ಡ ಸಂಪ್ರದಾಯ. ನಮ್ಮ ಕರ್ನಾಟಕದಲ್ಲಿಯೇ ಅದು ಜನಿಸಿತ್ತೆನ್ನುವುದು ಹೆಮ್ಮೆಯ ವಿಷಯ. ಮಧ್ವಾಚಾರ್ಯರು ಇದರ ಆದಿಪ್ರವರ್ತಕರು. ಅವರನ್ನೇ ಗುರುವಾಗಿಟ್ಟುಕೊಂಡು ವೈಷ್ಣವ ದಾಸ ಪಂಥ ಕರ್ನಾಟಕದಲ್ಲೆಲ್ಲ ಭಕ್ತಿ ಪ್ರಚಾರ ಮಾಡಿತು. ಇದರ ಪ್ರಭಾವ ಉತ್ತರದ ಬಂಗಾಳದ ದೇಶದವರೆಗೂ ವ್ಯಾಪಿಸಿತು. ಭಕ್ತಿ ಸಂಪ್ರದಾಯವೆಂದರೇನು? ಭಗವಂತನಲ್ಲಿ ಗಾಢವಾದ ಪ್ರೇಮವೇ ಭಕ್ತಿ. ಈ ಭಕ್ತಿಸಂಪ್ರದಾಯ ನಮ್ಮ ಕನ್ನಡ ದೇಶದಲ್ಲಿ 13ರಿಂದ 18ನೇ ಶತಮಾನದ ವರೆಗೂ ತುಂಬು ಪ್ರವಾಹದಂತೆ ಹರಿಯಿತು. ಇವರನ್ನು 'ದಾಸ ಕೂಟ'ದವರೆಂದು ಕರೆಯಲಾಯಿತು. ಇವರ ಕೃತಿಗಳನ್ನೆಲ್ಲಾ ದಾಸ ಸಾಹಿತ್ಯವೆಂದು ಕರೆಯಲಾಯಿತು.

ಕನ್ನಡ ನಾಡಿನ ಪುರಂದರದಾಸರು ತ್ಯಾಗರಾಜರಿಗಿಂತಲೂ ಬಹಳ ಹಿಂದಿನವರು. ಪುರಂದರದಾಸರಿಗಿಂತಲೂ ಹೆಚ್ಚು ಹಿಂದಿನವರು ಶ್ರೀಪಾದರಾಜರು. ದಾಸ ಸಾಹಿತ್ಯದಲ್ಲಿ ಪ್ರಸಿದ್ಧರಾದ ವ್ಯಾಸತೀರ್ಥರು, ಪುರಂದರದಾಸರು, ಕನಕದಾಸರು, ವಿಜಯದಾಸರು, ಜಗನ್ನಾಥದಾಸರು ಹೀಗೆ ಇವರೆಲ್ಲರಿಗೂ ಗುರು ಸಮಾನರಾಗಿ ಇರತಕ್ಕವರು ಶ್ರೀಪಾದರಾಜರು. ದಾಸ ಸಾಹಿತ್ಯದ ಪಿತಾಮಹರೆಂದೇ ಇವರನ್ನು ಕರೆಯಲಾಗಿದೆ.

ಶ್ರೀಕೃಷ್ಣನ ವಿಚಾರ ತೆಗೆದುಕೊಂಡರೆ ಶ್ರೀಪಾದರಾಜರ ಕೃತಿಗಳ ಬಹುಭಾಗ ಇದಕ್ಕೆ ಮೀಸಲಾಗಿದೆಯೆನ್ನಬೇಕು. ಶ್ರೀಕೃಷ್ಣನ ಬಾಲ್ಯ, ಮತ್ತು ಯೌವನಗಳ ಲೀಲಾ ವಿಲಾಸಗಳನ್ನು ಶ್ರೀಪಾದರಾಯರು ವಿಧವಿಧವಾಗಿ ವರ್ಣಿಸಿರುತ್ತಾರೆ. ತಾವಾಗಿಯೋ ಇಲ್ಲವೇ ಗೋಪಿಯ ಪರವಾಗಿಯೋ ಅವರು ಅನೇಕ ಕೃತಿಗಳನ್ನು ರಚಿಸಿರುತ್ತಾರೆ. ಅವುಗಳಲ್ಲಿ ಒಂದೆರಡು ಕೃತಿಗಳಿಗೆ ಭಾಗವತವೇ ಮುಖ್ಯ ಆಧಾರವೆನಿಸಿದರೆ ಇತರ ರಚನೆಗಳಿಗೆ ಅವರ ರಸಾನುಭವವವೇ ಸಾಕ್ಷಿಯಾದಂತಿದೆ.

ಹರಿದಾಸರಿಗೆ ಶ್ರೀಕೃಷ್ಣನ ಚರಿತ್ರೆಯಲ್ಲಿ ಅವನ ಬಾಲ್ಯವೆಂದರೆ ಅಚ್ಚುಮೆಚ್ಚು. ಕಂದ ಕೃಷ್ಣಯ್ಯನನ್ನು ಕಂಡು ಗೋಪಿಯಾದ ಯಶೋಧೆಗೆ ಎಷ್ಟು ಆನಂದವೋ ಅಷ್ಟೇ ಆತಂಕವೂ ಅವಳನ್ನು ಭಾಧಿಸುವುದು. ಆ ತಾಯಿಯ ಅಕ್ಕರೆಯನ್ನು ಶ್ರೀಪಾದರಾಯರು ಸರಳವಾಗಿ ಚಿತ್ರಿಸಿರುತ್ತಾರೆ. ತುಂಟನಾದ ಕೃಷ್ಣನು ಮನೆಯಲ್ಲಿ ನಿಲ್ಲದೆ ಎಲ್ಲೆಲ್ಲಿಯೋ ಅಲೆದಾಡಿ ಆಟವಾಡಿ ಬಂದಾಗ ಆಕೆ "ಎಲ್ಲಾಡಿ ಬಂದಿಯೋ ಎನ್ನ ರಂಗಯ್ಯಾ, ನೀ ಎಲ್ಲಾಡಿ ಬಂದ್ಯೋ ಎನ್ನ ಕಣ್ಣಮುಂದಾಡದೆ" ಎಂದು ಹಂಬಲಿಸುವಳು. ಶ್ರೀಕೃಷ್ಣನು ಎಳೆಯ ಮಗುವೆಂದು ಕಣ್ಣಿಗೆ ಕಂಡರೂ ಅವನು ದೇವರ ಅವತಾರವೆಂದು ಅವಳ ಅಂತರಂಗವು ಮರೆಯುವುದಿಲ್ಲ. ಒಮ್ಮೆ ಅವನು ಆಟವಾಡಿ ಹಿಂತಿರುಗಿದಾಗ ಕೃಷ್ಣನ ಹಣೆ ಬೆವರಿಟ್ಟಿತಂತೆ. ಸಾಲದ್ದಕ್ಕೆ ಅವನ ಮೇಲೆ ಅಪವಾದಗಳು ಬೇರೆ. ಎಳೆಯ ಕಂದ ಬೀದಿಗೆ ಹೋದರೆ ಕಂಡವರ ದೃಷ್ಟಿ ತಾಕಿತೆಂದು ಅವಳಿಗೆ ಎಲ್ಲೂ ಇಲ್ಲದ ಕಳವಳ. ಕೃಷ್ಣನನ್ನು ಅಲಂಕರಿಸಿ "ದೃಷ್ಟಿತಾಕೀತೊ ಬೀದಿಮೆಟ್ಟಬ್ಯಾಡವೊ ಸೃಷ್ಟಿಯ ನಾರಿಯರೆಲ್ಲ ಕಣ್ಣಿಟ್ಟು ಹೀರುವರೋ ನಿನ್ನಾ" ಎಂದು ಬುದ್ಧಿ ಹೇಳುವಳು. ಭಕ್ತಿಭಾವದಿಂದ ಪುಳಕಿತರಾದ ಗೋಪಿಯರಿಗೆ ಅವನ ಪಾದದರ್ಶನವಾದರೆ ಸಾಕು, ತಾವು ಕೃತಾರ್ಥರಾದೆವೆಂದು ಬಗೆಯುವರು. "ಇಕ್ಕೋ ನೋಡೆ ರಂಗನಾಥನ ಚಿಕ್ಕ ಪಾದವ ಸಿಕ್ಕೀತೇ ಶ್ರೀ ಲಕ್ಷ್ಮೀಪತಿಯ ದಿವ್ಯ ಪಾದವ" ಎಂದು ಅವರು ಪುಟ್ಟ ಪಾದದ ಮಹಾತ್ಮೆಯನ್ನು ಕೊಂಡಾಡುವರು.

ಶ್ರೀಪಾದರಾಯರು ಚಿತ್ರಿಸಿರುವ ಗೋಪಿಯರು ಹಾಗೂ ಶ್ರೀಕೃಷ್ಣರ ಮಧುರ ಭಾಂದವ್ಯ ಎಷ್ಟು ಗಾಢವಾದದ್ದು ಎಂದು ವ್ಯಕ್ತವಾಗುತ್ತದೆ. ಅವರ ಸ್ನೇಹ ದೈವಿಕ ಸ್ನೇಹ. "ರಂಗ ಕೊಳಲ ನೋಡುತ ಬಂದ ಯಶೋಧೆಯ ಕಂದ" ಕೊಳಲ ಧ್ವನಿಗೆ ವಿರಹವು

ಶ್ರೀ ಉದಯ ಕುಮಾರ್ ಹಬ್ಬು, ಎಂ.ಎ., ಇಂಗ್ಲಿಷ್ ಉಪನ್ಯಾಸಕರು
ವಿ.ವಿ. ಪದವಿ ಪೂರ್ವ ಕಾಲೇಜು, ಮುಂಡ್ಕೂರು

ನಾರಿಯರಿಗೆ ಕಳವಳವಾಗಲು ಕಳವಳಿಸುತ ಬಂದ. ಇಲ್ಲಿ ಗೋಪಿಯರು ಮಾತ್ರವಲ್ಲದೆ ಅಂಗ, ವಿಹಂಗ, ಭುಜಂಗ, ನವಿಲು, ಸಾರಂಗ, ಮಾತಂಗ ಮರಿಯೋ, ಕುರಂಗಗಳು ಪರಮಾತ್ಮನ ಪಾದಗಳಿಗೆ ಬಂದೆರಗುವವು.

ಶ್ರೀಕೃಷ್ಣ ಗೋಪಿಯರ ಸಮಾಗಮ ಸಂದರ್ಭಕ್ಕಿಂತಲೂ ಅವರ ಅಗಲಿಕೆಯಿಂದುಂಟಾಗುವ ವಿರಹ ಯಾತನೆಯ ಮೂಲಕ ದಿವ್ಯ ಪ್ರೇಮದ ಸ್ವರೂಪವೆಂತಹದೆಂಬುದನ್ನು ನಿರೂಪಿಸಲು ಶ್ರೀಪಾದರಾಯರ ಮನಸ್ಸು ಹೆಚ್ಚು ಆಸಕ್ತಿ ವಹಿಸಿದಂತಿದೆ. "ಕೇಳಿದ್ಯಾ, ಕೌತುಕವನ್ನು ಕೇಳಿದ್ಯಾ ಕೇಳಿದೆ, ನಿನಗಿಂತ ಮುನ್ನ ಆಹಾ ಚಾಳಿಕಾರ ಕೃಷ್ಣ ಹೇಳದೆ ಮಧುರೆಗೆ ಕೋಳಿ ಕೂಗದ ಮುನ್ನ ನಾಳೆ ಪಯಣವಂತೆ ಎಂದು ಗೋಪಿಕೆಯರು ಕೃಷ್ಣನನ್ನು ಸ್ಮರಿಸುತ್ತಾರೆ.

ವ್ಯಾಸರಾಯರು: ವ್ಯಾಸರಾಯರು ತಮ್ಮ ಪಾಂಡಿತ್ಯದ ಸಾರರೂಪವಾಗಿ ನ್ಯಾಯಾಮೃತ, ತರ್ಕ ತಾಂಡವ, ಚಂದ್ರಿಕಾ, ಎಂಬ ಮೂರು ಸಂಸ್ಕೃತ ಗ್ರಂಥಗಳನ್ನು ರಚಿಸಿದರು. 'ಸಿರಿ ಕೃಷ್ಣ' ಎಂಬ ಅಂಕಿತದಲ್ಲಿ ನೂರಾರು ಕೃತಿಗಳನ್ನು ರಚಿಸಿದರು. ವ್ಯಾಸರಾಯರು ಶ್ರೀಕೃಷ್ಣ ಪರಮ ಭಕ್ತರು. ಅವರಿಗಾಗಿ ಕೃಷ್ಣದೇವರಾಯನು ವಿಜಯನಗರದಲ್ಲಿ ಬಾಲಕೃಷ್ಣನ ಗುಡಿಯನ್ನೂ ಕಟ್ಟಿಸಿಕೊಟ್ಟರು. ಅವರಿಗೆ ಶ್ರೀಕೃಷ್ಣ ಕಣ್ಣಿಗೆ ಕಾಣದ ದೇವರಲ್ಲ. ಇತರರಿಗೆ ಮರ ಗಿಡ, ಸುತ್ತಲಿನ ಮನುಷ್ಯರು ಎಷ್ಟು ಸ್ಪಷ್ಟರೋ, ನಿಜವೋ, ಅಷ್ಟೇ ಸ್ಪಷ್ಟ ನಿಜ ಶ್ರೀಕೃಷ್ಣ. "ಅಂತರಂಗದಲ್ಲಿ ಹರಿಯ ಕಾಣದವನು ಹುಟ್ಟು ಕುರುಡನೋ!" ಎಂದು ಒಂದು ಹಾಡಿನಲ್ಲಿ ಹಾಡಿದ್ದಾರೆ.

ಸುಳಾದಿಯೊಂದರಲ್ಲಿ ಬಾಲಕೃಷ್ಣನನ್ನು ಗೆಜ್ಜೆ ಕಟ್ಟಿಸಿ ಕುಣಿದಾಡಿದ್ದಾರೆ ತಮ್ಮ ತಲೆಯ ಮೇಲೆ.

"ನಿನ್ನ ಮೃದು ಪಾದವ ನೋಯದಂತೆ
ಎನ್ನ ಶಿರಸ್ಸಿನಲ್ಲಿಡೋ
ರನ್ನ ಕಾಲಂದಿಗೆ ಗೆಜ್ಜೆಯ ನಾದದಿ
ಧಿಮ್ಮಿ ಧೀರ ಧಿಮಿಕೆಂದು ಕುಣಿಸುವೆ
ಉದಯಾದ್ರಿ ಶ್ರೀಕೃಷ್ಣ
ಎಂಥ ಸುಲಭನೋ ನೀನು ಉದಯಾದ್ರಿ ಶ್ರೀಕೃಷ್ಣ."

ಹೀಗೆ ನೂರಾರು ಕನ್ನಡ ಕೃತಿಗಳಲ್ಲಿ ವ್ಯಾಸರಾಯರ ನಿರಾಡಂಬರ ಭಕ್ತಿ ಪ್ರಕಟವಾಗಿದೆ. ಶ್ರೀಕೃಷ್ಣನ ಮಹಿಮೆಗಳನ್ನು ವರ್ಣಿಸಿ-

"ಇಂತಪ್ಪ ಮಹಿಮೆಗಳೊಳೊಂದನ್ನಾದರೂ ಒಮ್ಮೆ
ಸಂತಸದಿ ನೆನೆಯೆ ಸಲಹುವ ನಮ್ಮ ಶ್ರೀಕೃಷ್ಣ"

ಗೋಪಿಕಾಸ್ತ್ರೀಯರು ಶ್ರೀಕೃಷ್ಣನನ್ನು ಕಾಣದಾದಾಗ –

"ಎಲ್ಲಿ ಮಾಯವಾದನೇ ರಂಗಯ್ಯನು |
ಎಲ್ಲಿ ಮಾಯವಾದನೇ
ಚೆಲ್ವೆಗೆಂಗೆಳೆಯರು ಹುಡುಕು ಹೋಗುವ ಬನ್ನಿ".

ಅವರ ವಿಶ್ವಾಸ ದೇವನಲ್ಲಿ ಅಪಾರ –

ಭಕ್ತ ವತ್ಸಲ ದೇವನು ತನ್ನವರನ್ನು
ಅಕ್ಕರದಲಿ ಪೊರೆವನೋ
ಸಿಕ್ಕದೆ ಹೋಗನು ಹುಡುಕುತ ಹೋಗುವಾ
ಅಕ್ಕಯ್ಯಾ ಬನ್ನಿ ಉಡುಪಿ ಶ್ರೀಕೃಷ್ಣನು ||

ಎಂದು ಭರವಸೆ ತಾಳುತ್ತಾರೆ.

ಅನನ್ಯ ಭಕ್ತಿಯಿದ್ದ ಭಕ್ತನಿಗೆ ಶ್ರೀಕೃಷ್ಣನು ಎಂದೆಂದೂ ಆಸರೆಯಾಗಿರುವನು.

ನಂಬಿ ಕೆಟ್ಟವರಿಲ್ಲವೋ ರಂಗಯ್ಯನ
ನಂಬದೇ ಕೆಟ್ಟರೆ ಕೆಡಲಿ.

ಪುರಂದರದಾಸರು: "ದಾಸರೆಂದರೆ ಪುರಂದರದಾಸರಯ್ಯ
ವಾಸುದೇವ ಕೃಷ್ಣನ್ನ ಸೂಸಿ ಪೂಜಿಸುವ"

ಎಂಬ ವ್ಯಾಸರಾಯರ ಮಾತುಗಳನ್ನು ಕೇಳಿದರೆ ಪುರಂದರದಾಸರು ಎಂತಹ ಮಹಿಮರು ಎನ್ನುವುದು ತಿಳಿಯುತ್ತದೆ. ಮಡದಿಯ ಮೂಲಕ ಮನಸ್ಸು ಮಾರ್ಪಟ್ಟು ವ್ಯಾಸರಾಯರ ಅನುಗ್ರಹದಿಂದ ಅಂಕಿತವನ್ನು ಪಡೆದ ಪುರಂದರದಾಸರು, ಭಗವಂತನ ಒಲವನ್ನು ಗಳಿಸಿಕೊಂಡ ಒಬ್ಬೊಬ್ಬ ಭಕ್ತರ ಭಾಗ್ಯವನ್ನು ನೆನೆ ನೆನೆದು ಆ ಮೂಲಕ ತಮ್ಮ ಹಂಬಲವನ್ನು ತೋಡಿಕೊಳ್ಳುವರು. ಶ್ರೀಮನ್ನಾರಾಯಣನ ಸೇವೆಯಲ್ಲಿಯೇ ಸರ್ವದಾ ನಿರತಳಾಗಿರುವ ಲಕ್ಷ್ಮಿಯ ಪುಣ್ಯವನ್ನು ಮನಗಂಡು

"ಏನು ಧನ್ಯಳೋ ಲಕುಮಿ ಎಂಥ ಮಾನ್ಯಳೋ
ಸಾನುರಾಗದಿಂದ ಹರಿಯ ಸೇವೆ ಮಾಡುತಿಹಳು"

ಜಗದೋದ್ಧಾರಕನನ್ನು ಮಗುವೆಂದೆನಿಸಿ ಆಡಿಸಿ, ಆನಂದಿಸಿದ ಯಶೋಧೆಯ ಸುಕೃತವನ್ನು ಸ್ಮರಿಸಿ

"ಗೋಪಿಯ ಭಾಗ್ಯವಿದು
ಶ್ರೀಪತಿ ತಾ ಶಿಶುರೂಪಿನಲ್ಲಿರುವುದು"

ಎಂಬುದಾಗಿ ತಾಯಿಯ ಕಾರ್ಯಗಳನ್ನೆಲ್ಲಾ ಮನಸಾರೆ ಹೊಗಳುವರು.

ಪುರಂದರದಾಸರಿಗೆ ಬಾಲಗೋಪಾಲನೆಂದರೆ, ಕಣ್ಣಿನಲ್ಲಿ ಹರ್ಷ ಭಾಷ್ಪಗಳು ತುಂಬಿಕೊಳ್ಳುತ್ತವೆ. ಆ ಚಿಣ್ಣನು ಕೊಳಲನ್ನು ಬಾರಿಸುತ್ತಾ ಕುಣಿಕುಣಿವ ನೋಟವನ್ನು ಎಷ್ಟು ವರ್ಣಿಸಿದರೂ ಅವರಿಗೆ ತೃಪ್ತಿಯಾಗುವುದಿಲ್ಲ. ತುಂಟ ಕೃಷ್ಣಯ್ಯನು ಕ್ಷಣಕಾಲವಾದರೂ ಮನೆಯಲ್ಲಿ ನಿಲ್ಲುವವನೇ ಅಲ್ಲ.

"ಹೋಗದಿರಲೋ ರಂಗ
ಬಾಗಿಲಿನಿಂದಾಚೆಗೆ, ಭಾಗವತರು ಕಂಡರೆ ಎತ್ತಿಕೊಂಡೊಯ್ವರೋ"

ಎಂದು ಯಶೋಧೆ ಬುದ್ಧಿ ಹೇಳುವಳು.

ಯಾರು ಏನೇ ಹೇಳಲಿ. ಅವನು ಯಶೋಧೆಗಂತೂ ಮುದ್ದಿನ ಕಂದ. ಹೇಳಿದ ಮಾತನ್ನು ಕೇಳದೆ ಹೋದರೆ, "ಬೂಚಿ ಬಂದೆ ರಂಗಾ ಬೂಚಿ ಬಂದಿದೆ" - ಎಂದು ಹೆದರಿಸುವಳು. ತಾಯಿಯು ಗುಮ್ಮನನ್ನು ಕರೆಯಲು ತುಂಟ ಕೃಷ್ಣನು "ಗುಮ್ಮನ ಕರೆಯದಿರೆ ಅಮ್ಮ ನೀನು, ಸುಮ್ಮನೆ ಇದ್ದೇನು, ದೇವರಂತೆ ಠಾವಿನಲ್ಲಿ ಕೂಡುವೆ" ಎಂಬುದಾಗಿ ತಾಯಿಯ ಮೊರೆ ಹೋಗುವನು. ಅಪ್ಪಿತಪ್ಪಿ ಕೃಷ್ಣನು ಸಕಾಲಕ್ಕೆ ಮನೆಗೆ ಬಾರದಿದ್ದರೆ ಯಶೋಧೆ "ಅಮ್ಮಾ ನಿಮ್ಮ ಮನೆಗಳಲ್ಲಿ ನಮ್ಮ ರಂಗನ ಕಾಣಿರೇನೆ" ಎಂದು ಎಲ್ಲರೊಂದಿಗೆ ತಾನು ಹುಡುಕುವಳು. ಕಾಳಿಂಗನ ಹೆಡೆಯ ಮೇಲೆ ನಿಂತು ಕುಣಿದಾಡುವ ಸಂದರ್ಭವನ್ನು ಚಿತ್ತವತ್ತಾಗಿ ನಿರೂಪಿಸಿರುವರು.

"ಆಡಿದನೋ ರಂಗ ಅದ್ಭುತದಿಂದಲಿ,
ಕಾಳಿಂಗನ ಫಣೆಯಲಿ ಪಾಡಿದವರಿಗೆ
ಬೇಡಿದ ವರಗಳ ನೀಡುತಲಿ, ದಯ ಮಾಡುತಲಿ,
ನಲಿದಾಡುತಲಿ, ಬೆಣ್ಣೆ ಬೇಡುತಲಿ"

ಎಂದು ಆರಂಭಿಸಿ ಶ್ರೀಕೃಷ್ಣನ ಭಾವ ಭಂಗಿಗಳನ್ನೆಲ್ಲಾ ವಿಸ್ತಾರವಾಗಿ ವರ್ಣಿಸಿರುವರು.

ಒಟ್ಟಾಗಿ ಪರಿಶೀಲಿಸಿದಾಗ ನಾವು ಯಾವುದೋ ಒಂದು ಬೇರೊಂದು ಲೋಕವನ್ನು ಪ್ರವೇಶಿಸಿದಂತಾಗುತ್ತದೆ.

"ದಾಸರು ಕಂಡ ಶ್ರೀಕೃಷ್ಣ"ನನ್ನು ಈ ಚಿಕ್ಕ ಲೇಖನದಲ್ಲಿ ಹಿಡಿದಿಡಲು ಅಸಾಧ್ಯ ವಿಷಯ. ಕನಕದಾಸರು, ಜಗನ್ನಾಥದಾಸರು ಈ ಮುಂತಾದ ದಾಸವರೇಣ್ಯರು ಶ್ರೀಕೃಷ್ಣನ ಮಹಿಮೆಯನ್ನು ಎತ್ತಿ ಕೊಂಡಾಡಿದ್ದಾರೆ. ಉಡುಪಿಯಲ್ಲಿ ಶ್ರೀಕೃಷ್ಣನನ್ನೇ ತನ್ನತ್ತ ತಿರುಗುವಂತೆ ಮಾಡಿದ ಕನಕದಾಸರು ಚಿರಸ್ಮರಣೀಯರಾಗಿದ್ದಾರೆ.

★ ★ ★

# ನಂಬಿಕೆ - ಮೂಢನಂಬಿಕೆ

• ಡಾ| ಜಿ.ಎನ್. ಭಟ್, ಕಟೀಲು

ಮಧ್ಯಯುಗದ ಕೆಲದೇಶದ ಜನರು ಭೂಮಿ ಚೌಕವಾಗಿದೆಯೆಂದು ನಂಬಿದ್ದರು. ಅನಂತರ ಖಗೋಳ ಶಾಸ್ತ್ರ ಬೆಳೆದ ಹಾಗೆ, ಟೆಲಿಸ್ಕೋಪ್ ಮುಂತಾದ ಸಾಧನ ಸಲಕರಣೆಗಳ ಸಹಾಯ, ಗ್ರಹ ನಕ್ಷತ್ರಗಳ ಅಧ್ಯಯನದಿಂದ ತಿಳಿದು ಬಂತು; ಭೂಮಿ ಚಪ್ಪಟೆಯಾಗಿಯಾಗಲಿ, ಚೌಕಾಕಾರವಾಗಿಯಾಗಲೀ ಇಲ್ಲ; ಭೂಮಿ ಅಂಡಾಕಾರವಾಗಿದೆ. ಅವರ ಮೊದಲ ನಂಬಿಕೆ ಮೂಢನಂಬಿಕೆಯೆಂದಾಯಿತು? ಅಲ್ಲವೇ?

ಚಿಕ್ಕವರಿದ್ದಾಗ ಮಕ್ಕಳನ್ನು ಊಟ ಮಾಡದೇ ಹೋದರೆ, ಸುಮ್ಮನಿರದಿದ್ದರೆ, ನಿದ್ದೆ ಮಾಡದೇ ಹೋದರೆ 'ಗುಮ್ಮನಿದ್ದಾನೆ' ಎಂದು ಹೆದರಿಸಿ, ನಂಬಿಕೆ ಹುಟ್ಟಿಸುವುದು ನಮಗೆಲ್ಲ ತಿಳಿದ ವಿಷಯ. ಆ ನಂಬಿಕೆ ಕೆಲವು ವರ್ಷ ಮಾತ್ರ. ಅನಂತರ ತನ್ನಿಂದ ತಾನೇ ದೂರವಾಗಿ ಬಾಲ್ಯ ಕಳೆದ ಮೇಲೆ ಅದೊಂದು ಮೂಢನಂಬಿಕೆಯಾಗಿತ್ತು ಎಂದು ಅರಿವಾಗುತ್ತದೆ. ಮತ್ತೆ ನಗುವೂ ಬರುತ್ತದೆ. ಅದೇ ಚಿಕ್ಕವರಿದ್ದಾಗ ಯಾವುದೋ ಒಂದು ಕಲ್ಲೂ, ಮರವೂ, ಭೂಮಿಯೂ ಭೂತದ್ದು, ದೈವದ್ದು ಎಂದು ನಂಬಿದ್ದು, ಅರಿವು ಹಾಗೂ ವಯಸ್ಸು ಜಾಸ್ತಿಯಾದಾಗ ಅದು ಮೂಢನಂಬಿಕೆ ಎಂದೂ ಆಗಬಹುದು, ನಂಬಿಕೆಯೆಂದೂ ಅಥವಾ ಇವೆರಡರ ನಡುವೆ ಡೋಲಾಯಮಾನವೂ ಆಗಿರಬಹುದು. ಯಾಕೆ ಹೀಗೆ? ವಿಶ್ಲೇಷಿಸುವಾ.

ಸಾರಾಸಾರ ವಿವೇಚನೆ, ವಿಮರ್ಶೆ ಅಥವಾ ಸತರ್ಕವಾಗಿ ಯಾವುದನ್ನಾದರೂ ನಾವು ಒಪ್ಪಿ ನಂಬಿದರೆ, ಭಾವಿಸಿದರೆ ಅದು ನಂಬಿಗೆಯಾಗಿಯೇ ಉಳಿಯುತ್ತದೆ. ಅದೇ ಆಲೋಚನೆಯಿಲ್ಲದೇ, ಬೇರೆಯವರು ಅಂದರೆ ತಿಳಿದವರೋ ತಿಳಿಯದವರೋ ಎಂಬ ಅರಿವಿಲ್ಲದೆ ನಂಬುವುದೇ ಮೂಢನಂಬಿಕೆ.

"ನಂಬಿ ಕೆಟ್ಟವರಿಲ್ಲ ಜಗದಿ" ಎಂದು ದಾಸರು ಹಾಡಿದರು. ಅಂದರೆ ನಂಬುವುದನ್ನು, ನಂಬಲನರ್ಹವಾದುದನ್ನು ನಂಬುವುದು ಎಂದರ್ಥವಲ್ಲ. ದಾಸರು ಹೇಳಿದ್ದು ದೇವರನ್ನು, ದೇವರಂತಹದನ್ನು ನಂಬಿದರೆ ಎಂದೂ ಕೆಡುಕಾಗದು ಎಂದರ್ಥ. ಹಾಗೇ 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂದೂ ಹಾಡಿದ್ದಾರೆ. ಆಧುನಿಕರು ಕೆಲವರು ಇದನ್ನು 'ಮೂಢನಂಬಿಕೆ ' ಎಂದು ಹೀಗಳೆದಿದ್ದಾರೆ. ಅದಕ್ಕೆ ಕಾರಣವನ್ನೂ ಕೊಟ್ಟಿದ್ದಾರೆ. 'ಗುಲಾಮತನ'ವೆಂದರೆ ಬೌದ್ಧಿಕ ದಿವಾಳಿತನ, ವಿವೇಚನೆಗೆ ಅವಕಾಶವೇ ಇಲ್ಲ. ಆದ್ದರಿಂದ ಇದೊಂದು ಮೂಢನಂಬಿಕೆ ಎನ್ನುತ್ತಾರೆ. ಇವರ ಮಾತಿನಲ್ಲೂ ಸತ್ಯವಿದೆ. ಭಕ್ತಿಪಂಥದಲ್ಲಿ ಗುಲಾಮತನವನ್ನೇ 'ಶರಣ'ವೆಂದಿದೆ. ಆಗ ಅದು ಸರಿಯೂ ಆಗುತ್ತದೆ. ಹಾಗೆ 'ಗುರು'ವು ನಿಜವಾಗಿ 'ಗುರುವಾಗಿದ್ದರೆ' ಆಗ ಗುಲಾಮತನ ಬಂದರೂ ಮೋಕ್ಷ (ಬಿಡುಗಡೆ)ಯಾಗುವುದಾದರೆ ಯಾಕಾಗಬಾರದು? ಅಂದರೆ ಕ್ಷಣಿಕ ಗುಲಾಮತನದಿಂದ ಶಾಶ್ವತ ಬಿಡುಗಡೆ ಲಭಿಸುವುದು ಗ್ಯಾರಂಟಿಯೆಂದಾದಲ್ಲಿ ಅದು ಮೂಢನಂಬಿಕೆಯೆನ್ನಬಹುದೇ? ನಂಬಿಕೆಯೆನ್ನಬಹುದೇ? ನೀವೇ ನಿಮ್ಮ ನಿಲುವು ಕಂಡುಕೊಳ್ಳಿ, ಎಂದರೆ ನಂಬಿಕೆಯುಂಟಾದೀತೆ? ಮೂರ್ತಿಪೂಜೆಯ ನಂಬಿಕೆಯ ಕುರಿತು ಒಂದು ಐತಿಹಾಸಿಕ ಘಟನೆಯನ್ನು ಉಲ್ಲೇಖಿಸ ಬಯಸುತ್ತೇನೆ:

ಆರ್ಯ ಸಮಾಜ ಸ್ಥಾಪಕರು ಸ್ವಾಮಿ ದಯಾನಂದ ಸರಸ್ವತಿಯವರು. ವೇದಾಧ್ಯಯನ ಸಂಪನ್ನರಲ್ಲದೇ ವೇದವಿದ್ಯೆಯಲ್ಲಿ ಅಚಲ ಶ್ರದ್ಧೆಯುಳ್ಳವರು. ಅವರು ಎಳೆಯ ವಯಸ್ಸಿನಲ್ಲಿದ್ದಾಗ ರಾತ್ರಿಯೊಮ್ಮೆ ಎದ್ದು, ದೇವಾಲಯದ ದೇವರ ವಿಗ್ರಹದತ್ತ ಏನೋ ಸರಿದು ಶಬ್ದ ಮಾಡಿದ ಹಾಗಾಯಿತು. ಆ ಕಡೆ ಗಮನ ಹರಿಸಿದರು. ದೇವರ ವಿಗ್ರಹದ ಮೇಲೆ ಇಲಿಯೊಂದು ತಲೆ, ಮೂಗು, ಕೈ ಹೀಗೆ ಎಲ್ಲೆಂದರಲ್ಲಿ ಹಾರಾಡಿದ್ದಲ್ಲದೇ ತಲೆಯ ಮೇಲೆ ಕುಳಿತು ಮಲಿನಗೊಳಿಸಿತು. ಈ ಘಟನೆಯು ಅವರಲ್ಲಿ ತೀವ್ರ ಬದಲಾವಣೆ

ಡಾ| ಜಿ.ಎನ್. ಭಟ್, ಪ್ರಾಂಶುಪಾಲರು
ಶ್ರೀ ದುರ್ಗಾಪರಮೇಶ್ವರೀ ದೇವಳ ಪ್ರಥಮ ದರ್ಜೆ ಕಾಲೇಜು, ಕಟೀಲು

ತಂದಿತು. ಈ ದೇವರ ಮೂರ್ತಿಯಲ್ಲಿ ದೇವರಿಲ್ಲ. ಹಾಗೊಮ್ಮೆ ಇದ್ದರೆ ಪುಕ್ಕಲು ಪ್ರಾಣಿಯಾದ ಇಲಿಯನ್ನು ನಿಗ್ರಹಿಸಲಾರದ ಈ ದೇವರ ಶಕ್ತಿ ಎಂಥಹುದು? ಇಂತಹ ನಿಶ್ಶಕ್ತ ದೇವವಿಗ್ರಹ ಪೂಜಿಸಿದುದರಿಂದ ಏನು ಫಲ? ಎಂದು ಮೂರ್ತಿಪೂಜೆಯನ್ನು ಖಂಡಿಸಿದರು. ಮಾತ್ರವಲ್ಲ ನಿರಾಕಾರ ಈಶ್ವರೋಪಾಸನೆಯ ಪಂಥವನ್ನೇ ಪ್ರಾರಂಭಿಸಿ ಆರ್ಯಸಮಾಜ ಸ್ಥಾಪಕರಾದರು.

ಸ್ವಾಮಿ ದಯಾನಂದರ ಮೊದಲ ನಂಬಿಕೆ ಅನಂತರ ಮೂಢನಂಬಿಕೆಯೆಂದಾಯಿತು. ಅನಂತರ ಅವರ ನಂಬಿಕೆ ಬೇರೆಯಾಯಿತು. ಆದರೆ ಅವರಿಗಾದ ಅರಿವಿನಿಂದ ಕೂಡಿದ ನಂಬಿಕೆ ಹಲವರಲ್ಲಾಗಲಿಲ್ಲ. ಯಾಕೆಂದರೆ, ಇನ್ನೂ ಕೋಟ್ಯಂತರ ಜನರು ಇದೇ ದೇಶದಲ್ಲಿ ವಿಗ್ರಹಾರಾಧನೆ ನಡೆಸುತ್ತಿರುವುದೇ ಸಾಕ್ಷಿ. ಮೂರ್ತಿಯಲ್ಲಿ ದೇವರಿಲ್ಲವೆಂಬ ನಂಬಿಕೆಯಿದ್ದಲ್ಲಿ ಈಗಲೂ ಇಷ್ಟೊಂದು ದೇವಸ್ಥಾನಗಳು ಹೊಸತಾಗಿ ಸ್ಥಾಪನೆಗೊಳ್ಳುವುದಲ್ಲದೇ ಹಳೆಯದೂ ಜೀರ್ಣೋದ್ಧಾರವಾಗಿ ಬ್ರಹ್ಮಕಲಶೋತ್ಸವಗಳು ನಡೆಯುತ್ತಿದ್ದವೇ?

ಇಲ್ಲಿ ಹೇಳಬೇಕಾದುದಿಷ್ಟೇ. ಒಬ್ಬರ ನಂಬಿಕೆ ಇನ್ನೊಬ್ಬರದ್ದಾಗಲೇಬೇಕೆಂದಿಲ್ಲ. ಅದು ಮತ್ತೊಬ್ಬರಿಗೆ ಮೂಢನಂಬಿಕೆಯೂ ಆಗಬಹುದು. ಆಗದೆಯೂ ಇರಬಹುದು. ಆದರೆ ವಿಗ್ರಹದಲ್ಲಿ ಮಾತ್ರ ದೇವರಿರುವುದು, ನಮ್ಮ ನಂಬಿಕೆಯ ಆಕಾರದ ಮೂರ್ತಿಯಲ್ಲಿ ಮಾತ್ರ ದೇವರಿರುವುದು, ಎಂಬೂದೂ ಮೂಢನಂಬಿಕೆಯಾಗುತ್ತದಲ್ಲವೇ?

ದೇವರ ವಿಷಯ ಬಂದಾಗ ಅದರ ಸಂಗಡ ಶ್ರದ್ಧೆಯೆಂಬ ಪದವೂ ಅನಿವಾರ್ಯ. 'ಜ್ಞಾನ ಅಥವಾ ಲೋಕಾನುಭವ ಬೇಕಾದರೆ, ಗುರುಹಿರಿಯರಲ್ಲಿ ಶ್ರದ್ಧಾ ಭಕ್ತಿಯಿರಬೇಕು' ಎಂಬುದನ್ನೂ ಹೇಳುತ್ತಾರೆ. ಇದೂ ಒಂದು ನಂಬಿಕೆ. ದೇವರಲ್ಲಿ, ಗುರುಗಳಲ್ಲಿ ಶ್ರದ್ಧೆ, ಹಿರಿಯರಲ್ಲಿ ಭಕ್ತಿ ಎಂದರು. ಸ್ವಾಮಿ ದಯಾನಂದರಿಗೆ ದೇವರಲ್ಲಿ ಶ್ರದ್ಧೆಯಿರಲಿಲ್ಲವೇ? ಇತ್ತು. ಅದು ಕೊನೆಗೂ ಬದಲಾಗಲಿಲ್ಲ. ಆದರೆ ದೇವರು ವಿಗ್ರಹದಲ್ಲಿದ್ದಾನೆ ಎಂಬುದು ಮಾತ್ರ ಅವರ ನಂಬುಗೆಯಾಗಿತ್ತು. ಅದು ಮಾತ್ರ ಬದಲಾಗಿ ಹೋಯಿತು. ಹಾಗೇ ನಮಗೆ ಗುರುಗಳಲ್ಲಿ ಶ್ರದ್ಧೆಯಿರುತ್ತದೆ. ಆದರೆ ಯಾವುದೋ ಒಬ್ಬ ಗುರುವಿನ ಆಚರಣೆಯಲ್ಲಿಯೋ, ಜ್ಞಾನದಲ್ಲಿಯೋ, ಬೋಧನೆಯಲ್ಲಿಯೋ ನಂಬುಗೆ ಹೊರಟು ಹೋಗಬಹುದು ಅಥವಾ ಅದು ಮೂಢ ಎಂದೆನಿಸಬಹುದು. ಆದರೆ ಅದು ಶ್ರದ್ಧಾಭಂಗವಾಗಬಾರದು.

**ಸಮಾನ ಶ್ರದ್ಧೆ :**

ಹಾಗಾದರೆ ಶ್ರದ್ಧೆಯೆಂದರೇನು? ಅದು ಕೇವಲ ನಂಬುಗೆಯಲ್ಲ. ಅದರ ಪರ್ಯಾಯ ಪದವೂ ಅಲ್ಲ. ಓರ್ವ ಯುವ ಸನ್ಯಾಸಿಯವರು ಇತ್ತೀಚೆಗೆ ಸ್ವಾರಸ್ಯವಾಗಿ ವಿವರಿಸಿದ್ದಾರೆ. ಯಾರೋ ಒಬ್ಬರು ಒಂದು ಊರಿಗೆ ದಾರಿ ಕೇಳುತ್ತಾರೆ. 'ನಿಮಗೆ ಅಲ್ಲಿಗೆ ಹೋಗಬೇಕೆಂದರೆ ಇದು ದಾರಿ' ಎನ್ನುತ್ತಾರೆ. ಅದನ್ನು ನಂಬಿ ಆ ದಾರಿ ಹಿಡಿದು ದಾರಿಹೋಕ ಹೋಗುತ್ತಾನೆ. ಅವನು ಗುರಿ ತಲುಪಿದರೆ ಅದು ನಂಬಿಕೆಯಾಯಿತು. ಆದರೆ ಶ್ರದ್ಧೆ ಹಾಗಲ್ಲ. ಉದಾಹರಣೆಗೆ, ಚಿಕ್ಕವರಿದ್ದಾಗ ಅಕ್ಷರಾಭ್ಯಾಸ ಮಾಡಿಸುತ್ತಾರೆ. ಕನ್ನಡದಲ್ಲಿ ' ಅ' ಬರೆಸುತ್ತಾರೆ. ದೇವನಾಗರಿಯಲ್ಲಿ 'अ' ಬರೆಸುತ್ತಾರೆ. ಹಲವಾರು ಸಲ ಗುರುಹಿರಿಯರು ಅದೇ 'ಅ' ' अ' ಎಂದಿರುವುದರಿಂದ ನಮಗೆ ಶ್ರದ್ಧೆ ಬೆಳೆಯಿತು. ಅದು ಎಷ್ಟು ದೃಢವಾಗಿದೆಯೆಂದರೆ ಬೇರೆ ಯಾವ ರೀತಿ ಬರೆದರೂ ನಾವು ಅದನ್ನು 'ಅ' ಎನ್ನುವುದಿಲ್ಲ. ಸ್ವಾರಸ್ಯವೆಂದರೆ ಕನ್ನಡದ 'ಅ'ರೇಖೆ ಬೇರೆ. ದೇವನಾಗರಿಯ 'अ' ರೇಖೆಯೇ ಬೇರೆ. ಆದರೂ ಎರಡನ್ನೂ ನಾವು ಒಂದೇ ರೀತಿ ಸಂಬೋಧಿಸುತ್ತೇವೆ. ಇದಕ್ಕೆ ಇಂತಹದ್ದಕ್ಕೆ ಶ್ರದ್ಧೆ ಎಂದರು. ಹಾಗೆ 'ಏಕಂ ಸದ್ ವಿಪ್ರಾಃ ಬಹುಧಾ ವದಂತಿ' ಸತ್ಯವೊಂದೇ, ಅದನ್ನು ಪ್ರಾಜ್ಞರು ನಾನಾ ರೀತಿಯಿಂದ ಹೇಳುತ್ತಾರೆ ಅಥವಾ ದೇವನೊಬ್ಬ ನಾಮ ಹಲವು, 'ಗುರಿಯೊಂದೇ ದಾರಿ ಹಲವು'. ಎಲ್ಲಾ ಶ್ರದ್ಧೇಯ ವಾಕ್ಯಗಳು. ಇವು ಕೇವಲ ನಂಬುಗೆಯ, ಮೂಢನಂಬಿಕೆಯ ಮಾತುಗಳಲ್ಲ. ಸಾರ್ವಕಾಲಿಕ, ಸರ್ವವ್ಯಾಪಕ.

'ಶ್ರದ್ಧಯಾ ದೇಯಮ್ ಅಶ್ರದ್ಧಯಾ ಅದೇಯಮ್' ಅಂದರೆ ಶ್ರದ್ಧೆಯಿಂದ ಕೊಡಬೇಕು. ಅಶ್ರದ್ಧೆಯಿಂದ ಕೊಡಬಾರದು ಎಂಬುದು ಉಪನಿಷದ್ ವಾಕ್ಯ. 'ಶ್ರದ್ಧಾವಾನ್ ಲಭತೇ ಜ್ಞಾನಮ್' ಎಂಬುದು ಗೀತಾ ವಾಕ್ಯ. ಶ್ರದ್ಧಾವಂತನಿಗೆ ಮಾತ್ರ ಅರಿವು ಎಂಬುದು ಅರ್ಥ. ಈ ಶ್ರದ್ಧೆ ಬರುವುದು ಅಥವಾ ಉತ್ಪನ್ನವಾಗುವುದು ಕೇವಲ ಓದುವುದರಿಂದಲೋ, ಕೇಳುವುದರಿಂದಲೋ ಬರುವಂತಹುದಲ್ಲ. ಅದಕ್ಕೆ ಬ್ರಹ್ಮ ಸಾಕ್ಷಾತ್ಕಾರಕ್ಕೆ ಮೂಲಾಧಾರವಾದ ಶ್ರವಣ, ಮನನ, ನಿಧಿಧ್ಯಾಸ ಅತ್ಯಗತ್ಯ. ನಮಗೆ 'ಅ' ಎಂಬ ರೇಖಾ ವಿನ್ಯಾಸಗಳೇ 'ಅ'ಲಿಪಿಯೆಂಬ ಶ್ರದ್ಧೆ ಬೆಳೆಯಲು ಶ್ರವಣ, ಮನನ, ನಿಧಿಧ್ಯಾಸಗಳಾಗಿವೆ ಎಂಬುದೇ ನಮ್ಮ ದೃಢ ನಂಬಿಕೆ.

**ಅಪರಕರ್ಮ ನಂಬಿಕೆ :**

ಸತ್ತ ಮೇಲೆ ಹಲವು ಕರ್ಮಗಳನ್ನು ಎಲ್ಲಾ ಜಾತಿ ಮತ ಪಂಗಡಗಳಿಗೆ ಸೇರಿದವರೂ ಮೃತರಾದವರ ಬಗೆಗೆ ನಡೆಸುತ್ತಾರೆ. ಇದೇನು ಮೂಢನಂಬಿಕೆಯೇ? ನಂಬಿಕೆಯೇ? ಶ್ರದ್ಧೆಯೇ?

ಮೂಢನಂಬಿಕೆಯೆಂದಾದಲ್ಲಿ ಎಲ್ಲಾ ದೇಶ, ಜಾತಿಗಳಿಗೂ ಸೇರಿದವರೂ ಇದರಲ್ಲಿ ಹೆಚ್ಚಿನವರು ಒಳಗೊಂಡಂತಾಯಿತಲ್ಲ? ವಿದ್ಯಾವಂತರೆಂದುಕೊಂಡ, ನಾಸ್ತಿಕರೆಂದು ನಂಬಿದವರೂ ಮೃತರ ಫೋಟೋವನ್ನು ಪತ್ರಿಕೆಗಳಲ್ಲಿ ಹಾಕಿ ಸ್ಮರಿಸುತ್ತಾರಲ್ಲ. ಆ ಚಿತ್ರವನ್ನು ಮೃತರಾದವರು ನೋಡುತ್ತಾರೆಂದೋ? ಬದುಕಿದ ಇವನು ನೋಡಬೇಕೆಂದೋ? ಸಂಬಂಧಿಸಿದವರು ಮಾತ್ರ ನೋಡಬೇಕೆಂದಿದ್ದರೆ ಪತ್ರಿಕೆಗಳಿಗೇಕೆ ಪ್ರಕಟಣೆ ಕೊಡಬೇಕು? ಇದೆಂತಹ ನಂಬಿಕೆ? ಜಿಜ್ಞಾಸುಗಳು ವಿಮರ್ಶಿಸಬೇಕು. ಮೃತರಾದವರ ಬಗೆಗೆ, ಅನುಭವಿಗಳು, ತಿಳಿದವರು, ಶಾಸ್ತ್ರವಿದರು ಹೇಳಿದಂತೆ ಕರ್ಮಗಳನ್ನು ನಡೆಸುವುದು ಶ್ರದ್ಧೆಗೆ ಸಂಬಂಧಿಸಿದ ವಿಷಯ. ಆದ್ದರಿಂದಲೇ ಅಂತಹ ಕರ್ಮಗಳಿಗೆ 'ಶ್ರಾದ್ಧಕರ್ಮ' ಎಂದು ಹೆಸರು. ಅವರವರ ಮತಧರ್ಮ, ಸಂಪ್ರದಾಯಗಳಿಗನುಸರಿಸಿ ಶ್ರದ್ಧೆ ಬೆಳೆಸಿಕೊಂಡವರು 'ಶ್ರಾದ್ಧ' ಮಾಡುತ್ತಾರೆ. ಪತ್ರಿಕೆಗಳಲ್ಲಿ ಫೋಟೋ ಹಾಕಿಸುವುದು ನನ್ನ ದೃಷ್ಟಿಯಲ್ಲಿ ಶ್ರಾದ್ಧವೂ ಅಲ್ಲ, ನಂಬಿಕೆಯೂ ಅಲ್ಲ. 'ಗತಾನುಗತಿಕೋ ಲೋಕಃ' ಬೇರೊಬ್ಬರನ್ನು ಆಲೋಚಿಸದೇ ಅನುಸರಿಸುವ ಪ್ರವೃತ್ತಿಯಷ್ಟೆ.

ಕಳೆದ ಕೆಲವು ವರ್ಷಗಳ ಹಿಂದೆ, ಶಬರಿಮಲೆಯಲ್ಲಿ ಮಕರ ಜ್ಯೋತಿ ಕಾಣುವುದೆಂಬ ಕುರಿತು ಪತ್ರಿಕೆಗಳಲ್ಲಿ ವಾದ ವಿವಾದಗಳು ಬೆಳೆದಿತ್ತು. ಅದರ ಸಂಗಡ ಸ್ಥಳೀಯ ಕೆಲವು ನಂಬಿಕೆಗಳ ಬಗೆಗೂ ಚರ್ಚೆ ನಡೆಯಿತು. ಆಗ ಅಧ್ಯಾಪಕರೊಬ್ಬರು 'ನಂಬಿಕೆಗಳನ್ನು ಕೆಣಕದಿರಿ' ಎಂದು ಪತ್ರಿಕೆಗೊಂದು ' ಓದುಗರ ಓಲೆ' ಬರೆದರು. ಅದು ಪ್ರಕಟವಾದಾಗ ಅವರ ಅಭಿಪ್ರಾಯವನ್ನು ತೀವ್ರವಾಗಿ ಕೆಣಕಿದರು. ಆದರೆ ಆಗ ಕೆಣಕಿದ ಕೆಲವರ ನಂಬಿಕೆ ಈಗ ಬದಲಾಗಿದೆ! ಅದು ಮೂಢನಂಬಿಕೆಯ ಕಡೆಯಿಂದ ನಂಬಿಕೆಯ ಕಡೆಗೆ ಬಂದಿದೆ. ಅವರ ಮುಂದಿನ ದಾರಿ ಆಶೋತ್ತರಗಳ ಫಲ, ಪ್ರತಿಫಲಗಳ ತಾಳಮೇಳಗಳ ಅಳತೆಗೋಲುಗಳ ಮೇಲೆ ಆ ನಂಬಿಕೆ ನಿಂತಿದ್ದರೆ ಅದು ಪುನಃ ಮೂಢನಂಬಿಕೆಯೂ ಆದೀತು, ಶ್ರದ್ಧೆಯಾಗಿಯೂ ಪರಿಣಮಿಸೀತು.

**ಉಪಸಂಹಾರ :**

ಈ ಎಲ್ಲ ನಂಬಿಕೆ, ಶ್ರದ್ಧೆಗಳಿಗೆ ಆಧಾರಭೂತವಾದ ಭಾವನೆಯ ಕುರಿತು ಒಂದು ಶ್ಲೋಕ ಹೀಗೆ ಹೇಳುತ್ತದೆ:

ನ ದೇವೋ ವಿದ್ಯತೇ ಕಾಷ್ಠೇ ನ ಪಾಷಾಣೇ ನ ಮೃಣ್ಮಯೇ
ಭಾವೇಷು ವಿದ್ಯತೇ ದೇವಃ ತಸ್ಮಾದ್ ಭಾವೋ ಹಿ ಕಾರಣಮ್.

ದೇವರು ಕಟ್ಟಿಗೆಯಲ್ಲಿಯೋ, ಕಲ್ಲಿನಲ್ಲಿಯೋ ಇರುವುದಿಲ್ಲ. ಆದರೆ ಮನುಷ್ಯರ ಭಾವನೆಗಳಲ್ಲಿ ದೇವರು ಇರುತ್ತಾನೆ. ಆದ್ದರಿಂದ ಭಾವನೆಯೇ ಮುಖ್ಯ ಕಾರಣ. ಅಂದರೆ ಭಾವನೆಯಲ್ಲಿ, ಹೃದಯದಲ್ಲಿ, ದೇವರನ್ನು ಕಾಣದವರು ಮಂದಿರದಲ್ಲಿ ದೇವರನ್ನು ಕಾಣಲು ಸಾಧ್ಯವಿಲ್ಲ. ಅಯೋಧ್ಯೆಯಲ್ಲಿ ರಾಮನನ್ನು ಕಾಣುವುದು ಅಸಾಧ್ಯ. ಹಾಗೇ ಕಾಣಬೇಕಾದರೆ 'ಸಂಸ್ಕಾರ' ಅಗತ್ಯ. ಸಂಸ್ಕಾರದಲ್ಲಿ ನಂಬಿಕೆ ಇದ್ದರೆ ಸದ್ಭಾವನೆ ಬೆಳೆಯುತ್ತದೆ. ಸದ್ಭಾವನೆ ಬಲಿತರೆ ವಿವೇಕದಿಂದ ನಂಬಿಕೆಯುಂಟಾಗಿ ಶ್ರದ್ಧೆ ಬೆಳೆಯುತ್ತದೆ. ಹಾಗಾಗಿಯೇ ನಮ್ಮ ಹಿಂದಿನ ಪೂರ್ವಿಕರು, ಋಷಿಮುನಿಗಳು ದೇಶದಲ್ಲಿ, ಮಣ್ಣಿನಲ್ಲಿ ಮಾತೃತ್ವ ಕಂಡರು. ಯಜ್ಞಕ್ಕಾಗಿ ಗಿಡದಿಂದ ಒಂದು 'ಎಲೆ' ತೆಗೆಯಬೇಕಾದರೂ ಅದಕ್ಕೆ ಜೀವವಿದೆ ಎಂದೇ ಭಾವಿಸಿ (ಗಿಡಗಳಿಗೆ ಜೀವವಿದೆ ಎಂದು ಆಧುನಿಕ ಜೀವವಿಜ್ಞಾನವೂ ಇಂದು ದೃಢಪಡಿಸಿದೆ) ಅದನ್ನು ಪ್ರಾರ್ಥಿಸಿ ಸದ್ವಿನಿಯೋಗಕ್ಕಾಗಿ ಹಿಂಸೆಯಾದರೂ ಸಹಿಸಿಕೋ ಎಂದು ಬೇಡಿ ಎಲೆ, ಟೊಂಗೆ ಬೇಕಷ್ಟೆ ಪಡೆದರು.

ಇದು ಮೂಢನಂಬಿಕೆಯೆಂದಾದಲ್ಲಿ, ಇಂದು, ಗಿಡಗಳಿಗೆ ಜೀವವಿದೆ ಎಂದು ತಿಳಿದು, ಸ್ವಾರ್ಥ, ಹಿಂಸಕ, ಧನಿಕ ಬುದ್ಧಿಯಿಂದ ಕಾಡನ್ನೇ ನಾಶ ಮಾಡುವ ನಾಗರಿಕ ಮಾನವನ ಬುದ್ಧಿಯ ನಂಬಿಕೆಯನ್ನು ಅಲ್ಲ, ಮೂಢನಂಬಿಕೆಯನ್ನು ಸಂಬೋಧಿಸಲು ಯಾವ ಶಬ್ದ ಪ್ರಯೋಗಿಸೋಣ!

(ಪ್ರಸ್ತುತ ಲೇಖನ ಈ ವಿಷಯದಲ್ಲಿ ಜಿಜ್ಞಾಸುಗಳಾಗಲು ಪ್ರೇರೇಪಣೆ ದಿಕ್ಸೂಚಿಯೇ ಹೊರತು ಸಿದ್ಧಾಂತದ ಪ್ರಬಂಧವಲ್ಲ)

* * *

# ದೇವರು ಮತ್ತು ದೇವಾಲಯ

• ಶ್ರೀ ಬಿ. ಪಾಂಡುರಂಗ ಪ್ರಭು

ಪುರುಷಾರ್ಥಗಳ ಸಾಧನೆಯೇ ಮಾನವ ಜನ್ಮದ ಪ್ರಮುಖ ಧ್ಯೇಯ. ಆಸ್ತಿಕ ಭಾವನೆ ಪುರುಷಾರ್ಥ ಸಾಧನೆಯ ಮಾಧ್ಯಮ. ದೇವರ ಅಸ್ತಿತ್ವವನ್ನರಿಯದವರ ಬಾಳು ಹಾಳು.

ದೇವರು ಸರ್ವತ್ರ ವ್ಯಾಪ್ತನಾಗಿ ಸಕಲ ಚರಾಚರ ಜೀವಿಗಳಲ್ಲಿಯೂ ಇದ್ದಾನೆ. ಸೂಕ್ಷ್ಮ ಜೀವಿಗಳಲ್ಲಿ ಮತ್ತು ಸೂಕ್ಷ್ಮ ವಸ್ತುಗಳಲ್ಲಿ ಸೂಕ್ಷ್ಮಾತಿಸೂಕ್ಷ್ಮನಾಗಿಯೂ, ಬೃಹದಾಕಾರದ ಜೀವಿಗಳಲ್ಲಿ ಹಾಗೂ ಬೃಹತ್ ಪದಾರ್ಥಗಳಲ್ಲಿ ಬೃಹದಾಕಾರನಾಗಿಯೂ ಇದ್ದಾನೆ. ಎಲ್ಲೆಡೆಯಲ್ಲಿಯೂ ಇರುವ ದೇವರನ್ನು ಏಕತ್ರ ಕೂಡಿಸಿ ಆರಾಧಿಸಿ ಅನುಗ್ರಹ ಹಾಗೂ ಸಾಕ್ಷಾತ್ಕರಿಸಿಕೊಂಡು ಆರಾಧಿಸಿ ಕೃತಾರ್ಥರಾಗುತ್ತಾರೆ.

ದೇವರು ಸಗುಣ, ನಿರ್ಗುಣ ಸಂಪನ್ನನೂ, ನಿರಾಂಕಾರಿಯೂ ಮಹಾ ಪ್ರಾಜ್ಞನೂ ಸರ್ವ ಚೈತನ್ಯಗಳ ಸೂತ್ರದಾರನೂ ಆಗಿರುವನು.

ದೇವರು ಮತ್ತು ಧರ್ಮದ ಬಗ್ಗೆ ಚಿಂತನೆ ಮಾಡುವುದು ಇಳಿ ವಯಸ್ಸಿನಲ್ಲಿ ಎಂದು ಜನ ಸಾಮಾನ್ಯರ ನಂಬಿಕೆ. ಧರ್ಮ ಸಾಧನೆಗೆ ಶರೀರ ಒಂದು ಸಾಧನ. ಮುಪ್ಪು ಬಂದಾಗ ಶರೀರ ಮನಸ್ಸಿನ ಬಗ್ಗೆ ಚಿಂತಿಸುತ್ತಾ ಕಾಲ ಕಳೆಯುವ ಸಂದರ್ಭದಲ್ಲಿ ದೇವರ ಚಿಂತನೆ, ಪೂಜೆ, ಧ್ಯಾನ ಇವುಗಳಿಗೆ ಅವಕಾಶವಾದರೂ ಎಲ್ಲಿ? "ಮುಪ್ಪಿಂ ದೊಪ್ಪ ವಳಿಯದ ಮುನ್ನ ಮೃತ್ಯು ಮುಟ್ಟುವ ಮುನ್ನ ಪೂಜಿಸು ನಮ್ಮ ಕೂಡಲ ಸಂಗಮ ದೇವನ..." ಎಂದು ಬಸವಣ್ಣನವರು ವಚನಾಮೃತದಲ್ಲಿ, ಶರೀರ ಸುದೃಢವಾಗಿದ್ದಾಗಲೇ ದೇವರ ಪೂಜೆ ಸಾಧನೆ ಮಾಡಬೇಕೆಂದು ಪ್ರತಿಪಾದಿಸಿರುವರು.

ತಾನು ಸಂತೋಷವಾಗಿದ್ದಾಗ ದೇವರನ್ನು ನೆನೆಯದೆ ಅಸಂತೋಷದಲ್ಲಿದ್ದಾಗ ಮಾತ್ರ ದೇವರನ್ನು ನೆನೆದು ತನ್ನ ಸಂಕಷ್ಟಗಳ ನಿವಾರಣೆಗಾಗಿ ವ್ರತಗಳನ್ನು ಮಾಡುವ ಯಾ ಹರಕೆ ಹೇಳಿಕೊಳ್ಳುವ ಒಂದು ವಿಚಿತ್ರ ಪ್ರವೃತ್ತಿ ಹೆಚ್ಚಿನ ಜನರಲ್ಲಿದೆ. ಅದಲ್ಲದೆ ದೇವರಿಗೆ ಏನನ್ನಾದರೂ ಕೊಟ್ಟು ಆತನಿಂದ ನಮ್ಮ ಬೇಡಿಕೆಗಳನ್ನು ಪಡೆಯುವ ಪರಸ್ಪರ ವಿನಿಮಯ ಪದ್ಧತಿಯನ್ನು ನಾವು ಜನರಲ್ಲಿ ಕಾಣುತ್ತಿದ್ದೇವೆ.

ಭಗವಂತನ ಮೇಲೆ, ಮಹಾತ್ಮ್ಯಜ್ಞಾನವಿರಿಸಿಕೊಂಡ ಪರಮ ಪ್ರೇಮವೇ ಭಕ್ತಿ. ಎಲ್ಲಿಯವರೆಗೆ ಪ್ರಾಪಂಚಿಕ ಆಸೆ ಆಕಾಂಕ್ಷೆಗಳು ನಮ್ಮ ಹೃದಯದಲ್ಲಿ ತುಂಬಿ ತುಳುಕುತ್ತಿರುವುವೋ ಅಲ್ಲಿಯವರೆಗೆ ಭಕ್ತಿ ನಮ್ಮಲ್ಲಿ ಉದಯಿಸಲಾರದು. ಜನರು ಪರಿಶುದ್ಧ ಮನಸ್ಸಿನಿಂದ ಒಂದು ಎಲೆಯನ್ನೊ, ಹುಲ್ಲು ಕಡ್ಡಿಯನ್ನೊ, ಹೂವನ್ನೊ, ಹಣ್ಣನ್ನೊ, ನೀರನ್ನೊ ಪ್ರೀತಿಯಿಂದ ನೀಡಿದರೆ ಸಾಕು ನಾನು ಸ್ವೀಕರಿಸುತ್ತೇನೆ ಎಂದು ಶ್ರೀಕೃಷ್ಣ ಪರಮಾತ್ಮ "ಗೀತೆ"ಯಲ್ಲಿ ಹೇಳಿದ್ದಾನೆ.

ಭಕ್ತರ ಆತ್ಮೋದ್ಧಾರಕ್ಕೆ ಭಕ್ತಿಯೊಂದೇ ಸಾಧನ.

ಪ್ರಾರ್ಥನೆಯೇ ಧ್ಯಾನ-ಪ್ರಾರ್ಥನೆಯೇ ದರ್ಶನ, ಪ್ರಾರ್ಥನೆಯೇ ಭಗವಂತನೊಡನೆ ಸಲ್ಲಾಪ. ಭಗವಂತನ ನಾಮ ಸ್ಮರಣೆಗಿಂತ ಮಿಗಿಲಾದುದು ಯಾವುದೂ ಇಲ್ಲ. ಅನವರತ ಪ್ರಾರ್ಥನೆ ನಮ್ಮ ಜೀವನದ ಮುಖ್ಯ ಪಲ್ಲವಿಯಾಗಬೇಕು. ದೌರ್ಬಲ್ಯದ ಜಾಡ್ಯಕ್ಕೆ ಧ್ಯಾನದ ಶಕ್ತಿ ಸಂಜೀವಿನಿಯಾಗುವುದು.

ಶ್ರೀ ಬಿ. ಪಾಂಡುರಂಗ ಪ್ರಭು, ಪ್ರಾಂಶುಪಾಲರು

ವಿದ್ಯಾವರ್ಧಕ ಪದವಿಪೂರ್ವ ಕಾಲೇಜು, ಮುಂಡ್ಕೂರು - 576 121, ದ.ಕ.

ದೇವಾಲಯಗಳು ಸಮಾಜದ ಕಣ್ಣುಗಳು, ದೇವಾಲಯಗಳು ಮಾನವನ ಆಧ್ಯಾತ್ಮಿಕ ಉನ್ನತಿಗಾಗಿ ಇರುವ ಧಾರ್ಮಿಕ ಕೇಂದ್ರ ಎನ್ನುವಲ್ಲಿ ಎರಡು ಮಾತಿಲ್ಲ. ದೇವಾಲಯವು ಧಾರ್ಮಿಕ ಆಧ್ಯಾತ್ಮಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕ್ಷೇತ್ರವೆನಿಸಿ ಮಹತ್ವಪೂರ್ಣ ಕಾರ್ಯಗಳು ನಿರಂತರವಾಗಿ ನಡೆಸಿಕೊಂಡು ಬರುತ್ತಿವೆ.

ಸರ್ವಾಂತರ್ಯಾಮಿಯಾದ ಮಹಾಶಕ್ತಿಗೆ ಗುಡಿ ಗೋಪುರಗಳ ಅಗತ್ಯವಿದೆಯೇ ಎಂಬ ಜಿಜ್ಞಾಸೆ ಬರುವುದು ಸಹಜ. "ಸಂಘೇ ಶಕ್ತಿ, ಕಲೌಯುಗೇ" ಎಂಬ ಉಕ್ತಿಯಂತೆ ಸಾಮೂಹಿಕ ಪ್ರಾರ್ಥನಾದಿಗಳನ್ನು ಮಾಡುವುದರಿಂದ ವಿಶಿಷ್ಟವಾದ ಫಲವು ದೊರೆಯುವುದು ಎಂಬ ಸದುದ್ದೇಶದಿಂದ ದೇವಾಲಯಗಳನ್ನು ನಿರ್ಮಿಸಲಾಗಿದೆ. ಶಾಸ್ತ್ರೋಕ್ತವಾಗಿ ನಿರ್ಮಿಸಿದ ದೇವಾಲಯಗಳಲ್ಲಿ ಮಂತ್ರ ಬಿಂಬವನ್ನು ಪ್ರತಿಷ್ಠಾಪಿಸಿ ಸಮಸ್ತ ದೈವೀ ಶಕ್ತಿಗಳನ್ನು ಆ ಮೂರ್ತಿಯಲ್ಲಿ ಆವಾಹಿಸಿ ನಿತ್ಯ ಪೂಜಾ, ಉತ್ಸವಾದಿ ಸತ್ಕಾರ್ಯಗಳನ್ನು ಮಾಡಿದಾಗ ದೇವರು ಪ್ರಸನ್ನರಾಗುತ್ತಾರೆ. ಸಂತುಷ್ಟನಾದ ದೇವನು ಲೋಕದಲ್ಲಿ ಸುಭಿಕ್ಷೆಯನ್ನು ಉಂಟು ಮಾಡುತ್ತಾನೆ ಎಂದು ಶಾಸ್ತ್ರಗಳಲ್ಲಿ ಉಲ್ಲೇಖಿಸಲಾಗಿದೆ.

ದೇವಾಲಯವು ಜೀರ್ಣವಾಗಿದ್ದರೆ ಕೂಡಲೇ ಜೀರ್ಣೋದ್ಧಾರವನ್ನು ಮಾಡಬೇಕು. ಮಂದಿರ ದುಸ್ಥಿತಿಯಲ್ಲಿದ್ದರೆ ದೈವೀ ಪ್ರಕೋಪದಿಂದ ಲೋಕದಲ್ಲಿ ದುರ್ಭಿಕ್ಷೆ ಉಂಟಾಗುವುದು. ಜೀರ್ಣೋದ್ಧಾರಾದಿಗಳಿಂದ ದೇವರು ತೃಪ್ತಿ ಹೊಂದುತ್ತಾರೆ, ಜನರಿಗೆ ಸಕಲ ಸಂಪತ್ಸಮೃದ್ಧಿ ಏಕತಾಶಕ್ತಿಗಳನ್ನು ನೀಡುತ್ತಾರೆ ಎಂಬುದು ಜನರ ನಂಬಿಕೆ.

ಜೀರ್ಣೋದ್ಧಾರವಾದ ದೇವಾಲಯಗಳಲ್ಲಿ ವಿಶಿಷ್ಟ ಚೈತನ್ಯ ದೇವರ ಮೂರ್ತಿಯಲ್ಲಿ ತುಂಬಿಕೊಳ್ಳಲು ಕಲಶಗಳನ್ನು ಸ್ಥಾಪಿಸಲಾಗುವುದು. ಕಲೆಗಳು ಯಾವುದರಲ್ಲಿ ಸೇರಿಕೊಳ್ಳುತ್ತವೆಯೋ ಅದೇ ಕಲಶ, ಪ್ರಧಾನವಾದ ಕಲಶವೇ ಬ್ರಹ್ಮ ಕಲಶ. ದೇವಾಲಯಗಳಲ್ಲಿ ದೇವರ ಸಾನ್ನಿಧ್ಯದ ಪರಿಪೂರ್ಣತೆಗೆ ಬ್ರಹ್ಮಕಲಶವು ಕಾರಣವಾಗುತ್ತದೆ.

ಆಧುನಿಕ ದೇವಾಲಯ ಕೇವಲ ಭಕ್ತರ ಮಂದಿರಲ್ಲ, ಸಮಾಜದ ಸಂಘಟನಾ ವೇದಿಕೆಯೂ ಆಗಿದೆ. ಸದಾ ದೇವರು ಧರ್ಮ ಹಾಗೂ ರಾಷ್ಟ್ರ ನಿರ್ಮಾಣ ಜೊತೆಯಾಗಿ ಸಾಗಲಿ. ಜೊತೆಯಾಗಿ ನೆರವೇರಲಿ ಎಂದು ಪ್ರಾರ್ಥಿಸೋಣ.

## ಅವಭೃತ

ಶ್ರೀದೇವಿಯ ರಥೋತ್ಸವದ ಮರುದಿನ ಸಮೀಪದ ಶಾಂಭವಿ ನದೀ ತೀರದಲ್ಲಿ ಅವಭೃತ. ಅವಭೃತ ಮುಗಿದ ಮರುದಿನದಿಂದ ನಾವು ನೋಡುತ್ತಿರುವಂತೆಯೇ ಶಾಂಭವಿ ನದೀ ನೀರು ಇಳಿದು ಹೋಗುವ ಘಟನೆ, ದೇವಿಯು ತನ್ನ ಅವಭೃತಕ್ಕಾಗಿ ನೀರನ್ನು ಉಳಿಸುವತೆ ಶಾಂಭವಿಗೆ ನೀಡಿದ ಆಜ್ಞೆಯಂತೆ ಭಾಸವಾಗುತ್ತದೆ.

# ಸಾಹಿತ್ಯ ಮತ್ತು ಸಮಾಜ

• ಶ್ರೀ ಬಾಲಕೃಷ್ಣ ಶೆಟ್ಟಿ

ಪ್ಲೇಟೋ ತನ್ನ ಆದರ್ಶ ರಾಜ್ಯದಿಂದ ಸಾಹಿತ್ಯವನ್ನು ಬಹಿಷ್ಕರಿಸಿದಾಗ, ಸಾಹಿತ್ಯ ಸಮಾಜದ ಮೇಲೆ ದುಷ್ಪರಿಣಾಮವನ್ನುಂಟು ಮಾಡುತ್ತದೆಂದು ಗ್ರಹಿಸಿದ. ಆದರೆ ಕಾವ್ಯವು "ಕಾಂತಾಸಂಮಿತತಯೋಪದೇಶಯುಜೇ" ಎಂಬ ಮಮ್ಮಟನ ವಚನದಲ್ಲಿ ಸಾಹಿತ್ಯದ ಇನ್ನೊಂದು ಮುಖದ ದರ್ಶನವಾಗುತ್ತದೆ. ಈ ಎರಡೂ ವಿಭಿನ್ನವಾದ ಹೇಳಿಕೆಗಳನ್ನು ಗಮನಿಸಿದರೆ ಸಾಹಿತ್ಯವು ಸಮಾಜದ ಮೇಲೆ ದುಷ್ಪರಿಣಾಮವನ್ನೋ, ಸತ್ಪರಿಣಾಮವನ್ನೋ ಎಸಗಬಲ್ಲ ಸಾಮಾರ್ಥ್ಯವುಳ್ಳದ್ದೆಂದು ಸ್ಪಷ್ಟ. ಸಮಾಜವನ್ನು ಬಿಟ್ಟು ಕವಿ ಇರಲು ಸಾಧ್ಯವಿಲ್ಲ ಕವಿಕೃತಿಗೆ ಮೂಲ ಸಾಮಗ್ರಿಗಳೆಲ್ಲವೂ ಸಮಾಜದಿಂದಲೇ ಬರಬೇಕು. ಒಬ್ಬ ಕವಿಯಿಂದ ಒಂದು ಕೃತಿ ರಚನೆಯಾಗಬೇಕಾದರೆ ಆತನ ಅನುಭವಕ್ಕೆ, ಆಲೋಚನೆಗೆ ಎಷ್ಟು ಸಾಮಾಜಿಕ ಸಾಮಗ್ರಿಗಳು ನಿಲುಕುತ್ತದೆಯೋ ಅಷ್ಟನ್ನೂ ಹೊಸ ಹೊಸ ರೀತಿಯಲ್ಲಿ ಜೋಡಿಸಿ ಬಣ್ಣಗೂಡಿಸಿ ಕವಿ ರೂಪಿಸಬಲ್ಲನೇ ಹೊರತು ಅಭೂತಪೂರ್ವವಾದುದೇನನ್ನು ತಳಹದಿ ಇಲ್ಲದೆ ಕವಿ ಕಲ್ಪಿಸಲಾರ. ತಾನು ಕಂಡ ಸಮಾಜವನ್ನು ತನ್ನ ಪ್ರತಿಭೆಯಿಂದ ರೂಪಾಂತರಿಸಿ ಹೊಸ ಮೌಲ್ಯವನ್ನೂ ಹೇಳುವುದೇ ಕವಿಯ ಕರ್ಮ - ಕವಿಯ ದೃಷ್ಟಿ ಹೇಗೋ ಹಾಗೆ ಸೃಷ್ಟಿಯಾಗುತ್ತದೆ. ಆನಂದವರ್ಧನ ಕವಿಶಕ್ತಿಯನ್ನು ಈ ರೀತಿಯಾಗಿ ಹೇಳಿದ್ದಾನೆ.

"ಅಪಾರೇ ಕಾವ್ಯ ಸಂಸಾರೇ ಕವಿರೇವ ಪ್ರಜಾಪತಿಃ

ಯಥಾಸ್ಮೈರೋಚತೇ ವಿಶ್ವ ತಥೇದಂ ಪರಿವರ್ತತೇ"

ಅಪಾರವಾದ ಕಾವ್ಯ ಜಗತ್ತಿನಲ್ಲಿ ಕವಿಯೇ ಸೃಷ್ಟಿಕರ್ತ. ಆತ ತನಗೆ ಹೇಗೆ ರುಚಿಸುವುದೋ ಹಾಗೆ ವಿಶ್ವವನ್ನು ರೂಪಾಂತರಗೊಳಿಸುತ್ತಾನೆ. ಅಂದರೆ ಒಂದನ್ನು ಇನ್ನೊಂದಾಗಿ ಪರಿವರ್ತಿಸುವ ನಿತ್ಯ ಸ್ವಾತಂತ್ರ್ಯ ಕವಿ ಪ್ರತಿಭೆಗುಂಟು. ಇಲ್ಲಿ ಸಾಹಿತಿ ಜೀವನವನ್ನು ಕೇವಲ ಪ್ರತಿಬಿಂಬಿಸುವುದಿಲ್ಲ. ವಿಮರ್ಶಿಸುತ್ತಾನೆ. ವಾಸ್ತವಿಕತೆಯನ್ನೂ ತಿರಸ್ಕರಿಸುತ್ತಾನೆಂದಲ್ಲ ಅದನ್ನೂ ಅರಗಿಸಿಕೊಂಡು ಬೆಳೆಯುತ್ತಾನೆ.

ಯಾವುದೇ ಸಾಹಿತ್ಯವು ಸಮಾಜಕ್ಕೆ ವಿಮುಖವಾಗಿ ಬಡವರ ದೀನ ದಲಿತರ ಗೋಳನ್ನು ಕಿವಿಗೆ ಹಾಕಿಕೊಳ್ಳದೆ ದಂತದ ಗೋಪುರದಲ್ಲಿ ಕುಳಿತುಕೊಂಡು ಸಾಹಿತ್ಯಕ್ಕಾಗಿ ಸಾಹಿತ್ಯ ರಚಿಸಿ ಮೈಮರೆಯುತ್ತದೆಯೋ ಅಂತಹ ಸಾಹಿತ್ಯ ಇಲ್ಲಿಯವರೆಗೆ ನಿಲ್ಲಲಿಲ್ಲ ನಿಲ್ಲುವುದೂ ಇಲ್ಲ. ಇದಕ್ಕೆ ಪ್ರತ್ಯಕ್ಷ ಸಾಕ್ಷಿ ಸಾಹಿತ್ಯ ಚರಿತ್ರೆಗಳೇ ಆಗಿವೆ. ಸಮಾಜವು ಬದಲಾದಂತೆ ಸಾಹಿತ್ಯವೂ ಬದಲಾಗಬೇಕು. ಎಲ್ಲಿ ಸಾಹಿತ್ಯವು ತನ್ನ ಚಾಲನಶಕ್ತಿಯನ್ನೂ ಕಳೆದುಕೊಂಡು ನಿಂತು ಕೊಳೆಯಲಾರಂಭಿಸುತ್ತದೆಯೋ ಅದರ ಜಾಗದಲ್ಲಿ ಹೊಸತು ಹುಟ್ಟುವುದು ಅನಿವಾರ್ಯವಾಗುತ್ತದೆ. ಯಾವ ಸಾಹಿತ್ಯವು ಸಾಮಾಜಿಕ ಬದುಕಿಗೆ ಹೊಸ ಮೌಲ್ಯವನ್ನು ನೀಡಲು ಸಹಕಾರಿಯಾಗುತ್ತದೆಯೋ ಅಂತಹ ಸಾಹಿತ್ಯ ಜೀವಂತವಾಗಿರುತ್ತದೆ.

ಆಧುನಿಕ ಜಗತ್ತಿನ ಬದಲಾದ ಪರಿಸರದಲ್ಲಿ ಸಾಹಿತ್ಯ ಬಹುಮುಖವಾಗಿ ಬೆಳೆದಿದೆ. ವಾಸ್ತವಿಕತೆಯ ಅರ್ಥವೂ ವ್ಯಾಪಕವಾಗಿದೆ. ಔದ್ಯೋಗಿಕ ಕ್ರಾಂತಿ, ಯಂತ್ರ ನಾಗರೀಕತೆಗಳು ಜೀವನದ ಸ್ವರೂಪವನ್ನೇ ಬದಲಾಯಿಸಿವೆ. ಈ ಬದಲಾವಣೆಗೆ

ಶ್ರೀ ಬಾಲಕೃಷ್ಣ ಶೆಟ್ಟಿ, ಉಪನ್ಯಾಸಕರು

ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನ ಪ್ರಥಮ ದರ್ಜೆ ಕಾಲೇಜು, ಕಟೀಲು

ಮೊದಲು ಹೊಂದಿಕೊಳ್ಳಬೇಕಾದವನು ಸಾಹಿತಿ. ಜಾತಿ, ಮತ, ಕುಲ ಈ ಭೇದ ಭಾವಗಳು ಎಂದಿನಿಂದಲೂ ಇದ್ದವುಗಳು. ಹಿಂದೂ-ಮುಸಲ್ಮಾನ, ಸವರ್ಣೀಯ- ಅವರ್ಣೀಯ, ಬ್ರಾಹ್ಮಣ-ಬ್ರಾಹ್ಮಣೇತರ ಈ ರೀತಿಯ ವ್ಯತ್ಯಾಸ ಇಂದು ನಿನ್ನೆಯದಲ್ಲ. ಸಮಾಜದ ಕಣ್ಣಾದ ಕವಿಗೆ ಈ ಭೇದವು ಇತರರಿಗಿಂತ ಹೆಚ್ಚು ನಿಚ್ಚಳವಾಗಿ ಕಾಣಿಸುತ್ತದೆ. ಅದನ್ನೇ ಆತ ಕಾವ್ಯದ ಮೂಲಕ ಕಾಣಿಸಿ ಶಾಂತಿಯ ದೂತನಾಗಿ ಕೆಲಸ ಮಾಡಬೇಕಾಗುತ್ತದೆ. ಇಂತಹ ಹೊಣೆ ಹೊತ್ತ ಕವಿಗೆ ಸಮಾಜವನ್ನು ಕಾಣುವ ವಿಶಾಲ ದೃಷ್ಟಿ ಇರಬೇಕಾಗುತ್ತದೆ. ಸಾಹಿತಿ ಯಾವ ಕಣ್ಣಿನಿಂದ ಸಮಾಜವನ್ನು ನೋಡುತ್ತಾನೋ ಆ ಕಣ್ಣಿನ ಮೂಲಕವೇ ಚಿತ್ರ ಅವನಿಗೆ ಮೂಡಿ ಬರುತ್ತದೆ. ತನ್ನ ನೋಟದ ಪರಿಧಿಯನ್ನು ಕಿರಿದುಗೊಳಿಸಿಕೊಂಡಿರುವ ಸಾಹಿತಿಯಿಂದ ಸಮಾಜವು ಏನನ್ನೂ ನಿರೀಕ್ಷಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಕವಿಯ ಅಥವಾ ಸಾಹಿತಿಯ ಕೆಲಸ ನಡೆಯುವುದು ಭಾಷೆಯಲ್ಲಿ. ಇಂತಹ ಭಾಷೆ ಕವಿಯ ಅಂತರಂಗದೊಳಗಡೆ ಹೇಗೋ ಹಾಗೆ ಹೊರಗಡೆಯೂ ಇರತಕ್ಕದ್ದು. ಸಾಹಿತಿ ಸಮಕಾಲೀನ ಸಮಾಜದಲ್ಲಿ ಬಾಳಬೇಕಾದವನು. ಆದುದರಿಂದ ಅವನು ಬಳಸುವ ಭಾಷೆ ಜನಮನಕ್ಕೆ ಸಮೀಪವಾಗಿರಬೇಕು. ಸಾಹಿತ್ಯವನ್ನೂ ಸಮಾಜದ ಕ್ರಾಂತಿಗಾಗಿ ಮೊತ್ತಮೊದಲು ಕನ್ನಡ ನಾಡಿನಲ್ಲಿ ಸಮರ್ಥವಾಗಿ ಬಳಸಿಕೊಂಡವರು ವಚನಕಾರರು. ಸಾಹಿತ್ಯವು ಹೇಗೆ ಸಾಮಾಜಿಕ ಕ್ರಾಂತಿ ಮಾಡಬಹುದು ಎಂಬುದನ್ನು ಕ್ರಾಂತಿಕಾರಿ ಭಕ್ತಿ ಭಂಡಾರಿ ಬಸವಣ್ಣನವರ ಮುಂದಾಳುತನದಲ್ಲಿ ಅವರು ತೋರಿಸಿಕೊಟ್ಟಿದ್ದಾರೆ. ವಾಸ್ತವವಾಗಿ ಸಾಹಿತ್ಯವು ತತ್ಕಾಲೀನ ಸಾಮಾಜಿಕ ಸಮಸ್ಯೆಯನ್ನು ಒಳಗೊಂಡರೂ ಅದನ್ನು ಮೀರಿದ ಶಾಶ್ವತವಾದ ದೇಶ ಕಾಲಾತೀತವಾದ ಸತ್ಯವನ್ನು ಸಾರುವಂತಿರಬೇಕು. ಇದಕ್ಕೆ ಒಂದು ಉದಾಹರಣೆ ಕೊಡುವುದಾದರೆ ರಾಮಾಯಣ ಕಾಲದ ಪರಿಸರಕ್ಕೂ ಇಂದಿನ ಸಮಾಜಕ್ಕೂ ಯಾವ ಸಂಬಂಧ ಇಲ್ಲವೆಂಬಷ್ಟು ಬದಲಾವಣೆಯಾಗಿದೆ. ಆದರೆ ಆ ಕಾವ್ಯ ಇಂದಿಗೂ ನಮಗೆ ಆಸ್ವಾದ್ಯವಾಗುತ್ತದೆ. ಇದಕ್ಕೆ ಕಾರಣ ಒಂದು ಒಳ್ಳೆಯ ಸಾಹಿತ್ಯ ಕೃತಿಯೂ ಸಾರ್ವಕಾಲಿಕ ಧರ್ಮವನ್ನು ಒಳಗೊಂಡಿರುತ್ತದೆ. ಯುಗಧರ್ಮ ಬದಲಾದರೂ ಸಾರ್ವಕಾಲಿಕ ಧರ್ಮ ಬದಲಾಗದೇ ಉಳಿಯುತ್ತದೆ. ಒಟ್ಟಿನಲ್ಲಿ ಸಾಹಿತ್ಯವು ಸಮಾಜದ ಶಾಶ್ವತ ಸಮಸ್ಯೆಗಳನ್ನೂ ವ್ಯಾಖ್ಯಾನಿಸುತ್ತದೆ. ಆದರೆ ಇಂದಿನ ಸಾಹಿತಿಗೆ ಮುಂದಿರುವ ಸವಾಲು ಬಹಳ ಸಂಕೀರ್ಣವಾದುದು.

ವಿಜ್ಞಾನದ ಬೆಳವಣಿಗೆ ಹೊಂದಿದಂತೆ ಮನುಷ್ಯ ಮನುಷ್ಯನ ನಡುವೆ ಅಂತರವು ಜಾಸ್ತಿಯಾಗ ತೊಡಗಿದೆ. ಇದನ್ನು ಮತ್ತೆ ಬೆಸೆಯುವ ತುರ್ತಿನ ಕೆಲಸ ಇಂದಿನ ಸಾಹಿತಿಗಳ ಮೇಲಿದೆ.

★ ★ ★

# "ಒಂದು ಘಂಟೆಯ ಜ್ಯೋತಿಷ್ಯ"

• ಶ್ರೀ ಬಿ. ರಾಮಚಂದ್ರ ಆಚಾರ್ಯ

ಕಾಲಾನುಕಾಲದಿಂದಲೂ ಜ್ಯೋತಿಷ್ಯ ಶಾಸ್ತ್ರದ ಸತ್ಯಾಸತ್ಯತೆಯು ವಿವಾದಾಸ್ಪದವಾಗಿಯೇ ಇದೆ. ವಿಶಾಲವಾದ ಸಾಗರದಂತಹ ಹರವು ಉಳ್ಳ ಜ್ಯೋತಿಷ್ಯವನ್ನು ಸರಿಯಾಗಿ ತಿಳಿದುಕೊಳ್ಳುವ ಪ್ರಯತ್ನವನ್ನೇ ಮಾಡದೆ ಅದನ್ನು ಸಾರಾಸಗಟಾಗಿ ಖಂಡಿಸುವುದೇ ವೈಜ್ಞಾನಿಕ ಮಾರ್ಗವೆಂದು ತಿಳಿದ ವಿಜ್ಞಾನಿಗಳು, ವಿದ್ಯೆಯ ಅಹಂಕಾರ ತುಂಬಿದ ಜೋಯಿಸರುಗಳು, ನಂಬಲೂ ಆಗದ, ನಂಬದೇ ಇರಲೂ ಆಗದ ದ್ವಂದ್ವದಲ್ಲಿ ಜನ ಸಾಮಾನ್ಯರು ಇವರ ನಡುವೆ ಈ ಶಾಸ್ತ್ರ ಸೊರಗುತ್ತಿದೆ.

ಜ್ಯೋತಿಷ್ಯ ಎಂದರೇನೆಂದು ಸ್ವಲ್ಪವೂ ತಿಳಿಯದ, ನಕ್ಷತ್ರ ರಾಶಿಗಳ ಜ್ಞಾನ ಇರದ ಆದರೆ ವಿವೇಕಶಾಲಿಗಳಾದ ಓದುಗರಿಗೊಂದು ತುಣುಕು ಜ್ಯೋತಿಷ್ಯದ ಅಭ್ಯಾಸವನ್ನು ಈ ಲೇಖನದಲ್ಲಿ ವಿವರಿಸಲಾಗಿದೆ. ಇದನ್ನು ಸೂಕ್ಷ್ಮವಾಗಿ ಅರಿತುಕೊಂಡು ನಿಮ್ಮ ಜೀವನದಲ್ಲಿ ಅನ್ವಯಿಸಿ ನೋಡಿಕೊಳ್ಳಿ.

ಮೊತ್ತಮೊದಲು ಈ ಸರಣಿಯನ್ನು ಬಾಯಿಪಾಠ ಮಾಡಿ -

ಚಂದ್ರ, ಶನಿ, ಗುರು, ಕುಜ, ರವಿ, ಶುಕ್ರ, ಬುಧ.

ಈ ಸರಣಿಗೊಂದು ವೈಜ್ಞಾನಿಕ ಆಧಾರವೂ ಇದೆ. ಇದು ನ್ಯಾಯವಾಗಿ ಶನಿಯಿಂದ ಆರಂಭವಾಗಬೇಕಾದದ್ದು. ಚಂದ್ರನನ್ನು ಕೊನೆಯಲ್ಲಿ ಸೇರಿಸಬೇಕಾಗಿತ್ತು. ಆದರೆ ಶನಿ ಒಂದು ಅಶುಭಗ್ರಹವಾದದ್ದರಿಂದ ಅದರಿಂದ ಆರಂಭ ಬೇಡ ಅಂತ ಈ ಹೊಂದಾಣಿಕೆ. ಶನಿ-ಗುರು-ಕುಜ-ರವಿ- ಶುಕ್ರ-ಬುಧ-ಚಂದ್ರ- ಇದು ಸೌರವ್ಯೂಹದಲ್ಲಿ ಭೂಮಿಯಿಂದ ದೂರದ ಕ್ರಮದಲ್ಲಿ ತಿರುಗುತ್ತಿರುವ ಆಕಾಶ ಕಾಯಗಳ ಪಟ್ಟಿ. ಶನಿ ಅತ್ಯಂತ ದೂರದಲ್ಲಿದ್ದರೆ, ಗುರು ಅದಕ್ಕಿಂತ ಸ್ವಲ್ಪ ಕಡಿಮೆ ದೂರದಲ್ಲಿದೆ. ಚಂದ್ರ ಅತ್ಯಂತ ಸಮೀಪದ ಪ್ರಕಾಶಿಕೆ.

ಇಲ್ಲಿ ಗಮನಿಸಬೇಕಾದ ವಿಷಯ ಒಂದಿದೆ. ರವಿ, ಚಂದ್ರರು ಗ್ರಹರಲ್ಲವೆಂಬುದು ಪ್ರಾಚೀನ ಜ್ಯೋತಿಷಿಗಳಿಗೆ ತಿಳಿದಿರಲಿಲ್ಲವೆಂದು ಕೆಲವು ವಿಜ್ಞಾನಿಗಳ ವಾದ. ಆದರೆ ಜ್ಯೋತಿಷ್ಯದ ಮೂಲಪುರುಷರಲ್ಲೊಬ್ಬರಾದ ವರಾಹಮಿಹಿರಾಚಾರ್ಯರು ತಮ್ಮ ಗ್ರಂಥಗಳಲ್ಲಿ ಕುಜಾದಿ ಪಂಚಗ್ರಹಗಳು (ಕುಜ, ಬುಧ, ಗುರು, ಶುಕ್ರ, ಶನಿ) ಅನ್ನುತ್ತಾರೆ. ವಿನಹಾ, ರವಿ ಚಂದ್ರರನ್ನು ಈ ಗುಂಪಿಗೆ ಅವರು ಸೇರಿಸಿಲ್ಲ. ರಾಹು, ಕೇತುಗಳಂತೂ ಗ್ರಹಗಳಲ್ಲವೇ ಅಲ್ಲ ಅಂತ ಬೃಹತ್ ಸಾಹಿತ್ಯದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಈಗ 'ಹೋರಾ' ಅನ್ನುವ ಒಂದು ಶಬ್ದದ ಅರ್ಥವನ್ನು ತಿಳಿಯೋಣ. ' ಅಹೋ-ರಾತ್ರಿ'ಯ ನಡುವಿನ ಎರಡು ಅಕ್ಷರಗಳೇ 'ಹೋರಾ' ಅಂದರೆ ಇಂಗ್ಲಿಷಿನ HOUR ಒಂದು ಘಂಟೆಯ ಕಾಲಾವಧಿ. ಪ್ರತೀ ದಿನ ಸೂರ್ಯೋದಯದ ನಂತರದ ಒಂದು ಘಂಟೆ. ಅದೇ ವಾರ ಸೂಚೀ ಗ್ರಹಕ್ಕೆ ಸಂಬಂಧಿಸಿದ್ದು. ಅಂದರೆ ಗುರುವಾರದ ಸೂರ್ಯೋದಯದ ನಂತರದ ಒಂದು ಘಂಟೆ ಗುರು ಹೋರಾ. ಉದಾ: ಸೂರ್ಯ ಉದಯ 6.40ಕ್ಕೆ ಅಂತಾದರೆ, 6.40ರಿಂದ 7.40ರ ಅವಧಿಯಲ್ಲಿ ಗುರು ಹೋರೆ ನಡೆಯುತ್ತದೆ. 7.40ರಿಂದ 8.40 (ಮುಂದಿನ 1 ಗಂಟೆ) ಕುಜ ಹೋರೆ. (ನಮ್ಮ ಸರಣಿಯಲ್ಲಿ ಗುರುವಿನ ನಂತರ ಕುಜ) ಹೀಗೇ ಗುರುವಾರದಂದು ತಲಾ 1 ಗಂಟೆಯ ಹೋರಾಗಳು ಹೀಗಿವೆ. ಗುರು-ಕುಜ -ರವಿ-ಶುಕ್ರ-ಬುಧ-ಚಂದ್ರ-ಶನಿ (ಬುಧ ಆದನಂತರ ಸಾಲಿನಲ್ಲಿ ಮೊದಲನೆಯದಾದ ಚಂದ್ರನ ಹೋರಾ) ಶನಿ ಆದನಂತರ ಪುನಃ ಮೊದಲಿನ ಸರಣಿ ಗುರುವಿನಿಂದ ಆರಂಭವಾಗುತ್ತದೆ. ಹೀಗೆ 3 ಆವೃತ್ತಿಗಳಾದಾಗ ಸೂರ್ಯೋದಯವಾಗಿ 21 ಗಂಟೆಗಳು ಕಳೆದಿರುತ್ತವೆ. 22ನೇ ಘಂಟೆ ಮತ್ತೆ ಗುರು, 23ನೇ ಘಂಟೆ ಕುಜ, 24ನೇ ಘಂಟೆ ರವಿ

ಹೋರಾ ಕಳೆದ ಮೇಲೆ 25ನೇ ಘಂಟೆ ಅಂದರೆ ಮರುದಿನ (ಶುಕ್ರವಾರ)ದ ಮೊದಲ ಹೋರೆ ಯಾವುದು ಆಗುತ್ತದೆ, ಹೇಳಿ? ರವಿಯ ನಂತರ ಶುಕ್ರ ಅಲ್ಲವೇ? ಶುಕ್ರವಾರದ ಮೊದಲ ಹೋರೆ ಶುಕ್ರನದೇ ತಾನೇ?

`ನಮ್ಮ ದಿನಗಳಿಗೆ ರವಿ, ಚಂದ್ರ, ಕುಜ (ಮಂಗಳ), ಬುಧ, ಗುರು, ಶುಕ್ರ, ಶನಿವಾರಗಳೆಂದು ಹೆಸರು ಬರಲು ಇದೇ ಕಾರಣ. ಚಂದ್ರ ವಾರದ ಮೊದಲ ಹೋರಾ ಚಂದ್ರನದೇ. ಅಲ್ಲಿಂದ ಲೆಕ್ಕ ಹಾಕಿದರೆ 24 ಘಂಟೆಗಳ ದಿನ ಮುಗಿದು 25ನೇ ಘಂಟೆಗೆ ಮಂಗಳನ ಹೋರಾವೇ ಬಂದು ಬಿಡುತ್ತದೆ.

ಇದನ್ನು ಇಷ್ಟು ತಿಳಿದುಕೊಂಡರೆ ಹೋರಾ-ಗಣಿತದಲ್ಲಿ ನೀವು 'ಪಾಸ್' ಆದಿರಿ. ದಿನದ ಯಾವುದೇ ಸಮಯದಲ್ಲಿ ಯಾವ ಹೋರೆ ನಡೆಯುತ್ತಿದೆ ಅನ್ನುವುದನ್ನು ಈಗ ನೀವು ಹೇಳಬಲ್ಲಿರಿ. ಇನ್ನೀಗ ಇದರ ಫಲಭಾಗಕ್ಕೆ ಬರೋಣ. ಕೆಳಗೆ ಕೊಟ್ಟಿರುವ ಗ್ರಹಗಳ ಗುಣಧರ್ಮಗಳನ್ನು ಮನನ ಮಾಡಿ.

ರವಿ (ಅಶುಭ ಗ್ರಹ) ಸರಕಾರದಿಂದ ಆಗಬೇಕಾದ ಕೆಲಸಗಳು ಆಗದಿರುವುದು, ತಂದೆ, ಬಿಸಿಲು, ಪ್ರಖರತೆ, ರಾಜತ್ವ, ಈಶ್ವರ

ಚಂದ್ರ (ಶುಭ-ಅಶುಭ) ಮನಸ್ಸು, ನೀರು, ತಾಯಿ, ಸರಕಾರದಿಂದ ಸಹಾಯ, ತಂಪು

ಕುಜ (ಅಶುಭ) ಕ್ರೀಡೆ, ಸಾಹಸ, ಪೋಲೀಸ್, ಸೇನಾಧಿಪತಿ, ಪುರುಷ, ಯಂತ್ರ ಸಾಮಗ್ರಿಗಳು

ಬುಧ (ಶುಭ) ಕೋಮಲತೆ, ವಿದ್ಯೆ, ಬುದ್ಧಿ, ಚುರುಕುತನ, ವೇಗ, ಲೇಖನ

ಗುರು (ಶುಭ) ಗೌರವ, ವೃದ್ಧ ತೇಜಸ್ವೀ ಪುರುಷ, ಹಿರಿಯರು, ನಿಧಾನ

ಶುಕ್ರ (ಶುಭ) ಲಲಿತ ಕಲೆಗಳು (ಸಿನಿಮಾ, ನಾಟಕ) ಅಲಂಕಾರ, ಭೋಗ ವಸ್ತುಗಳು, ತರುಣಿಯರು, ಪ್ರೀತಿ, ವಾಹನ, ಖರ್ಚು

ಶನಿ (ಅಶುಭ) ಆಯಾಸ, ಜಡತೆ, ಸೋಲು, ಕೈಗೆ ಕಾಲಿಗೆ ಪೆಟ್ಟು, ಕೊಳಕು ಕಪ್ಪು ಮನುಷ್ಯರು, ಮುದುಕರು, ಅತಿ ನಿಧಾನ

ಒಂದು ಕೆಲಸದ ಆರಂಭದಲ್ಲಿ ಅಥವಾ ಪ್ರಯಾಣ ಹೊರಡುವಾಗ ಯಾವ ಹೋರಾದ ಅವಧಿ ನಡೆಯುತ್ತದೆಯೋ, ಆ ಗ್ರಹದ ಫಲವು ಕೆಲಸದ ಉದ್ದಕ್ಕೂ, ಪ್ರಯಾಣ ಹೊರಟು ಹಿಂತಿರುಗಿ ಬರುವಲ್ಲಿಯವರೆಗೂ ನಡೆಯುತ್ತಿರುತ್ತದೆ. ಸುಂದರಾಂಗದ ಸುಂದರಿಯರು ನಿಮ್ಮ ಹಿಂದು ಮುಂದಿನಲಿ ಇರಬೇಕಾದರೆ ನೀವು ಶುಕ್ರ ಹೋರಾದಲ್ಲಿ ಮನೆ ಬಿಟ್ಟು ಹೊರಡಬೇಕು. ಶ್ರೀದೇವಿಗೆ ಪೂಜೆ, ಪ್ರಾರ್ಥನೆಗಳನ್ನು ಚಂದ್ರ ಹೋರಾದಲ್ಲಿ ಮಾಡಿದರೆ ಫಲಪ್ರಾಪ್ತಿ ಕೂಡಲೇ ಆಗುತ್ತದೆ. ಶನಿ ಹೋರಾದಲ್ಲಿ ಮನೆಬಿಟ್ಟರೆ ಬಸ್ಸಿನಲ್ಲಿ ನಿಂತು ಪ್ರಯಾಣಿಸಬೇಕಾಗುತ್ತದಲ್ಲದೆ, ಸುತ್ತಮುತ್ತ ವಾಸನೆ ಹೊಡೆಯುವ ಕೊಳಕು ಮನುಷ್ಯರ ಸಹವಾಸ ಉಂಟಾಗುತ್ತದೆ. ಹೊರಟ ಕೆಲಸದಲ್ಲೂ ಅಪಜಯ ಉಂಟಾಗುತ್ತದೆ.

ಹಾಗಂತ ಶನಿಗೆ ಛೀ, ಥೂ ಅನ್ನಬೇಡಿ. ಅನೇಕ ಸಲ ಶನಿಯಿಂದಾಗುವ ಉಪಕಾರ ಇನ್ನಾರಿಂದಲೂ ಆಗುವುದಿಲ್ಲ. ನೀವು ಕ್ರಿಕೆಟ್ ಮ್ಯಾಚ್ ಆಡುವಾಗ ಆರಂಭದ ಸಮಯವನ್ನು ನಿಗದಿ ಪಡಿಸುವಾಗ, ನಿಮ್ಮ ಎದುರಾಳಿ ಟೀಮಿನವರು ಶನಿ ಹೋರಾದಲ್ಲಿ ಹೊರಡುವ ಹಾಗೆ ನೋಡಿಕೊಳ್ಳಿ. ನಿಮಗೆ ಆಶ್ಚರ್ಯ ಅನಿಸುವ ಹಾಗೆ ವಿರೋಧಿಗಳು ಹೀನಾಯವಾದ ಸೋಲನ್ನು ಅನುಭವಿಸುತ್ತಾರೆ. ಒಬ್ಬರ ಸಹವಾಸವನ್ನು ತಪ್ಪಿಸಬೇಕು ಅಂತಿದ್ದರೆ ಶನಿ ಹೋರಾದಲ್ಲಿ ಅವರಿಗೊಂದು ಪತ್ರ ಬರೆಯಿರಿ. ನೀವು ಎಷ್ಟೇ ಸಿಹಿ ಶಬ್ದಗಳನ್ನು ಬರೆದಿದ್ದರೂ, ಆ ಅವರು ನಿಮ್ಮಿಂದ ತನ್ನಷ್ಟಕ್ಕೇ ತಾನಾಗೇ ದೂರವಾಗುತ್ತಾರೆ (ಹುಡುಗಿಯರು ಗಮನಿಸಿ) ನಿಮಗೆ ಅಂಚೆಯಲ್ಲಿ ಒಂದು ಪತ್ರ ಬಂದಿದ್ದರೆ - ಗುರು, ಬುಧ ಅಥವಾ ಶುಕ್ರ ಹೋರೆಯಲ್ಲಿ ಅದನ್ನು ಒಡೆದು ಓದಿ. ನಿಮಗೆ ಸಂತೋಷವಾಗುವ ಸುದ್ದಿ ಅದರಲ್ಲಿರುತ್ತದೆ. ಈಗ ಒಂದು ಸಂದೇಹ ನಿಮಗೆ ಬಂದಿದೆ "ಅವರು ಈಗಾಗಲೇ ಪತ್ರವನ್ನು ಬರೆದು ಮುಗಿಸಿ ಆಗಿದೆ ಅಲ್ಲವೇ.

ಹಾಗಿದ್ದರೆ ಶುಭ ಹೋರಾದಲ್ಲಿ ಓದಿದ ಮಾತ್ರಕ್ಕೆ ಅಲ್ಲಿರಬಹುದಾದ ಕೆಟ್ಟ ಸುದ್ದಿಗಳು ಒಳ್ಳೆಯವಾಗುವುದು ಹೇಗೆ?" ಅದಕ್ಕೆ ಉತ್ತರ ಹೀಗೆ - "ನಮ್ಮ ಮನಸ್ಸಿಗೆ ಸುಖ, ದುಃಖಗಳು ಉಂಟಾಗುವುದಕ್ಕೆ ಘಟನೆಗಳು ಕಾರಣವಲ್ಲ, ನಮ್ಮ ಮನಸ್ಸಿನ ಪ್ರವೃತ್ತಿ ಕಾರಣ. ಕೆಲವೊಮ್ಮೆ ಅತಿ ಸಣ್ಣ ವಿಚಾರವೂ ನಿಮ್ಮ ಮನಸ್ಸನ್ನು ಘಾಸಿಗೊಳಿಸುತ್ತವಾದರೆ, ಇನ್ನು ಕೆಲವು ಸಲ ನಿಮ್ಮ ಬೆನ್ನಿಗೆ ಬಾರಿಸಿದರೂ ಸಹಾ ನೀವು ಅದನ್ನು ಹಗುರವಾಗಿ ತೆಗೆದುಕೊಳ್ಳುತ್ತೀರಿ. ನಮ್ಮ ಮನಸ್ಸು ಪ್ರಸನ್ನವಾಗಿದ್ದರೆ ಯಾವ ಕೆಟ್ಟ ಸುದ್ದಿಯಿಂದಲೂ ನಮಗೆ ತೊಂದರೆ ಆಗದು. ಶುಭ ಹೋರಾದ ಅವಧಿಗಳಲ್ಲಿ ಮನಸ್ಸು ಪ್ರಸನ್ನವಾಗಿರುತ್ತದೆ. ಪರೀಕ್ಷೆಗೆ ಹೋಗುವಾಗ ಬುಧ ಹೋರೆಯಲ್ಲಿ ಹೊರಡಿ. ಸಾಮಾಜಿಕ ಗೌರವವನ್ನು ಪಡೆಯಬೇಕೆಂದಿದ್ದರೆ ಗುರು ಹೋರಾದ ಸಹಾಯ ಪಡೆಯಿರಿ.

ಅಶುಭವಾರದ ಅಶುಭ ಹೋರಾಗಳು ಹೆಚ್ಚು ಕ್ರೂರವಾಗಿರುತ್ತವೆ. ಶನಿವಾರ, ಮಂಗಳವಾರಗಳ ಕುಜ ಹೋರೆ, ಗುರುವಾರದ ಕುಜ ಹೋರೆಗಿಂತ ಹೆಚ್ಚು ಕೆಟ್ಟದು. ಚಂದ್ರನ ಬಗ್ಗೆ ಬರೆಯುವಾಗ ಶುಭ-ಅಶುಭ ಅಂತ ಬರೆದೆವಲ್ಲಾ. ಹಾಗಂದರೆ ಏನು? ಚಂದ್ರನಿಗೆ ವೃದ್ಧಿ (ಹುಣ್ಣಿಮೆಯತ್ತ) ಹಾಗೂ ಕ್ಷೀಣತ್ವಗಳು (ಅಮಾವಾಸ್ಯೆಯತ್ತ) ಇರುವುದರಿಂದ ಹುಣ್ಣಿಮೆಗೆ ಹತ್ತಿರವಿರುವ ಚಂದ್ರನು ಶುಭನೂ, ಅನ್ಯಥಾ ಅಶುಭನೂ ಆಗುತ್ತಾನೆ.

ಹೋರಾದ ಬಗ್ಗೆ ಶಾಸ್ತ್ರದಲ್ಲಿ ಇಷ್ಟೇ ಇರುವುದಲ್ಲ. ಜ್ಯೋತಿಷ್ಯದ ಹೆಚ್ಚಿನ ಜ್ಞಾನ ಇರುವವರು ಈ ವಿಷಯದಲ್ಲಿ ಇನ್ನಷ್ಟು ಸೂಕ್ಷ್ಮವಾಗಿ ಫಲಾನುಭವ ಪಡೆಯುತ್ತಾರೆ. ಸಾಮಾನ್ಯವಾಗಿ ಶುಭ ಕಾರ್ಯಗಳಲ್ಲಿ ರಾಹುಕಾಲವನ್ನು ತಪ್ಪಿಸುತ್ತಾರೆ. ಆದರೆ ಒಳ್ಳೆಯ ಹೋರಾದ ಶುಭ ಫಲವು ರಾಹುಕಾಲದ ದೋಷವನ್ನು ನಿವಾರಿಸುತ್ತದೆ ಅಂತ ಬಲ್ಲವರು ಹೇಳುತ್ತಾರೆ.

ಒಂದು ಘಂಟೆಯ ಅವಧಿಯಲ್ಲಿ ಕಲಿತುಕೊಳ್ಳಬಹುದಾದ ಈ ಒಂದು ಘಂಟೆಯ ಜ್ಯೋತಿಷ್ಯ (ಹೋರಾ = 1 ಘಂಟೆ)ವನ್ನು ನಿಮ್ಮ ಬದುಕಿನಲ್ಲಿ ಅಳವಡಿಸಿ ನಿಮಗೆ ಬೇಕಾದದ್ದನ್ನು ಪಡೆಯಿರಿ ಅನ್ನುವ ಶುಭ ಹಾರೈಕೆಯೊಂದಿಗೆ ಈ ಲೇಖನವನ್ನು ಇಲ್ಲಿಗೆ ಮುಗಿಸೋಣ.

★ ★ ★

# "ದೇವಸ್ಥಾನ-ಸಂಸ್ಕೃತಿ" - ಒಂದು ಕಿರು ಟಿಪ್ಪಣಿ

• ಶ್ರೀ ಉದ್ಯಾವರ ಮಾಧವ ಆಚಾರ್ಯ,

"ಸಂಸ್ಕೃತಿ" ಎಂಬ ಬದುಕಿನ ಸೊಗಸನ್ನು ರೂಪಿಸಿದ ಈ ಜಗತ್ತು ಈ ಕ್ಷಣದಲ್ಲಿ ಸಾಮೂಹಿಕವಾಗಿ ಹೇಗಿದೆ? "ಜಾಗತಿಕ ಸಂಘರ್ಷ ಪರಿಸ್ಥಿತಿ" ಎಂಬ ಇತ್ತೀಚೆಗೆ ಪ್ರಕಟವಾದ ವರದಿಯ ಪ್ರಕಾರ ಸದ್ಯದ ಜಗತ್ತು ವಿವಿಧ ಭಾಗಗಳಲ್ಲಿ ಸುಮಾರು ಮೂವತ್ತನಾಲ್ಕು ಯುದ್ಧಗಳನ್ನು ಎದುರಿಸಿಕೊಂಡಿದೆ. ನೂರ ಹನ್ನೆರಡರಷ್ಟು ಆಂತರಿಕ ಸಂಘರ್ಷಗಳಿಗೆ ಈಡಾಗಿದೆ. ವರ್ಷ ಒಂದರ ಒಂದು ಟ್ರಿಲ್ಲಿಯ ಡಾಲರುಗಳಷ್ಟು ಹಣ ಸೈನ್ಯಕ್ಕಾಗಿ ವೆಚ್ಚವಾಗುತ್ತಿದೆ. ಇಂಥ ಸಮರಗಳಿಂದಾಗಿ ಮಿಲಿಯ ಗಟ್ಟಲೆ ಜನ ಸಾವನ್ನಪ್ಪುತ್ತಿದ್ದಾರೆ ಇಲ್ಲವೇ ನಿರ್ಗತಿಕರಾಗುತ್ತಿದ್ದಾರೆ. ಸಮರ ವೆಚ್ಚ ಎಷ್ಟು ದುಬಾರಿಯೋ ಅಷ್ಟೇ ಪರಿಣಾಮರಹಿತವಾದುದು. ಏನನ್ನೂ ಸಾಧಿಸಲಾರದೆ ವಿಫಲವಾಗುವ ಒಂದು ಚಟುವಟಿಕೆ. ಒಂದು ಅಧ್ಯಯನದ ಪ್ರಕಾರ ಮಿಲಿಟರಿಗಾಗಿ ವ್ಯಯವಾಗುವ ಮೊಬಲಗಿನ ಕಾಲಂಶವನ್ನು ಕಾಲವು ರಚನಾತ್ಮಕ ವಿಷಯಗಳಿಗೆ ವೆಚ್ಚ ಮಾಡಿದರೆ ಈ ಜಗತ್ತು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳಾದ ಬರಗಾಲ, ಪರಿಸರ ಮಾಲಿನ್ಯ, ಆಮ್ಲ ಮಳೆ, ಹಸಿವು, ನಿರುದ್ಯೋಗ ಇತ್ಯಾದಿಗಳನ್ನು ಸುಲಭವಾಗಿ ಪರಿಹರಿಸುವುದು ಸಾಧ್ಯ. ಅಂಥ ಪರಿಹಾರ ಈ ಜಗತ್ತಿಗೆ ಬೇಡವೇ? ಸಂಘರ್ಷರಹಿತವಾದ ಶಾಂತಿ ಬದುಕನ್ನು ಶ್ರೀಮಂತಗೊಳಿಸುವುದು ಬೇಡವೇ? ಈ ಎಲ್ಲ ಅನಾಹುತಗಳನ್ನೇ ಮೀರುವಂಥ 'ತೃತೀಯ ಜಾಗತಿಕ ಸಮರ' ಯಾವ ಕ್ಷಣದಲ್ಲೂ ಸ್ಫೋಟಗೊಳ್ಳಬಹುದು ಎಂಬ ಕಾವುಗೊಂಡು ಮೊಟ್ಟೆ ಬಿರಿಯುವ ಸ್ಥಿತಿಯಲ್ಲಿ ಈ ಜಗತ್ತು ಏಕಿದೆ? ರಾಜಕೀಯ ನೆಲೆಯಲ್ಲಿ, ಸಾಮಾಜಿಕ ದೃಷ್ಟಿಕೋನದಿಂದ ಅಥವಾ ಆರ್ಥಿಕ ಚೌಕಟ್ಟಿನಲ್ಲಿ ಈ ಪ್ರಶ್ನೆಗೆ ಉತ್ತರವಿದೆ. ಹಿಟ್ಲರನನ್ನು ಕೆಲವು ಅನಿವಾರ್ಯ ಕ್ಷಣಗಳು ಕಾದಿರಬಹುದು. ಸಾಮಾನ್ಯರಾದ ನಾವು ನೀವು ಈ ಅನಿವಾರ್ಯಗಳ ನಡುವೆ ಬದುಕಬೇಕಾದರೆ ಅಂಥ ಸಿದ್ಧಾಂತಗಳನ್ನು ಮೀರಿದ ಒಂದು ಆಧಾರವನ್ನು ನಮ್ಮದಾಗಿಸಿಕೊಳ್ಳಬೇಕಾಗುತ್ತದೆ. ನಂಬಿಕೆಯನ್ನು ಅರಗಿಸಿಕೊಳ್ಳಬೇಕಾಗುತ್ತದೆ. ಶ್ರದ್ಧೆಯನ್ನು ಬೆಳೆಸಿಕೊಳ್ಳಬೇಕಾಗುತ್ತದೆ. ಸಮನಾದ, ಸಮಚಿತ್ತ, ಸಮಬಗೆಯನ್ನು ಬದುಕಿನ ಧಾಟಿಯಾಗಿಸಬೇಕಾಗುತ್ತದೆ. ವಿಶ್ವರೂಪ ದರ್ಶನವನ್ನು ಕೈಚೆಲ್ಲಿದ ಅರ್ಜುನನಂತೆ ನಾವು ಹೊಂದಬೇಕಾಗುತ್ತದೆ. ಸರಳವಾಗಿ ಹೇಳುವುದಾದರೆ "ಈಸಬೇಕು ಇದ್ದು ಜಯಿಸಬೇಕಾಗುತ್ತದೆ". ಬೆಟ್ಟದಾ ಮೇಲೊಂದು ಮನೆಯ ಮಾಡಿ ಮೃಗಗಳಿಗೆ ಅಂಜದೆ ಬದುಕಬೇಕಾಗುತ್ತದೆ. ಬರಿದೆ ಅರಿವಿಗಿಂತ ಅರಿತು ಧ್ಯಾನಿಸುವ ಒಂದು ಮನೋಸ್ಥಿತಿಯನ್ನು ನಾವು ಪಡೆಯಬೇಕಾಗುತ್ತದೆ.

ನಮ್ಮ ಹಿರಿಯರು, ಋಷಿಗಳು, ದಾರ್ಶನಿಕರು, ಚಿಂತಕರು ಈ ಸಾಧನೆಗಾಗಿ ಅನೇಕ ಮಾಧ್ಯಮಗಳನ್ನು ರೂಪಿಸಿದ್ದಾರೆ, ರಚಿಸಿದ್ದಾರೆ. ಮುಂದಿನ ಜನಾಂಗಕ್ಕಾಗಿ ಉಳಿಸಿದ್ದಾರೆ. "ದೇವಸ್ಥಾನ" ಎಂಬುದು ಅಂಥ ಒಂದು ಮಾಧ್ಯಮ. ಸಾಧನ. ಸಾನ್ನಿಧ್ಯ. ಅದು ಕೇವಲ ಕಲ್ಲಲ್ಲ. ಇಟ್ಟಿಗೆಯಲ್ಲ. ಕಟ್ಟಿಗೆಯಲ್ಲ. ಪೌಳಿಯಲ್ಲ. ಮುಷ್ಕರಣೆಯಲ್ಲ. ಎತ್ತರದೆಡೆಗೆ ಚಿಮ್ಮುವ ಗೋಪುರವಲ್ಲ. ಕೇವಲ ಕಲಶವಲ್ಲ. ಎಲ್ಲವೂ ಹೌದು ಮತ್ತು ಈ ಎಲ್ಲವನ್ನೂ ಮೀರಿದ ಇನ್ನೇನೋ ಇದೆ. ಅದೇ ಈ ಮಾಧ್ಯಮದ ಮೂಲಕ ನಾವು ಪಡೆಯಬೇಕಾದ ಒಂದು ನೆಮ್ಮದಿ. ಬದುಕನ್ನೆದುರಿಸಲು ನಮ್ಮ ನರನಾಡಿಗಳಲ್ಲಿ ಹೊರ ಹೊಮ್ಮಬೇಕಾದ ಶಕ್ತಿ. ಸಹಜ ಧರ್ಮವನ್ನು ಕಾಣಬೇಕಾದ ಒಂದು ಬೆಳಕು. ಭಗವಂತನ ಶರೀರದಂತಿರುವ ಈ ಚರಾಚರ ವಿಶ್ವವೇ ಒಂದು ಸಾಧನೆಗೆ ಕ್ಷೇತ್ರ ಎಂಬ ಅರಿವಿನ

ಶ್ರೀ ಉದ್ಯಾವರ ಮಾಧವ ಆಚಾರ್ಯ
ಸಿರಿಮನೆ 6-1-82
ಅಂಚೆ: ಚಿಟ್ಪಾಡಿ - 576 101
ಉಡುಪಿ ದ.ಕ.

ಕ್ಷೇತ್ರಜ್ಞನ ಎದುರು ದೇವಸ್ಥಾನ ಆ ಕ್ಷೇತ್ರದ ಒಂದು ಪ್ರತಿಬಿಂಬ. ಜೇನುಹುಳಕ್ಕೆ ರಂಧ್ರಗಳ ತಟ್ಟೆ ಒಂದಷ್ಟು ಅಂಟಿನ ಹಂದರವಲ್ಲ. ಅದು ವ್ಯವಸ್ಥೆ. ಅದರ ಕಾಯಕಕ್ಕೆ ಕಾರ್ಯಾಗಾರ. ಅದು ಎಲ್ಲೆಂದರಲ್ಲಿ ತಾನು ಸುರಿಸುವ ಜೇನನ್ನು ಸುರಿಸಲಾರದು. ಆ ಧಾರೆಗಾಗಿ ತಟ್ಟೆಯ ನಿರ್ಮಾಣ. ತಟ್ಟೆ ಇಲ್ಲದೆ ಧಾಳಿ ಅಸಾಧ್ಯ. ಧಾರೆ ಇಲ್ಲದೆ ತಟ್ಟೆ ಒಣಕಲು ಪಂಜರ. ದೇವಸ್ಥಾನಗಳ ನಿರ್ಮಾಣದ ಹಿಂದೆ ಅಂಥ ಒಂದು "ಧಾರಾ ಸಂಕಲ್ಪ" ಕೆಲಸ ಮಾಡಿದೆ. ಆರಾಧನೆಯನ್ನು ಜೀವನದ ಭಾಗವಾಗಿರುವ ಈ ತವಕಕ್ಕೆ ದೇವಸ್ಥಾನದ ಕಲ್ಪನೆ ಒಂದು ಸಂಕೇತ. ಈ ಆರಾಧನೆಗೆ ಹಲವು ಮುಖಗಳು. ಏಕಾಂತ ಧ್ಯಾನ, ಮನನ, ಅನುಭಾವ ಸಮರ್ಪಣ ಒಂದೆಡೆಯಾದರೆ ಇನ್ನೊಂದೆಡೆ ಬದುಕನ್ನು ತುಂಬಿಸುವ ಹಾಗೂ ಬಿಂಬಿಸುವ ಸೊಗಸಿನ ಕಲೆ ಎಂಬ ಬಾಹ್ಯ ವಿನ್ಯಾಸವನ್ನು ಆಂತರಿಕ ಅನುಭವಕ್ಕಾಗಿ ದುಡಿಸಿಕೊಳ್ಳುವುದೂ ಸಾಧ್ಯ. ಭಾರತದ ಸಂಸ್ಕೃತಿಯನ್ನು ಗುರುತಿಸಬೇಕಾದುದು ಈ ಸಾಮರಸ್ಯದಲ್ಲಿ. "ದುಡಿ" ದುಡಿಮೆಯ ಅಂಗವಾಗುತ್ತ "ಗುಡಿ" ಎಡೆಗೆ ಸಾಗುವ ಆಧ್ಯಾತ್ಮಿಕ ಸಾಧನವಾಗುವಂಥ ಒಂದು ಪ್ರಕ್ರಿಯೆಯಲ್ಲಿ. ಕೋಲದ ಚಪ್ಪರದಿಂದ ಹಿಡಿದು ಅಷ್ಟಬಂಧ ಹೊಂದಿರುವ ಗರ್ಭಗುಡಿಯ ತನಕ ಒಂದು ವಿಶಿಷ್ಟ ಪಾವಿತ್ರ್ಯದ ಕವಚ ಹೊಂದಿ ಕಲೆ ಪಡೆದ ವಿಭಿನ್ನ ಸ್ವರೂಪ ಜನಸಂಸ್ಕೃತಿಯ ಸಂಕೀರ್ಣತೆಯನ್ನು ಪ್ರತಿಬಿಂಬಿಸುತ್ತದೆ. ರಂಗಪೂಜೆ, ಬಲಿ, ದರ್ಶನ, ಅಷ್ಟಾವಧಾನ ಸೇವೆ, ಮೆರವಣಿಗೆ, ಉತ್ಸವ, ನೃತ್ಯ, ರಂಗೋಲಿ, ನಾಟಕ, ಬಯಲಾಟ, ಭಜನೆ, ಹಾಡು ಕುಣಿತ ಹೀಗೆ ಹಲವು ರೂಪಗಳಲ್ಲಿ - ಹಲವು ಸಾಧನಗಳನ್ನು, ರಂಗಸ್ಥಳಗಳನ್ನು, ಬಣ್ಣಗಳನ್ನು, ಬೆಳಕಿನ ಚೌಕಟ್ಟನ್ನು ಪಡೆದು ಸಿರಿಸಿಂಗಾರದಿಂದ ಆಕರ್ಷಕವಾಗಿ ವಿಸ್ತಾರಗೊಂಡ ಭಾರತೀಯ ಕಲೆ ಪುರಾಣದ ಹೂರಣ ಪಡೆದುದರಿಂದಲೇ ಏನೋ ಜನಜೀವನದೊಂದಿಗೆ ಬೆರೆತುಕೊಂಡೇ ಇವತ್ತಿಗೂ ತನ್ನ ಪಾವಿತ್ರ್ಯವನ್ನುಳಿಸಿಕೊಂಡಿದೆ. ಪುರಾಣದ ಹೂರಣಕ್ಕೆ ಆಧಾರ ದೇವಸ್ಥಾನದ ಆರಾಧನೆ. ದೇವಸ್ಥಾನದಲ್ಲಿ ದೇವರನ್ನು ಕಾಣುವ, ಪೂಜಿಸುವ, ಹರಕೆ ಸಂದಾಯ ಮಾಡುವ ಒಂದು ಸಾಮಾಜಿಕ ನಡವಳಿಕೆ. ಭಾರತದ ಉದ್ದಗಲಕ್ಕೂ ಹರಡಿರುವ ಗ್ರಾಮ ದೇವಸ್ಥಾನಗಳು ಸಾಂಸ್ಕೃತಿಕ ಜೀವನದ ರಂಗಭೂಮಿಯಾಗಿರುವುದು ಈ ಅರ್ಥದಲ್ಲಿ. ಆದುದರಿಂದ ದೇವರು ಮೆಚ್ಚುವಂಥ ಸಂಸ್ಕೃತಿ ನಮ್ಮದಾಗಬೇಕಲ್ಲವೇ?

★ ★ ★

ಬ್ರಹ್ಮ ಕಲಶಾಭಿಷೇಕದ ಅವಿಸ್ಮರಣೀಯ ಪ್ರಾಮುಖ್ಯ ಸನ್ನಿವೇಶಗಳು



ಶ್ರೀ ದುರ್ಗಾ ಪರಮೇಶ್ವರೀ ದೇವಿಗೆ ಅಭಿಷೇಕಗೊಳ್ಳಲು ಸಿದ್ಧವಾಗಿರುವ ಕಲಶಗಳಿಂದ ಆವೃತವಾದ ಅಲಂಕೃತ ಮಹಾಕುಂಭ.



ಶ್ರೀ ಮಹಿಷ ಮರ್ದಿನಿ ದುರ್ಗಾ ಪರಮೇಶ್ವರಿಗೆ ಕಲಶಾಭಿಷೇಕ.



ಪವಿತ್ರ ಶ್ರೀ ಚಕ್ರ



ಬ್ರಹ್ಮ ಕಲಶೋತ್ಸವ ಸನ್ನಾಹ ನಡೆಸುತ್ತಿರುವ ವೃಂದ



ವಿಘ್ನ ವಿನಾಶಕ ಶ್ರೀ ಮಹಾಗಣಪತಿಯ ಅಭಿಷೇಕಕ್ಕಾಗಿ ಸರ್ವಾಲಂಕಾರ ಭೂಷಿತ ಮಹಾಕುಂಭ



ಶ್ರೀ ಮಹಾ ಗಣಪತಿಗೆ ಮಹಾ ಕುಂಭಾಭಿಷೇಕ



ಶ್ರೀ ದುರ್ಗಾ ಪರಮೇಶ್ವರಿ ದೇವಿಗೆ ಅಭಿಷೇಕ ಮಾಡಲು ಬ್ರಹ್ಮಕಲಶವನ್ನು ವಿಜೃಂಭಣೆಯಿಂದ ಕೊಂಡೊಯ್ಯುತ್ತಿರುವುದು.




ಜನಮನ ಸೂರೆಗೊಂಡ ಭಕ್ತಿ ಸಂಗೀತ ಕಾರ್ಯಕ್ರಮ ಶ್ರೀ ಸುಬ್ರಮಣ್ಯ ಮಠಾಧೀಶ ಶ್ರೀ ಶ್ರೀ ವಿದ್ಯಾಭೂಷಣ ತೀರ್ಥ ಸ್ವಾಮೀಜಿಯವರಿಂದ

ಪ್ರಧಾನ ಕಲಶಾಭಿಷೇಕದ ಪ್ರಸನ್ನ ಪೂಜೆ





ಮೈರೊಮಾಂಚನಗೊಳಿಸಿದ ಗಾನಸುಧೆ ರಸಮಂಜರಿ ಕಾರ್ಯಕ್ರಮ ಪುತ್ತೂರು ನರಸಿಂಹ ನಾಯಕ್ ಮತ್ತು ಬಳಗದವರಿಂದ



ಬ್ರಹ್ಮ ಕಲಶೋತ್ಸವಕ್ಕೆ ಸಿದ್ಧವಾಗಿರುವ ಶ್ರೀ ದುರ್ಗಾ ಪರಮೇಶ್ವರಿದೇವಿಯ ಪುಷ್ಪಾಲಂಕಾರ ಭೂಷಿತ ತೀರ್ಥ ಮಂಟಪ.



ಹತ್ತು ಸಹಸ್ರಕ್ಕೂ ಮಿಕ್ಕಿ ಜನರು ಭಾಗವಹಿಸಿದ ಸಾಮೂಹಿಕ ಭೋಜನ



ಶ್ರೀ ಪೇಜಾವರ ಮಠಾಧೀಶ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಆಶೀರ್ವಚನ



ಶ್ರೀ ಅದಮಾರು ಮಠಾಧೀಶ ಶ್ರೀ ಶ್ರೀ ವಿಶ್ವಪ್ರಿಯತೀರ್ಥ ಶ್ರೀಪಾದಂಗಳವರಿಂದ ಆಶೀರ್ವಚನ



ಸ್ವಾಮಿದ್ವಯರಿಗೆ ಭಕ್ತಿ ಪೂರ್ವಕವಾಗಿ ಶ್ರೀ ದೇವಿಯ ಸನ್ನಿಧಿಯಲ್ಲಿ ಸ್ವಾಗತಿಸುತ್ತಿರುವ ಅರ್ಚಕ
ಹಾಗೂ ಮೊಕ್ತೇಸರರಾದ ವೇ।ಮೂ। ಶ್ರೀ ಜಯರಾಮ ಆಚಾರ್ಯರು



ಬ್ರಹ್ಮಶ್ರೀ ಹರಿಕೃಷ್ಣ ತಂತ್ರಿಗಳವರಿಗೆ ಆಡಳಿತ ಮೊಕ್ತೇಸರರಾದ
ಶ್ರೀ ಎಂ. ಜಗಧೀಶ್ಚಂದ್ರ ಹೆಗ್ಡೆಯವರಿಂದ ಸನ್ಮಾನ




ತಮ್ಮೂರಾದ ಮುಂಡ್ಕೂರಿನ ಬಗ್ಗೆ ತುಂಬುಹೃದಯದಿಂದ ಭಾಷಣ ಮಾಡುತ್ತಿರುವ ಸಮಾರಂಭದ ಅಧ್ಯಕ್ಷ ಶ್ರೀ ಜೆ.ವಿ. ಶೆಟ್ಟಿಯವರು. (ಅಧ್ಯಕ್ಷ ಹಾಗೂ ಆಡಳಿತ ನಿರ್ದೇಶಕರು, ಕೆನರಾ ಬ್ಯಾಂಕ್)



ಉದ್ಯಾವರ ಶ್ರೀ ಮಾಧವ ಆಚಾರ್ಯರವರಿಂದ ''ದೇವಸ್ಥಾನಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು'' ವಿಶೇಷ ವಿಶ್ಲೇಷಣೆ




ಬ್ರಹ್ಮಕಲಶೋತ್ಸವದ ಸುಸಂದರ್ಭದಲ್ಲಿ ಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ
ಶ್ರೀಪಾದಂಗಳವರ ದಿವ್ಯಹಸ್ತದಿಂದ ಕೆನರಾ ಬ್ಯಾಂಕಿನ ಅಧ್ಯಕ್ಷ ಹಾಗೂ
ಆಡಳಿತ ನಿರ್ದೇಶಕ ಶ್ರೀ ಜೆ.ವಿ. ಶೆಟ್ಟಿಯವರಿಗೆ ಸನ್ಮಾನ.



70 ವರ್ಷಗಳಿಂದ ದೇವಳದಲ್ಲಿ ಸೇವೆ ಸಲ್ಲಿಸುತ್ತಿರುವ
ಶ್ರೀ ಚಿನ್ನಯ ಸಪಳಿಗರಿಗೆ ಶ್ರೀಯುತ ಜೆ.ವಿ. ಶೆಟ್ರವರಿಂದ ಸನ್ಮಾನ.



ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರಿಂದ, ಬ್ರಹ್ಮಕಲಶೋತ್ಸವದ ಮುನ್ನ ಸಾಂಕೇತಿಕವಾಗಿ ಸ್ಮರಣ ಸಂಚಿಕೆ 'ದುರ್ಗಾ ಸ್ಮೃತಿ' ಯ ಬಿಡುಗಡೆ



ಜನರಲ್ಲಿ ಹುದುಗಿರುವ ಭಕ್ತಿಭಾವನೆಗಳಿಗೆ ನವ ಚೇತನ ತುಂಬುತ್ತಿರುವ ಶ್ರೀ. ಡಿ. ವೀರೇಂದ್ರ ಹೆಗ್ಗಡೆಯವರು

॥ ಓಂ ನಮೋ ವ್ರಾತಪತಯೇ ನಮೋ ಗಣಪತೆಯೇ ನಮೋ ಪ್ರಮಥಪತೆಯೇ
ನಮಸ್ತೇ ಅಸ್ತು ಲಂಬೋದರಾಯ ಏಕದಂತಾಯ ವಿಘ್ನನಾಶಿನೇ ಶಿವಸುತಾಯ
ಶ್ರೀ ವರದಮೂರ್ತಯೇ ನಮಃ ॥



ಶ್ರೀ ಮಹಾಗಣಪತಿ ದೇವರು

